ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 22 ಗುರುವಾರ 2023

ಸಂಪುಟ: 44 | ಸಂಚಿಕೆ: 67 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಅರಮನೆ ಅಂಗಳದಲ್ಲಿ
ಯೋಗ ವೈಭೋಗ

ವಿದ್ಯಾರ್ಥಿಗಳು, ಯೋಗಾಸಕ್ತರು, ಸರ್ಕಾರಿ ಅಧಿಕಾರಿಗಳು, ಸಿಬ್ಬಂದಿ, ಸಾರ್ವಜನಿಕರು ಸೇರಿ ಸಾವಿರಾರು ಮಂದಿ ಸಾಮೂಹಿಕ ಯೋಗ ಪ್ರದರ್ಶನ



ಮೈಸೂರು, ಜೂ. 21(ಆರ್‌ಕೆ)–ಸಾಂಸ್ಕೃತಿಕ ನಗರಿ ಮೈಸೂರು ಅರಮನೆ ಆವರಣದಲ್ಲಿ ಬುಧವಾರ ಸಾವಿರಾರು ಮಂದಿ ಯೋಗ ಪ್ರದರ್ಶನ ಮಾಡಿದರು.

ಮೈಸೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಆಯುಷ್ ಇಲಾಖೆ, ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಮಹಾವಿದ್ಯಾಲಯ, ಸರ್ಕಾರಿ ಆಯುರ್ವೇದ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಯುವಜನ ಮತ್ತು ಕ್ರೀಡಾ ಇಲಾಖೆ ಹಾಗೂ ವಿವಿಧ ಯೋಗ ತರಬೇತಿ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಸಾಮೂಹಿಕ ಯೋಗ ಪ್ರದರ್ಶನ ಕಾರ್ಯಕ್ರಮದಲ್ಲಿ ಸಾವಿರಾರು ಮಂದಿ ಪಾಲ್ಗೊಂಡಿದ್ದರು. 'ವಸುದೈವ ಕುಟುಂಬಕಂ' ಘೋಷಣೆ ಹಾಗೂ 'ಹರ್ ಘರ್ ಆಂಘನ್ ಯೋಗ್' ಎಂಬ ಧ್ಯೇಯದೊಂದಿಗೆ ಆಯೋಜಿಸಿದ್ದ 9ನೇ ಅಂತರರಾಷ್ಟ್ರೀಯ ಯೋಗ ದಿನವನ್ನು ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಜಮಾತ್ ಇ ಇಸ್ಲಾಮ್‌ನ ಜನಾಬ್ ತಾಜ್‌ಮುಲ್ ತನ್ವೀರ್ ಪಾಷಾ, ರೆವರೆಂಡ್ ಬಿಷಪ್ ರಾಬಿನ್ ಅವರು ಉದ್ಘಾಟಿಸಿದರು.

ಬುಧವಾರ ಇಡೀ ವಿಶ್ವವೇ ಅಂತರರಾಷ್ಟ್ರೀಯ ಯೋಗ ದಿನ ಆಚರಿಸಿದ್ದು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ವಿಶ್ವಸಂಸ್ಥೆ ಪ್ರಧಾನ ಕಚೇರಿ ನ್ಯೂಯಾರ್ಕ್‌ನಲ್ಲಿ ನಡೆದ ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಮೈಸೂರಿನ ಅರಮನೆ ಅಂಗಳದಲ್ಲಿ ಬೆಳಗ್ಗೆ 6.25 ಗಂಟೆಗೆ ಆರಂಭವಾದ ಯೋಗ ಪ್ರದರ್ಶನ ಹಾಗೂ ವೇದಿಕೆ ಕಾರ್ಯಕ್ರಮ ಬೆಳಗ್ಗೆ 8.15 ಗಂಟೆಗೆ ಮುಕ್ತಾಯವಾಯಿತು.

● 9ನೇ ಪುಟಕ್ಕೆ



ವಿಶ್ವಸಂಸ್ಥೆಯಲ್ಲಿ ಪ್ರಧಾನಿ ಮೋದಿ ಯೋಗ ಮಂತ್ರ; ಗಿನ್ನಿಸ್ ದಾಖಲೆಗೆ ಸೇರ್ಪಡೆ

ನ್ಯೂಯಾರ್ಕ್: ಭಾರತ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆಯ ಪ್ರಧಾನ ಕಚೇರಿಯ ಆವರಣದಲ್ಲಿ ಬುಧವಾರ ನಡೆದ 9ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಗಿನ್ನಿಸ್ ದಾಖಲೆ ಸೇರಿದೆ. ಮೋದಿ ನೇತೃತ್ವದಲ್ಲಿ 'ವಸುದೈವ ಕುಟುಂಬಕಂ' ಘೋಷವಾಕ್ಯದಲ್ಲಿ ನಡೆದ ಯೋಗಾಭ್ಯಾಸದಲ್ಲಿ ಅತೀ ಹೆಚ್ಚು ದೇಶಗಳ ಪ್ರತಿನಿಧಿಗಳು ಭಾಗವಹಿಸುವ ಮೂಲಕ ಗಿನ್ನಿಸ್ ದಾಖಲೆ ನಿರ್ಮಿಸಿದ್ದಾರೆ ಈ ಯೋಗ ದಿನಾಚರಣೆಯಲ್ಲಿ ನ್ಯೂಯಾರ್ಕ್ ಮೇಯರ್, ವಿಶ್ವಸಂಸ್ಥೆ ಅಧಿಕಾರಿಗಳು ಸೇರಿದಂತೆ 180 ದೇಶಗಳ ಹಲವು ಗಣ್ಯರು ಭಾಗವಹಿಸಿದ್ದರು.



ಇಂದು ಭಾರತೀಯ ಕಾಲಮಾನ ಸಂಜೆ 5.30ರ ವೇಳೆಗೆ ಪ್ರಧಾನಿ ನರೇಂದ್ರ ಮೋದಿಯವರು ನ್ಯೂಯಾರ್ಕ್‌ನಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆಗೆ ಗೌರವ ನಮನ ಸಲ್ಲಿಸಿದ ನಂತರ ವಿಶ್ವಸಂಸ್ಥೆ ಕಚೇರಿ ಆವರಣದಲ್ಲಿ 9ನೇ ಅಂತರರಾಷ್ಟ್ರೀಯ ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಕಾರ್ಯಕ್ರಮ ಆರಂಭಕ್ಕೂ ಮುನ್ನಾ ಮಾತನಾಡಿದ ಅವರು, ಯೋಗ ಭಾರತದಿಂದ ಬಂದಿದೆ. ಇದು ಅತ್ಯಂತ ಪುರಾತನ ಸಂಪ್ರದಾಯವಾಗಿದ್ದು, ಯೋಗವು ಹಕ್ಕು ಸ್ವಾಮ್ಯಗಳು ಹಾಗೂ ಪೇಟೆಂಟ್‌ನಿಂದ ಮುಕ್ತವಾಗಿದೆ. ಯೋಗ ಮಾಡಲು ಯಾವುದೇ ರಾಯಲ್ಟಿ ಪಾವತಿಸಬೇಕಿಲ್ಲ. ಯೋಗ ಯೂನಿವರ್ಸಲ್ ಆಗಿದೆ ಎಂದರು.

ಯೋಗದ ಶಕ್ತಿಯನ್ನು ಆರೋಗ್ಯಕರ ಹಾಗೂ ಸಂತೋಷವಾಗಿರಲು ಮಾತ್ರವಲ್ಲದೇ, ಒಬ್ಬರಿಗೊಬ್ಬರು ಪರಸ್ಪರ ದಯೆ ತೋರಲು ಬಳಸೋಣ. ಸೌಹಾರ್ದ ಸೇತುವೆಗಳು ಶಾಂತಿಯುತ ಜಗತ್ತು, ಸ್ವಚ್ಛ, ಹಸಿರು ಮತ್ತು ಸುಸ್ಥಿರ ಭವಿಷ್ಯವನ್ನು ನಿರ್ಮಿಸಲು ಯೋಗದ ಶಕ್ತಿಯನ್ನು ಬಳಸಿ. ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯದ ಗುರಿಯನ್ನು ಸಾಧಿಸಲು ನಾವು ಒಟ್ಟಾಗಿ ಕೈಜೋಡಿಸೋಣ. ಯೋಗವು ಒಂದು ಜೀವನ ವಿಧಾನವಾಗಿದ್ದು, ಆರೋಗ್ಯ ಮತ್ತು ಯೋಗ ಕ್ಷೇಮಕ್ಕಾಗಿರುವ ಸಮಗ್ರ ವಿಧಾನ,

● 9ನೇ ಪುಟಕ್ಕೆ


ಜೂ.26ರಿಂದ ಗೃಹಲಕ್ಷ್ಮಿ
ಅರ್ಜಿ ಸಲ್ಲಿಕೆಗೆ ಅವಕಾಶ

- ಹಿರಿಯ ಐಎಎಸ್ ಅಧಿಕಾರಿ ಪೊನ್ನುರಾಜ್ ನೇತೃತ್ವದಲ್ಲಿ ಪ್ರತ್ಯೇಕ ಆ್ಯಪ್ ವ್ಯವಸ್ಥೆ
- 1.27 ಕೋಟಿ ಕುಟುಂಬಕ್ಕೆ ಇದರ ಪ್ರಯೋಜನ
- ಆದಾಯ ತೆರಿಗೆ, ಜಿಎಸ್‌ಟಿ ಪಾವತಿ ಮಾಡುವವರ ಹೊರತು ಎಪಿಎಲ್, ಬಿಪಿಎಲ್ ಸೇರಿ ಎಲ್ಲಾ ಮನೆ ಒಡತಿಯರು ಯೋಜನೆಗೆ ಅರ್ಹರು
- ಅನಕ್ಷರಸ್ಥರು, ಗ್ರಾಮೀಣರಿಗೆ ನೆರವಾಗಲು 'ಜನ ಸೇವಕರ' ನೇಮಕ
- ಅರ್ಜಿಯೊಂದಿಗೆ ಬ್ಯಾಂಕ್ ಖಾತೆ, ಆಧಾರ್ ಸಂಖ್ಯೆ ನಮೂದಿಸಬೇಕು

ಬೆಂಗಳೂರು, ಏ.21(ಕೆಎಂಶಿ)– ಗೃಹಲಕ್ಷ್ಮಿ ಯೋಜನೆಯಡಿ ಮನೆಯೊಡತಿಗೆ ಮಾಸಿಕ 2000 ರೂ ಪಡೆಯಲು ಜೂ.26ರಿಂದ ಅರ್ಜಿ ಸಲ್ಲಿಸಲು ಸರ್ಕಾರ ಅವಕಾಶ ಮಾಡಿಕೊಡುತ್ತಿದೆ.

ಯೋಜನೆಯಡಿ ಫಲಾನುಭವಿಗಳು ಅರ್ಜಿ ಸಲ್ಲಿಸಲು ಆ್ಯಪ್ ಅನ್ನು ಸಿದ್ಧಪಡಿಸಿದ್ದು, ಕುಟುಂಬದ ಯಜಮಾನಿ ಮನೆಯಲ್ಲೇ ಕುಳಿತು ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಹಿರಿಯ ಅಧಿಕಾರಿ ಪೊನ್ನುರಾಜ್ ಅವರು ಆ್ಯಪ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು, ಪ್ರತಿನಿತ್ಯ ಒಂದರಿಂದ ಒಂದೂವರೆ ಲಕ್ಷ ಅರ್ಜಿಗಳ ಸ್ವೀಕರಿಸುವ ಸಾಮರ್ಥ್ಯವನ್ನು ಈ ಆ್ಯಪ್ ಹೊಂದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಈಗಾಗಲೇ ಪ್ರಕಟಿಸಿರುವಂತೆ ಈ ಯೋಜನೆ ಆಗಸ್ಟ್ ತಿಂಗಳಿನಿಂದ ಜಾರಿಗೆ ಬರಲಿದೆ. ಈ ಯೋಜನೆಯಡಿ 1.27 ಕೋಟಿ ಕುಟುಂಬಗಳಿಗೆ ಪ್ರಯೋಜನ ದೊರೆಯಲಿದ್ದು, ಇದಕ್ಕಾಗಿ ವಾರ್ಷಿಕ 30 ಸಾವಿರ ಕೋಟಿ ರೂ.ಗಳಿಗೂ ಹೆಚ್ಚಿನ ಹೊರೆ ಸರ್ಕಾರಕ್ಕಾಗಲಿದೆ. ಯೋಜನೆಗೆ ಅಗತ್ಯವಿರುವ ಮೊದಲ ಕಂತಿನ ಹಣವನ್ನು ಸರ್ಕಾರ ಮೀಸಲಿಟ್ಟಿದ್ದು, ಫಲಾನುಭವಿಗಳು ಸಲ್ಲಿಸುವ

● 9ನೇ ಪುಟಕ್ಕೆ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ನವದೆಹಲಿ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಸೌಹಾರ್ದಯುತ ಭೇಟಿಯಾದರು. ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ವಸತಿ ಸಚಿವ ಜಮೀರ್ ಅಹ್ಮದ್ ಉಪಸ್ಥಿತರಿದ್ದರು.

ಹಳೆ ಪಿಂಚಣಿ ಯೋಜನೆ ಮರು ಜಾರಿಗೊಳಿಸಿ



ಮೈಸೂರು, ಜೂ.21(ಜಿಎ)– ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್) ರದ್ದುಗೊಳಿಸಿ, ಹಳೇ ಪಿಂಚಣಿ ಯೋಜನೆ (ಒಪಿಎಸ್) ಮರು ಜಾರಿಗೊಳಿಸಬೇಕು ಎಂದು ಆಗ್ರಹಿಸಿ ಮಂಗಳವಾರ ವಿವಿಧ ಇಲಾಖೆ ನೌಕರರು ಪ್ರತಿಭಟನೆ ನಡೆಸಿದರು.

ಹಳೇ ಪಿಂಚಣಿ ಯೋಜನೆ ಮರು ಸ್ಥಾಪನೆಗಾಗಿ ಜಂಟಿ ವೇದಿಕೆ ನೇತೃತ್ವದಲ್ಲಿ ನಗರದ ಹಳೆ ಹಾಲಿನ ಡೈರಿಯಿಂದ ನೂತನ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ನೌಕರರು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಪ್ರತಿಭಟನಾಕಾರರು ಮಾತನಾಡಿ, ದೇಶದಲ್ಲಿ 1881ರಿಂದ ಪಿಂಚಣಿ ವ್ಯವಸ್ಥೆ ಪ್ರಾರಂಭವಾಗಿದೆ. 1935 ಮತ್ತು ಸ್ವಾತಂತ್ರ್ಯದ ನಂತರ ಕೆಲ ನಿಬಂಧನೆ, ಮಾರ್ಪಾಡುಗಳನ್ನು ಮಾಡಲಾಗಿದೆ. ಪಿಂಚಣಿಯು ನಿವೃತ್ತಿ ಜೀವನದಲ್ಲಿ ಅನಿರೀಕ್ಷಿತ ವೆಚ್ಚ ಭರಿಸಲು ಅನುಕೂಲವಾಗಲಿದೆ. ಹೀಗಾಗಿ, ಸಾರ್ವಜನಿಕ, ಖಾಸಗಿ ಪಿಂಚಣಿ ವ್ಯವಸ್ಥೆಯಾಗಲಿ ಅಥವಾ ವಿವಿಧ ನಿವೃತ್ತಿ ಆದಾಯ ವ್ಯವಸ್ಥೆಯು ಸಂಧ್ಯಾಕಾಲದ ಬದುಕಿನ ನಿರೀಕ್ಷೆಯನ್ನು ಭರಿಸುವಂತಿರಬೇಕು. ಆದರೆ, ಈ ವ್ಯವಸ್ಥೆಯನ್ನು ಇದೀಗ ದುರ್ಬಲಗೊಳಿಸಲಾಗುತ್ತಿದೆ ಎಂದರು.

2004ರಲ್ಲಿ ಕೇಂದ್ರ, 2006ರಲ್ಲಿ ರಾಜ್ಯ ಸರ್ಕಾರದ ನೌಕರರಿಗೆ ಹೊಸ ಪಿಂಚಣಿ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಅಸಮಂಜಸ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿರುವುದರಿಂದ ಎನ್‌ಪಿಎಸ್‌ಯಲ್ಲಿ ಯಾವುದೇ ನಿರ್ದಿಷ್ಟ ಪಿಂಚಣಿ ಭರವಸೆ ಇಲ್ಲ. ಇದು ನಿವೃತ್ತ ನೌಕರರಿಗೆ ಮಾರಕವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ನಂತರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮನವಿ ಸಲ್ಲಿಸಲಾಯಿತು. ದಕ್ಷಿಣ ನೈಋತ್ಯ ರೈಲ್ವೆ ಯೂನಿಯನ್ ವಿಭಾಗೀಯ ಕಾರ್ಯದರ್ಶಿ ಶಿವಪ್ರಕಾಶ್, ಜಿಲ್ಲಾ ಅಧ್ಯಕ್ಷ ಸೋಮೇಗೌಡ, ವಲಯ ಕಾರ್ಯದರ್ಶಿ ಅರ್ಥೋಡ್ ಫರ್ನಾಂಡಿಸ್, ವಿಭಾಗೀಯ ಅಧ್ಯಕ್ಷ ಸೋಮಶೇಖರ್ ಸೇರಿದಂತೆ ನೂರಾರು ನೌಕರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಭತ್ತ ಬೆಳೆಯುವ ರೈತರ ಸಂಖ್ಯೆ ಭಾರೀ ಇಳಿಕೆ

ಅನ್ನಕ್ಕೆ ಮುಂದೆ ಹಾಹಾಕಾರ ಸೃಷ್ಟಿಯಾಗುವ ಆತಂಕ

ಮೈಸೂರು,ಜೂ.21(ಬಿಎಲ್‌ಯು)–ಅನ್ನಭಾಗ್ಯ ಯೋಜನೆ 'ಅಕ್ಕಿ' ಇದೀಗ ರಾಜಕೀಯ ಪಕ್ಷಗಳ ಅಸ್ತ್ರವಾಗಿದೆ. ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕರು ಅಕ್ಕಿ ಹೆಸರಲ್ಲಿ ಜಿದ್ದಾಜಿದ್ದಿ ನಡೆಸಿ, ಪರಸ್ಪರ ದೂಷಿಸುತ್ತಿದ್ದಾರೆ. ಅಕ್ಕಿಗೆ ಇಷ್ಟೊಂದು ಅಭಾವ ಸೃಷ್ಟಿಯಾಗಲು ಅನ್ನಭಾಗ್ಯ ಯೋಜನೆಯೂ ಕಾರಣವಾಯಿತೇ ಎಂಬ ಚರ್ಚೆ ಶುರುವಾಗಿದೆ.

ಅನ್ನಭಾಗ್ಯ ಯೋಜನೆಯಡಿ ಫಲಾನುಭವಿಗಳಿಗೆ ತಲಾ 10 ಕೆ.ಜಿ. ಅಕ್ಕಿ ವಿತರಿಸುವ ವಾಗ್ದಾನ ಮಾಡಿರುವ ಕಾಂಗ್ರೆಸ್ ಸರ್ಕಾರ, ಅಗತ್ಯದಷ್ಟು ಅಕ್ಕಿ ಹೊಂದಿಸಲು ಹರಸಾಹಸ ನಡೆಸುತ್ತಿದೆ. ಭಾರತೀಯ ಆಹಾರ ನಿಗಮದಿಂದ ಹೆಚ್ಚುವರಿ ಅಕ್ಕಿ ದೊರಕದಿರುವ ಕಾರಣ ನೆರೆಯ ತೆಲಂಗಾಣ, ಉತ್ತರ ಭಾರತದ ಪಂಜಾಬ್ ಹಾಗೂ ಛತ್ತೀಸಗಢ ಇನ್ನಿತರ ರಾಜ್ಯಗಳಲ್ಲಿ ಹುಡುಕಾಟ ನಡೆಸಿದೆ. ಆದರೂ ಅಗತ್ಯದಷ್ಟು ಪ್ರಮಾಣದ ಅಕ್ಕಿ ಸಂಗ್ರಹಿಸುವುದು ಕಷ್ಟ ಎನ್ನುವಂತಾಗಿದೆ.

ಕರ್ನಾಟಕದಲ್ಲಿ ಇಷ್ಟರಮಟ್ಟಿಗೆ ಅಕ್ಕಿಗೆ ಬರ ನಿರ್ಮಾಣವಾಗಲು ಕಾರಣ ಸಾಕಷ್ಟಿರಬಹುದು. ಆದರೆ ಭತ್ತದ ಉತ್ಪಾದನೆ ಕ್ಷೀಣಿಸಿರುವುದೇ ಪ್ರಮುಖ ಕಾರಣ ಎನ್ನಲಾಗುತ್ತಿದೆ. ಕಾವೇರಿ ಜಲಾಯನ ಪ್ರದೇಶದಲ್ಲಿ ಭತ್ತದ ಕಣಜ ಎಂದೇ ಪ್ರಸಿದ್ಧಿಯಾದ ಮೈಸೂರು ಜಿಲ್ಲೆಯ ಕೆ.ಆರ್.ನಗರ, ತಿ.ನರಸೀಪುರ ಸೇರಿದಂತೆ ಹಲವು ಪ್ರದೇಶದಲ್ಲಿ ಭತ್ತದ ಪ್ರಮಾಣ ಕುಸಿದಿದೆ. ಮೈಸೂರು ಮಾತ್ರವಲ್ಲದೆ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಭತ್ತ ಬೆಳೆಯುವವರ ಸಂಖ್ಯೆ ಭಾರೀ ಪ್ರಮಾಣದಲ್ಲಿ ಇಳಿಕೆಯಾಗಿದೆ. ಅನ್ನಭಾಗ್ಯ ಯೋಜನೆಯ ಪರೋಕ್ಷ ಪರಿಣಾಮದಿಂದಲೇ ಹಲವೆಡೆ ಈ ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನಲಾಗುತ್ತಿದೆ.

ಅನ್ನಭಾಗ್ಯ ಯೋಜನೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಮೊದಲು 7 ಕೆ.ಜಿ. ನಂತರ 5 ಕೆ.ಜಿ. ಅಕ್ಕಿ ನೀಡಲಾಗುತ್ತಿದೆ. ಈ ಯೋಜನೆ ಅನುಷ್ಠಾನವಾದ ಮೇಲೆ ಭತ್ತ





ಮೈಸೂರಿನ ಕೆ.ಆರ್.ನಗರವನ್ನು ಭತ್ತದ ಕಣಜ ಎನ್ನಲಾಗುತ್ತಿತ್ತು. ಮೈಸೂರಿನಿಂದ ಕೆ.ಆರ್.ನಗರಕ್ಕೆ ಹೋಗುವಾಗ ಲಕ್ಷ್ಮಣತೀರ್ಥ ನದಿಯ ಆಸುಪಾಸಿನಲ್ಲಿ ಹಸನಾದ ಭತ್ತದ ಬೆಳೆ ಕಾಣಿಸುತ್ತಿತ್ತು. ಆದರೆ ಈಗ ಅಲ್ಲಿನ ಸಾಕಷ್ಟು ಭೂಮಿ ಬರಡಾಗಿದೆ. ಕೆಲ ರೈತರು ತೆಂಗಿನ ಸಸಿಗಳನ್ನು ನೆಟ್ಟು ತೋಟ ಮಾಡಿದ್ದರೆ, ಇನ್ನು ಕೆಲವರು ಬೇರೆ ಬೇರೆ ಬೆಳೆ ಬೆಳೆಯುತ್ತಿದ್ದಾರೆ. ಕೆ.ಆರ್.ನಗರ ಮಾತ್ರವಲ್ಲದೆ ಮೈಸೂರಿನ ತಿ.ನರಸೀಪುರದ ತಲಕಾಡು ಸುತ್ತಮುತ್ತ ಭತ್ತ ಬೆಳೆಯುತ್ತಿದ್ದರು. ಆದರೆ ಅಲ್ಲೂ ಕೂಡ ಭತ್ತ ಬೆಳೆಯುವವರ ಸಂಖ್ಯೆ ಭಾರೀ ಪ್ರಮಾಣದಲ್ಲಿ ಇಳಿಕೆಯಾಗಿದೆ. ಒಂದು ಕಾಲದಲ್ಲಿ ಮೈಸೂರು ಜಿಲ್ಲೆಯ ಭತ್ತವನ್ನು ಬೇರೆ ಬೇರೆ ಕಡೆಗೆ ರಫ್ತು ಮಾಡಲಾಗುತ್ತಿತ್ತು. ಆದರೆ ಈಗ ಜಿಲ್ಲೆಗೆ ಸಾಕಾಗುವಷ್ಟು ಭತ್ತವಿಲ್ಲದೆ, ಬೇರೆ ಕಡೆಯಿಂದ ಆಮದು ಮಾಡಿಕೊಳ್ಳಬೇಕಾದ ಪರಿಸ್ಥಿತಿ ಬಂದೊದಗಿದೆ. ಪರಿಸ್ಥಿತಿ ಹೀಗೆ ಮುಂದುವರೆದರೆ ಅನ್ನಕ್ಕೆ ಬೇಡುವ ಪರಿಸ್ಥಿತಿ ಸೃಷ್ಟಿಯಾಗುವ ಆತಂಕ ಎದುರಾಗಿದೆ.

ಬೆಳೆಯುವವರ ಸಂಖ್ಯೆ ಕಡಿಮೆಯಾಗಿದೆ. ಒಂದು ಕುಟುಂಬದಲ್ಲಿ ಕನಿಷ್ಠ 6 ಜನರು ಇರುತ್ತಾರೆ. ತಲಾ 5 ಕೆ.ಜಿಯಂತೆ ಒಂದು ಕುಟುಂಬಕ್ಕೆ 30 ಕೆ.ಜಿ. ಅಕ್ಕಿ ಸಿಗುತ್ತದೆ. ಸರ್ಕಾರವೇ ಅಕ್ಕಿ ಕೊಡುತ್ತಿರುವಾಗ ನಾವೇಕೆ ಭತ್ತ ಬೆಳೆಯಬೇಕು. ಈಗ ಖರ್ಚು ಮಾಡಿದಷ್ಟೂ ಲಾಭ ಬರುವುದಿಲ್ಲ. ಕೃಷಿ ಕಾರ್ಮಿಕರೂ ಸಿಗುವುದಿಲ್ಲ. ಹೇಗಿದ್ದರೂ ಸರ್ಕಾರದಿಂದ ಅಕ್ಕಿ ಸಿಗುತ್ತದೆ, ಭತ್ತದ ಬದಲು ಯಾವುದಾದರೂ ವಾಣಿಜ್ಯ ಬೆಳೆ ಬೆಳೆದರೆ ಅನುಕೂಲವಾಗುತ್ತದೆ ಎಂಬ ಮನಃಸ್ಥಿತಿ ಬಹುತೇಕ ರೈತರಲ್ಲಿದೆ. ಹಾಗಾಗಿ ಭತ್ತ ಬೆಳೆಯುವವರೇ ಕಡಿಮೆಯಾಗಿದ್ದಾರೆ. ಬಡವರಿಗೆ ಅಕ್ಕಿ ಕೊಡುವುದು ಖಂಡಿತ ತಪ್ಪಲ್ಲ. ಹಸಿದವರಿಗೆ ಅನ್ನದ ಬೆಲೆ ಚೆನ್ನಾಗಿ ಅರಿವಿರುತ್ತದೆ ಎನ್ನುವುದು ಸತ್ಯ. ಆದರೆ ಅನ್ನಭಾಗ್ಯದೊಂದಿಗೆ ಕೃಷಿಯ ಸ್ಥಿತಿಗತಿ ಬಗ್ಗೆಯೂ ಗಮನಹರಿಸಿದ್ದರೆ ಈ ಪರಿಸ್ಥಿತಿ ತಡೆಯಬಹುದಿತ್ತು. ಭತ್ತದ ಬೆಳೆ ಪ್ರಮಾಣ ಕ್ಷೀಣಿಸುವುದನ್ನು ಮನಗಂಡ ಬಳಿಕವಾದರೂ ಎಚ್ಚೆತ್ತುಕೊಂಡು ರೈತರನ್ನು ಪ್ರೋತ್ಸಾಹಿಸಬಹುದಿತ್ತು. ಒಂದೆರಡು ತಿಂಗಳು ಅಕ್ಕಿ ವಿತರಿಸಲಾಗದಿದ್ದರೂ ಜನರ ಬದುಕು ದುಸ್ತರವಾಗದಂತೆ ಮುನ್ನೆಚ್ಚರಿಕೆ ವಹಿಸಬೇಕಿತ್ತು. ಈಗಲಾದರೂ ಈ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸಿ, ಸೂಕ್ತ ಕ್ರಮಕ್ಕೆ ಮುಂದಾಗಬೇಕೆಂದು ಜನತೆ ಮನವಿ ಮಾಡಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು,ಜೂ.21–ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ಬಾಲಕ, ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ (ಪಿಯುಸಿ ಮತ್ತು ಪಿಯುಸಿ ಸಮಾನಾಂತರ ಕೋರ್ಸಿನ ವಿದ್ಯಾರ್ಥಿಗಳಿಗೆ) ಈ ಸಾಲಿನ ಪ್ರವೇಶಾತಿ ಪಡೆಯಲು ಬಯಸುವ ಪ.ಜಾತಿ, ಪ.ವರ್ಗದ ಹಾಗೂ ಪ್ರವರ್ಗ–1, 2ಎ, 2ಬಿ, 3ಎ, 3ಬಿ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆಗೆ ಅರ್ಜಿ ಆಹ್ವಾನಿಸಿದೆ. https://shp. karnataka.gov.inನಲ್ಲಿ ಅರ್ಜಿ ಸಲ್ಲಿಸಬಹುದು. ಎಸ್‌ಸಿ, ಎಸ್‌ಟಿ, ಪ್ರವರ್ಗ–1 ಪೋಷಕರ ವಾರ್ಷಿಕ ಆದಾಯ ಮಿತಿ 2.50 ಲಕ್ಷ ಪ್ರವರ್ಗ–2ಎ, 2ಬಿ, 3ಎ, 3ಬಿ, ಹಿಂದುಳಿದ ವರ್ಗ ಇತರೆ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ 1 ಲಕ್ಷ ಮೀರಬಾರದು. ಅರ್ಜಿ ಸಲ್ಲಿಸಲು ಜು.15 ಕೊನೇ ದಿನ. ಮಾಹಿತಿಗೆ ದೂ.ಸಂ. 8050770005 ಸಂಪರ್ಕಿಸಿ.

ನಾಳೆಯಿಂದ ವಿದ್ಯುತ್ ಗುತ್ತಿಗೆದಾರರ ಸಂಘದ ಕ್ರೀಡೋತ್ಸವ



ಮೈಸೂರು, ಜೂ.21 (ಪಿಎಂ)– ವಿದ್ಯುತ್ ಗುತ್ತಿಗೆದಾರರ ಸಂಘದ ವತಿಯಿಂದ ಜೂ.23 ಮತ್ತು 24ರಂದು ಸಂಘದ ಸದಸ್ಯರಿಗಾಗಿ ರಾಜ್ಯಮಟ್ಟದ ಕ್ರೀಡೋತ್ಸವ ಆಯೋಜಿಸಲಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಸಿ.ರಮೇಶ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಕ್ರೀಡೋತ್ಸವ ನಡೆಯಲಿದ್ದು, ಸಂಘದ 5 ಸಾವಿರ ಸದಸ್ಯರು ಈ ಕ್ರೀಡೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಪೈಕಿ 26 ತಂಡಗಳು ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಲಿವೆ. ರಾಜ್ಯದ ಎಲ್ಲಾ ಘಟಕಗಳಿಂದ ಸಂಘದಲ್ಲಿ ಒಟ್ಟು 15 ಸಾವಿರ ಸದಸ್ಯರಿದ್ದು, ಈ ಪೈಕಿ 560 ಮಹಿಳಾ ಸದಸ್ಯರಿದ್ದಾರೆ. 1922ರಲ್ಲಿ ಸ್ಥಾಪನೆಯಾದ ನಮ್ಮ ಸಂಘವು ಕಳೆದ ವರ್ಷ ಶತಮಾನೋತ್ಸವ ಆಚರಿಸಿಕೊಂಡಿದೆ ಎಂದು ಹೇಳಿದರು.

ಹಗ್ಗ ಜಗ್ಗಾಟ, ಷಟಲ್ ಬ್ಯಾಡ್ಮಿಂಟನ್, ಮ್ಯೂಸಿಕಲ್ ಚೇರ್, 100 ಮೀ. ಓಟ ಸೇರಿದಂತೆ ಹಲವು ಸ್ಪರ್ಧೆಗಳು ಕ್ರೀಡೋತ್ಸವದಲ್ಲಿ ನಡೆಯಲಿವೆ. ಜೂ.23ರಂದು ಬೆಳಗ್ಗೆ 8.30ಕ್ಕೆ ಹಿರಿಯ ನಟ ಡಾ.ಶಿವರಾಜ್‌ಕುಮಾರ್ ಮತ್ತು ಚಲನಚಿತ್ರ ನಿರ್ಮಾಪಕಿ ಗೀತಾ ಶಿವರಾಜ್‌ಕುಮಾರ್ ಕ್ರೀಡೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಕ್ರೀಡಾಜ್ಯೋತಿ ಬೆಳಗಲಿದ್ದಾರೆ. ಅತಿಥಿಗಳಾಗಿ ಶಾಸಕ ತನ್ವೀರ್ ಸೇಠ್, ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಸೆಸ್ಕ್ ಎಂಡಿ ಜಯವಿಭವಸ್ವಾಮಿ, ಎಟಿಎಂಇ ಕಾಲೇಜಿನ ಅಧ್ಯಕ್ಷ ಅರುಣ್ ಕುಮಾರ್ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸಂಜೆ 6.30ಕ್ಕೆ ರಿಂಗ್ ರಸ್ತೆಯ ನ್ಯೂ ಶಾರದ ಅನೆಕ್ಸ್‌ನಲ್ಲಿ ಸ್ನೇಹ ಸಮ್ಮಿಲನ ಕಾರ್ಯಕ್ರಮ ಆಯೋಜಿಸಲಾಗಿದೆ. ಇದಕ್ಕೆ ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ. ಹರೀಶ್‌ಗೌಡ ಚಾಲನೆ ನೀಡಲಿದ್ದಾರೆ. ಜೂ.24ರಂದು ಬೆಳಗ್ಗೆ 8.30ಕ್ಕೆ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುವ ವಿವಿಧ ಕ್ರೀಡೆಗಳಿಗೆ ಶಾಸಕ ಟಿ.ಎಸ್.ಶ್ರೀವತ್ಸ ಮತ್ತು ಮೇಯರ್ ಶಿವಕುಮಾರ್ ಚಾಲನೆ ನೀಡಲಿದ್ದಾರೆ. ಇದೇ ಮೈದಾನದಲ್ಲಿ ಅಂದು ಸಂಜೆ 5.30ಕ್ಕೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಶಾಸಕ ಜಿ.ಟಿ. ದೇವೇಗೌಡ ಮತ್ತು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷೆ ಕೆ.ಲಲಿತಾ ಜಿ.ಟಿ. ದೇವೇಗೌಡ ಬಹುಮಾನ ವಿತರಿಸಲಿದ್ದಾರೆ ಎಂದು ವಿವರಿಸಿದರು. ಸಂಘದ ಜಿಲ್ಲಾಧ್ಯಕ್ಷ ರಾಘವೇಂದ್ರ, ಕಾರ್ಯದರ್ಶಿ ಬಿ.ಎಂ.ಗಿರೀಶ್‌ಕುಮಾರ್, ಉಪಾಧ್ಯಕ್ಷ ಮಂಜುನಾಥ್, ಪದಾಧಿಕಾರಿಗಳಾದ ಶಶಿಧರ್, ವೆಂಕಟೇಶ್‌ಮೂರ್ತಿ ಮತ್ತಿತರರು ಗೋಷ್ಠಿಯಲ್ಲಿದ್ದರು.

ಕೂರ್ಗಳ್ಳಿ ಸರ್ಕಾರಿ ಶಾಲೆಯಲ್ಲಿ 9, 10ನೇ ತರಗತಿ ಆರಂಭಕ್ಕೆ ಒತ್ತಾಯ



ಮೈಸೂರು,ಜೂ.21(ಪಿಎಂ)– ಕೂರ್ಗಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 9, 10ನೇ ತರಗತಿ ಆರಂಭಿಸುವ ಮೂಲಕ ಶಾಲೆಯನ್ನು ಪ್ರೌಢಶಾಲೆಯಾಗಿ ಉನ್ನತೀಕರಿಸಬೇಕೆಂದು ಕೂರ್ಗಳ್ಳಿಯ ಚಾಮುಂಡೇಶ್ವರಿ ಸೇವಾ ಟ್ರಸ್ಟ್ ಒತ್ತಾಯಿಸಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್ ಕಾರ್ಯದರ್ಶಿ ಎನ್.ರೇವಣ್ಣ, ಶಾಲೆಯಲ್ಲಿ 9 ಮತ್ತು 10ನೇ ತರಗತಿ ಪ್ರಾರಂಭಿಸಿ ಉನ್ನತೀಕರಿಸಬೇಕೆಂದು ಕಳೆದ 3 ವರ್ಷಗಳಿಂದ ಶಾಲೆಯ ಎಸ್‌ಡಿಎಂಸಿ ಸದಸ್ಯರು ಹಾಗೂ ಗ್ರಾಮಸ್ಥರು ಮನವಿ ಸಲ್ಲಿಸಿದ್ದರೂ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ಸ್ಪಂದಿಸುತ್ತಿಲ್ಲ. ಕ್ಷೇತ್ರದ ಶಾಸಕರು, ಸಂಸದರ ಶಿಫಾರಸು ಪತ್ರಕ್ಕೂ ಮನ್ನಣೆ ನೀಡಿಲ್ಲ ಎಂದು ದೂರಿದರು.

ಸರ್ಕಾರಿ ಶಾಲೆಗಳಿಗೆ ಮಕ್ಕಳ ದಾಖಲಾತಿ ಕಡಿಮೆ ಎನ್ನುತ್ತಾರೆ. ಆದರೆ ನಮ್ಮ ಗ್ರಾಮಸ್ಥರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಯಲ್ಲಿ ಓದಿಸಲು ಸಿದ್ಧವಿದ್ದರೂ ಪ್ರೌಢಶಾಲೆ ಮಂಜೂರು ಮಾಡಲು ನಿರ್ಲಕ್ಷ್ಯ ಮಾಡಲಾಗುತ್ತಿದೆ. ನಮ್ಮ ಗ್ರಾಮದಲ್ಲಿ 25 ಸಾವಿರ ಜನಸಂಖ್ಯೆ ಇದ್ದು, ಈ ಸರ್ಕಾರಿ ಶಾಲೆಯಲ್ಲಿ 320ಕ್ಕೂ ಹೆಚ್ಚು ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. 9ನೇ ತರಗತಿಯಲ್ಲಿ ಓದಲು 2ರಿಂದ 3 ಕಿ.ಮೀ. ದೂರದ ಗ್ರಾಮಕ್ಕೆ ಹೋಗಬೇಕಾದ ಪರಿಸ್ಥಿತಿ ಇದೆ. ಜನಪ್ರತಿನಿಧಿಗಳು, ಅಧಿಕಾರಿಗಳು ನಮ್ಮ ಮನವಿಗೆ ಸ್ಪಂದಿಸಿ ಈ ಶೈಕ್ಷಣಿಕ ಸಾಲಿನಿಂದ 9, 10ನೇ ತರಗತಿ ಪ್ರಾರಂಭಿಸಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಮುಖ್ಯಮಂತ್ರಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಸಂಬಂಧ ಗಮನಹರಿಸಿ ಗ್ರಾಮಸ್ಥರ ಬೇಡಿಕೆ ಈಡೇರಿಸಬೇಕು. ಇಲ್ಲವಾದರೆ ಹೋರಾಟ ಅನಿವಾರ್ಯ ಎಂದು ಎಚ್ಚರಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ದೇವರಾಜು, ಸದಸ್ಯರಾದ ಯತೀಶ್, ವೈ.ಟಿ.ಕುಮಾರ್, ಮುಖಂಡರಾದ ಡಿ. ಚಂದ್ರಶೇಖರ್, ದೀಪಿಕಾ ಗೋಷ್ಠಿಯಲ್ಲಿದ್ದರು.

ವಾಲ್ಮೀಕಿ ಪ್ರತಿಮೆ ನಿರ್ಮಾಣಕ್ಕೆ ಮನವಿ



ಮೈಸೂರು,ಜೂ.21(ಜಿಎ)– ವಾಲ್ಮೀಕಿ ಪ್ರತಿಮೆ ನಿರ್ಮಾಣ ಮಾಡುವಂತೆ ಮೈಸೂರು ಮಹಾನಗರ ಪಾಲಿಕೆ ಸದಸ್ಯ ವಿ.ಲೋಕೇಶ್ ಪಿಯಾ ನಗರಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಪಾಲಿಕೆ ಸದಸ್ಯ ಲೋಕೇಶ್ ಪಿಯಾ ತಮ್ಮ ಬೆಂಬಲಿಗರೊಡನೆ ಬುಧವಾರ ಪಾಲಿಕೆ ಆಯುಕ್ತರನ್ನು ಭೇಟಿ ಮಾಡಿ ನಗರದ ಮಿನಿ ವಿಧಾನಸೌಧದ ಮುಂಭಾಗವಿರುವ ಪಾರ್ಕ್‌ನಲ್ಲಿ ವಾಲ್ಮೀಕಿ ಪ್ರತಿಮೆ ನಿರ್ಮಾಣ ಮಾಡಬೇಕೆಂದು ಮನವಿ ನೀಡಿದರು.

ನಂತರ ಮಾತನಾಡಿದ ಅವರು, ವಿವೇಕಾನಂದ ವೃತ್ತದಲ್ಲಿ ಚೆನ್ನಾಗಿದ್ದ ಪುತ್ಥಳಿ ನವೀಕರಣಕ್ಕೆ 3 ಕೋಟಿ ರೂ. ನೀಡಲಾಗಿದೆ. ಆದರೆ, 10 ವರ್ಷದಿಂದ ನಗರದಲ್ಲಿ ವಾಲ್ಮೀಕಿ ಪ್ರತಿಮೆಗೆ ಒತ್ತಾಯಿಸುತ್ತಿದ್ದೇವೆ. ನಗರದ ಮಿನಿ ವಿಧಾನಸೌಧ ಮುಂಭಾಗದ ಪಾರ್ಕ್‌ನಲ್ಲಿ ವಾಲ್ಮೀಕಿ ಪ್ರತಿಮೆ ಸ್ಥಾಪನೆಗೆ ಅನುಮೋದನೆ ದೊರೆತಿತ್ತು. ಆದರೆ, ಯಾವುದೇ ಪ್ರತಿಮೆ ನಿರ್ಮಿಸದಂತೆ ಸುಪ್ರೀಂಕೋರ್ಟ್ ಆದೇಶವಿತ್ತು. ಅದಾಗಿಯೂ ನಾವು ವಾಲ್ಮೀಕಿ ಪ್ರತಿಮೆಗೆ ಒತ್ತಾಯಿಸುತ್ತಾ ಬಂದಿದ್ದೇವೆ ಎಂದರು.

ಸುಪ್ರೀಂ ಆದೇಶದ ಸಬೂಬು ಹೇಳಿ ಪಾಲಿಕೆ ನಮ್ಮನ್ನು ಸುಮ್ಮನಾಗಿಸುತ್ತಿತ್ತು. ಆದರೆ, ಈಗ ಈ ಆದೇಶ ಉಲ್ಲಂಘಿಸಿ ವಿವೇಕಾನಂದರ ಪ್ರತಿಮೆ ನವೀಕರಣ ಮಾಡಲಾಗುತ್ತಿದೆ. ಇದನ್ನು ನಾವು ಖಂಡಿಸುತ್ತೇವೆ. ನಿರ್ಮಿಸುವುದಾದರೆ ಎರಡು ಪ್ರತಿಮೆ ನಿರ್ಮಿಸಿ ಎಂದು ಸಾಂಕೇತಿಕವಾಗಿ ಮನವಿ ಮಾಡಿದ್ದೇವೆ. ವಾಲ್ಮೀಕಿ ಪ್ರತಿಮೆ ನಿರ್ಮಿಸದೆ ವಿವೇಕಾನಂದರ ಪ್ರತಿಮೆ ನವೀಕರಣಕ್ಕೆ ಮುಂದಾದರೆ, ಹೋರಾಟ ಮಾಡುತ್ತೇವೆಂದು ಎಚ್ಚರಿಕೆ ನೀಡಿದರು.

ಹಿರಿಯ ನಾಗರಿಕರಿಗೆ ಹಿಂದೂ ದೇವಾಲಯಗಳಲ್ಲಿ ನೇರ ದರ್ಶನ



ಬೆಂಗಳೂರು: 65 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಹಿಂದೂ ಧಾರ್ಮಿಕ ದೇವಾಲಯಗಳಲ್ಲಿ ನೇರವಾಗಿ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಕುರಿತಾಗಿ ಧಾರ್ಮಿಕ ದತ್ತಿ ಇಲಾಖೆ ಆಯುಕ್ತ ಬಸವರಾಜೇಂದ್ರ ಸುತ್ತೋಲೆ ಹೊರಡಿಸಿದ್ದಾರೆ. ಎ ಮತ್ತು ಬಿ ವರ್ಗದ ದೇವಾಲಯಗಳಲ್ಲಿ 65 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಈ ಸೌಲಭ್ಯ ನೀಡಲಾಗುತ್ತಿದ್ದು, ದಾಖಲೆ ಅಥವಾ ಆಧಾರ್ ತೋರಿಸಿದರೆ ಸರತಿ ಸಾಲಿನಲ್ಲಿ ನಿಲ್ಲದೆ ನೇರವಾಗಿ ದೇವರ ದರ್ಶನಕ್ಕೆ ಅವಕಾಶ ನೀಡಲಾಗುತ್ತದೆ. ದೇಗುಲಗಳಲ್ಲಿ ಹಿರಿಯ ನಾಗರಿಕರ ಸಹಾಯ ಕೇಂದ್ರ ಸ್ಥಾಪನೆಗೆ ಸೂಚಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಇಲಾಖೆ ವ್ಯಾಪ್ತಿಗೆ ಒಳಪಡುವ ದೇವಾಲಯಗಳಿಗೆ ಆಗಮಿಸುತ್ತಿರುವ ಭಕ್ತಾದಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಹಿರಿಯ ನಾಗರಿಕರಿಗೆ ದೇವರ ದರ್ಶನಕ್ಕೆ ಸರತಿ ಸಾಲಿನಲ್ಲಿ ನಿಂತುಕೊಳ್ಳುವುದು ಕಷ್ಟಕರವಾಗಿರುವುದರಿಂದ, 65 ವರ್ಷ ಮೇಲ್ಪಟ್ಟವರಿಗೆ ಪ್ರತ್ಯೇಕ ಶೀಘ್ರ ದರ್ಶನಕ್ಕೆ ತಪ್ಪದೇ ಅಗತ್ಯ ವ್ಯವಸ್ಥೆ ಮಾಡಲು ಸೂಚಿಸಲಾಗಿದೆ. ಹಿರಿಯ ನಾಗರಿಕರು ಅವರ ವಯಸ್ಸಿನ ದಾಖಲೆ/ ಆಧಾರ ಕಾರ್ಡ್ ತೋರಿಸಿದಲ್ಲಿ ಅವರಿಗೆ ಶೀಘ್ರ ದರ್ಶನಕ್ಕೆ ಅನುಕೂಲವಾಗುವಂತ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ದೇವಾಲಯದಲ್ಲಿ ಸ್ಥಳಾವಕಾಶ ಇದ್ದಲ್ಲಿ ಹಿರಿಯ ನಾಗರಿಕರಿಗೆಂದು ಪ್ರತ್ಯೇಕ ಸ್ಥಳ ಕಾಯ್ದಿರಿಸಲು ಸೂಚನೆ ನೀಡಲಾಗಿದೆ ದೇವಾಲಯಗಳಲ್ಲಿ ಹಿರಿಯ ನಾಗರಿಕರಿಗಾಗಿ ಸಹಾಯ ಕೇಂದ್ರವನ್ನು ಸ್ಥಾಪಿಸಿ, ಹಿರಿಯ ನಾಗರಿಕರಿಗೆ ಸಹಕರಿಸಿ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸುವುದು. ಸದರಿ ಸಹಾಯ ಕೇಂದ್ರಕ್ಕೆ ಜವಾಬ್ದಾರಿಯುತ ಸಿಬ್ಬಂದಿಗಳನ್ನು ನಿಯೋಜಿಸಿ ಹಿರಿಯ ನಾಗರಿಕರಿಗೆ ತ್ವರಿತ ದರ್ಶನ ಏರ್ಪಡಿಸಲು ಕ್ರಮ ಕೈಗೊಳ್ಳುವಂತೆ ಸುತ್ತೋಲೆಯಲ್ಲಿ ತಿಳಿಸಿದೆ.

ನಾಳೆ ಸ್ವಯಂವರ ಪಾರ್ವತೀ ಹೋಮ

ಮೈಸೂರು: ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಜೂ.23ರಂದು ಶುಕ್ರವಾರ ಬೆಳಗ್ಗೆ 7.30ಕ್ಕೆ ಸ್ವಯಂವರ(ವಿವಾಹದಲ್ಲಿ ವಿಳಂಬಕ್ಕಾಗಿ) ಪಾರ್ವತೀ ಹೋಮ ಏರ್ಪಡಿಸಲಾಗಿದೆ. ಅವಿವಾಹಿತರು ಇದರಲ್ಲಿ ಭಾಗವಹಿಸಿ ಸಂಕಲ್ಪ ಮಾಡಬಹುದು. ಪ್ರತಿಯೊಬ್ಬರಿಗೂ ಪ್ರತ್ಯೇಕ ಪೂಜೆ ಮತ್ತು ಹೋಮವನ್ನು ಮಾಡಿಸಲಾಗುವುದು. ಹೆಚ್ಚಿನ ವಿವರಗಳಿಗೆ ವೈಕುಮಾರ್ ಜಾತಕ ವಿಮರ್ಶಕರನ್ನು ಮೊ.ಸಂಖ್ಯೆ 9845183399 9342183392 ಮೂಲಕ ಸಂಪರ್ಕಿಸಬಹುದು.

ನಾಳೆಯಿಂದ ವಿದ್ವತ್ ಅಂತರ ಕಾಲೇಜು ಸ್ಪರ್ಧೆ



ಮೈಸೂರು,ಜೂ.21(ಪಿಎಂ)– ವಿದ್ಯಾವರ್ಧಕ ಸಂಘದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ವತಿಯಿಂದ ಜೂ.23 ಮತ್ತು 24ರಂದು 'ವಿದ್ವತ್–2023–ಬಿಜ್ ಟೆಕ್' ರಾಜ್ಯಮಟ್ಟದ ಅಂತರ ಕಾಲೇಜು ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರಿಗೌಡ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳಲ್ಲಿ ವಾಣಿಜ್ಯ, ನಿರ್ವಹಣಾ, ತಾಂತ್ರಿಕ, ಕಲೆ ಮತ್ತು ಕ್ರೀಡಾ ಕೌಶಲ್ಯ ಬೆಳೆಸಲು ವಿದ್ವತ್ ಒಂದು ಉತ್ತಮ ವೇದಿಕೆ. ಕಾಲೇಜಿನಿಂದ ನಡೆಸುತ್ತಿರುವ 15ನೇ ಆವೃತ್ತಿ ಕಾರ್ಯಕ್ರಮ ಇದಾಗಿದೆ. ಎಲ್ಲಾ ಸ್ಪರ್ಧೆಗಳು ಕಾಲೇಜು ಆವರಣದಲ್ಲಿ ನಡೆಯಲಿವೆ ಎಂದರು.

ಹಣಕಾಸು ನಿರ್ವಹಣೆ, ಮಾರ್ಕೆಟಿಂಗ್, ವೆಬ್ ಡಿಸೈನಿಂಗ್, ಬೆಂಕಿ ಇಲ್ಲದೇ ಅಡುಗೆ ಸೇರಿದಂತೆ ಒಟ್ಟು 12 ಸ್ಪರ್ಧೆಗಳು ನಡೆಯಲಿದ್ದು, ನಮ್ಮ ಕಾಲೇಜು ವಿದ್ಯಾರ್ಥಿಗಳು ಯಾವುದೇ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿಲ್ಲ. ಎಲ್ಲಾ ಸ್ಪರ್ಧೆಗಳಿಗೆ ಪ್ರವೇಶ ಶುಲ್ಕವಿದೆ. ವಿಜೇತರು ಹಾಗೂ ವಿಜೇತ ತಂಡಗಳಿಗೆ ನಗದು ಬಹುಮಾನ ನೀಡಲಾಗುವುದು. ಜೂ.23ರಂದು ಸಂಜೆ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ ನಡೆಯಲಿದ್ದು, ಜೂ.24ರಂದು ನಮ್ಮದೇ ಕಾಲೇಜು ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನೀಡಲಿದ್ದಾರೆ ಎಂದರು.

ಕಾಲೇಜಿನ ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣದಲ್ಲಿ ಜೂ.23ರಂದು ಬೆಳಗ್ಗೆ 9.30ಕ್ಕೆ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಯಾಗಿ ಟ್ರೂಲಿ ಎಸೆನ್ಷಿಯಲ್ ಸಂಸ್ಥಾಪಕಿ ಅಕ್ಷರ ಕುಮಾರ್ ಪಾಲ್ಗೊಳ್ಳಲಿದ್ದಾರೆ. ಜೂ.24ರಂದು ಸಂಜೆ 4.30ಕ್ಕೆ ಇದೇ ಸಭಾಂಗಣದಲ್ಲಿ ಬಹುಮಾನ ವಿತರಣೆ ಹಾಗೂ ಸಮಾರೋಪ ಸಮಾರಂಭ ಹಮ್ಮಿಕೊಂಡಿದ್ದು, ಕೃಷಿ ಜಂಕ್ಷನ್ ಸಹ ಸಂಸ್ಥಾಪಕಿ ಡಾ.ಚೈತ್ರ ಭರತ್ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಸ್ಪರ್ಧೆಗಳಲ್ಲಿ ಭಾಗವಹಿಸುವ ಸಂಬಂಧ ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 70269 86885, 9945481812 ಸಂಪರ್ಕಿಸಬಹುದು ಎಂದರು. ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಬಿ.ಕೆ.ವತ್ಸಲಾ, ಎಸ್.ಚೈತ್ರ, ವಿದ್ಯಾರ್ಥಿಗಳಾದ ಇರಾಮ್ ನೂರೈನ್, ಸಿ.ಯು.ಜೀವನ್‌ಗೌಡ ಗೋಷ್ಠಿಯಲ್ಲಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.6.2023 ಗುರುವಾರ, ಮಳೆ ನಕ್ಷತ್ರ: ಆರಿದ್ರಾ 22.06.2023 ರಿಂದ 7.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ ಚಾರಿಟಬಲ್ ಟ್ರಸ್ಟ್:** 81ನೇ ಜಯಂತ್ಯುತ್ಸವ–2023, 19ನೇ ಬ್ರಹ್ಮರಥೋತ್ಸವ, ಬೆಳಗ್ಗೆ 9 ಗಂಟೆಗೆ ದಕ್ಷಿಣಾಮೂರ್ತಿ ಹೋಮ, ಸ್ಥಳ: ದೇವಸ್ಥಾನದ ಆವರಣ, ವಾಣಿವಿಲಾಸ ಮೊಹಲ್ಲಾ.

■ **ಒಕ್ಕಲಿಗರ ಸಂಘ :** ಜೂ. 27 ರಂದು ನಾಡಪ್ರಭು ಕೆಂಪೇಗೌಡರ ಜಯಂತಿ ಪ್ರಯುಕ್ತ ನಾಡಪ್ರಭು ಕೆಂಪೇಗೌಡರ ಬೆಳ್ಳಿ ರಥಕ್ಕೆ ಚಾಲನೆ, ಸಾನ್ನಿಧ್ಯ : ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು, ಮೇಯರ್, ಉಪಮೇಯರ್, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ, ಬೆಳಗ್ಗೆ 9.30ಕ್ಕೆ.

■ **ಎನ್.ಜೆ. ಡಯಾಗ್ನೋಸ್ಟಿಕ್ ಮತ್ತು ಕ್ಲಿನಿಕ್ :** ಉಚಿತ ಮಧುಮೇಹ ತಪಾಸಣಾ ಶಿಬಿರ, ಸ್ಥಳ: ಎನ್.ಜೆ. ಡಯಾಗ್ನೋಸ್ಟಿಕ್ ಮತ್ತು ಕ್ಲಿನಿಕ್, ವಿನಾಯಕನಗರ (ಪಡುವಾರಹಳ್ಳಿ), ಬೆಳಗ್ಗೆ 9.30 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ :** ಯೂನಿವರ್ಸಿಟಿ ಮಟ್ಟದ ಕಾಮರ್ಸ್ ಫೆಸ್ಟ್, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಪ್ರಾಸ್ತಾವಿಕ ನುಡಿ : ಶ್ರೀಮತಿ ಶ್ರೀದೇವಿ ರಾಘವನ್, ಅಧ್ಯಕ್ಷತೆ : ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ. ಎಂ.ಎಲ್. ಅಶೋಕ, ಸ್ಥಳ: ಬಿಐಎಂಎಸ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಕನ್ನಡ ಜಾನಪದ ಪರಿಷತ್ :** ಮಹಾರಾಣಿ ದೇಸಿ ಸಂಭ್ರಮ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ಅಧ್ಯಕ್ಷತೆ : ಪ್ರಾಂಶುಪಾಲ ಡಾ. ಡಿ.ರವಿ, ಪ್ರಾಸ್ತಾವಿಕ ನುಡಿ : ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್, ಸಾಧಕರನ್ನು ಸನ್ಮಾನಿಸುವವರು : ಸಮಾಜ ಸೇವಕ ರವಿಗೌಡ, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಿಭಾಗೀಯ ಸಂಚಾಲಕ ಡಾ. ಕಾವೇರಿ ಪ್ರಕಾಶ್, ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಡಾ. ರಾಣಿಪ್ರಭಾ, ಸ್ಥಳ: ಕಾಲೇಜಿನ ಕಲಾ ಮಂಟಪ, ಬೆಳಗ್ಗೆ 10.30ಕ್ಕೆ.

■ **ಭಾವಸಾರ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ :** ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಅಮ್ಮನವರ ದೇವಿಯ ವಿಗ್ರಹವನ್ನು ಶ್ರೀರಂಗಪಟ್ಟಣದಲ್ಲಿರುವ ನಿಮಿಷಾಂಭ ದೇವಸ್ಥಾನದ ಬಳಿ ಇರುವ ಕಾವೇರಿ ನದಿಯಲ್ಲಿ ವಿಸರ್ಜನೆ, ಪ್ರಸಾದ ವಿನಿಯೋಗ, ಸ್ಥಳ:ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ, ಕುವೆಂಪುನಗರ.

■ **ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ :** ಮಕ್ಕಳ ಶಿಕ್ಷಣ ಮತ್ತು ಸಾಂಕ್ರಾಮಿಕ ನಂತರದ ಚೇತರಿಕೆಯ ಕಲಿಕೆ ಕುರಿತು ಕಾರ್ಯಾಗಾರ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಶಾಸಕ ಕೆ. ಹರೀಶ್‌ಗೌಡ, ಪ್ರೊಸನ್ ಸೇನ್, ಶಿಕ್ಷಣ ತಜ್ಞ ಶೇಷಗಿರಿ ಮಧುಸೂದನ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಉಪಸ್ಥಿತರು : ವಿಭಾಗದ ಮುಖ್ಯಸ್ಥರಾದ ಪ್ರೊ. ಎಂ.ಎಸ್. ಸಪ್ನಾ, ಪ್ರೊ. ಸಿ.ಕೆ. ಪುಟ್ಟಸ್ವಾಮಿ, ಸ್ಥಳ: ವಿಜ್ಞಾನ ಭವನ, ಬೆಳಗ್ಗೆ 11ಕ್ಕೆ

■ **ಕಸ್ತೂರಿ ಸಿರಿಗನ್ನಡ ವೇದಿಕೆ, ಕೀರ್ತಿ ಯುವತಿ ಮಹಿಳಾ ಮಂಡಳಿ :** ಶಾಲಾ ಮಕ್ಕಳಿಗೆ ಅಮ್ಮ (ತಾಯಿ) ಕುರಿತು ಪ್ರಬಂಧ ಸ್ಪರ್ಧೆ, ಸಾನ್ನಿಧ್ಯ : ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ : ವಕೀಲ ಎಂ. ಗುರುಪ್ರಸಾದ್, ಅಧ್ಯಕ್ಷತೆ : ಎಸ್‌ಡಿಎಂಸಿ ಅಧ್ಯಕ್ಷ ಫಯಾಜ್ ಷರೀಫ್, ಪ್ರಾಸ್ತಾವನೆ ಆಶಯ ನುಡಿ: ಶ್ರೀಮತಿ ಮಂಜುಳ ರಮೇಶ್, ಪೋತೇರ ಮಹದೇವು, ಬಹುಮಾನ ವಿತರಣೆ : ಸಾಹಿತಿ ಬನ್ನೂರು ಕೆ. ರಾಜು, ಸ್ಥಳ: ಬಾಲಕಿಯರ ಸರ್ಕಾರಿ ಪ್ರೌಢಶಾಲೆ, ಪೀಪಲ್ಸ್ ಪಾರ್ಕ್, ಮಧ್ಯಾಹ್ನ 2.30ಕ್ಕೆ.

■ **ಜನತಂತ್ರ ಜಾಗೃತಿ ವೇದಿಕೆ, ಪ್ರಗತಿಪರ ಸಂಘಟನೆಗಳ ಒಕ್ಕೂಟ, ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆ ಹಾಗೂ ಇಪ್ಟಾ, ಸಾಂಸ್ಕೃತಿಕ ಮನಸುಗಳು ಹಾಗೂ ನಾಗರಿಕರ :** ಹಾಡುಪಾಡು ರಾಮು ಅವರಿಗೆ ನುಡಿನಮನ ಕಾರ್ಯಕ್ರಮ, ಉಪಸ್ಥಿತರು : ಜಿ.ಪಿ. ಬಸವರಾಜು, ಪ್ರೊ ಕಾಳಚನ್ನೇಗೌಡ, ಉಗ್ರನರಸಿಂಹೇಗೌಡ, ಲ. ಜಗನ್ನಾಥ್, ಜಗನ್ನಾಥ್ (ಸಿಪಿಐ), ನೆಲೆ ಗೋಪಾಲಕೃಷ್ಣ, ಹೊಸಕೋಟೆ ಬಸವರಾಜು, ಕಾಳೇಗೌಡ ನಾಗವಾರ, ಜನಾರ್ಧನ, ಬಸವಲಿಂಗಯ್ಯ, ಡಾ. ಇ. ರತಿರಾವ್, ಡಾ. ಹರೀಶ್‌ಕುಮಾರ್, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 4.30ಕ್ಕೆ

■ **ಚಿನ್ಮಯ ಮಿಷನ್ :** ಕೃಷ್ಣರಾವ್ ಪ್ರಕಾಶ್ ಅವರಿಂದ ಪತಂಜಲಿಯ ಯೋಗ ಸೂತ್ರಗಳು–ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಯುವ ಬ್ರಿಗೇಡ್ :** ನನ್ನ ಬದುಕಿಗೂ ಗ್ಯಾರಂಟಿ ಕೊಡಿ, ಗೋ ಸಂರಕ್ಷಕ ಫೈಜ್ ಖಾನ್ ಅವರಿಂದ ಉಪನ್ಯಾಸ, ಸಾನ್ನಿಧ್ಯ : ಶ್ರೀ 1008 ಮಹಾಂತ ಶ್ರೀ ಚೇತನ್ ಗಿರಿ ಮಹಾರಾಜ್, ಮುಖ್ಯ ಅತಿಥಿಗಳು : ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಲಕ್ಷ್ಮೀಪುರಂ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 6.10ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಪದ ಸಂಸ್ಕೃತಿ, ಪ್ರಸ್ತುತಿ– ಪರಮೇಶ್ವರ ವಿ. ಭಟ್, 7.15 ಭಾವಗೀತೆ–ಮಡಿಕೇರಿ ನಾಗೇಂದ್ರ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ– ಮೈಸೂರು ಉಮೇಶ್, 8.40 ಪಂಪನ ಪೆಂಪು–ಪಂಪ ಭಾರತದ ನಾಟಕೀಯ ಸನ್ನಿವೇಶಗಳನ್ನಾಧರಿಸಿದ ಕಾರ್ಯಕ್ರಮ. ಪ್ರಸ್ತುತಿ– ಜಿ. ಶಾಂತಕುಮಾರ್, 10.00 ನಾರಾಯಣ ಅಯ್ಯಂಗಾರ್–ಗೋಟುವಾದ್ಯ, 11.00ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಎ.ಎನ್.ಶೀಲಾ, 1.00 ಪ್ರಗತಿಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಸಿ. ಶಶಿಕಲಾ ಚಂದ್ರಶೇಖರ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 4.00 ಜನಪದ ಸಂಗೀತ –ದೊಡ್ಡ ರಾಚಪ್ಪ ಮತ್ತು ಸಂಗಡಿಗರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.55 ಕೃಷಿರಂಗ–ಕಿಸಾನ್‌ವಾಣಿ–ತೋಟಗಾರಿಕೆ ಬೆಳೆಗಳ ಸೈಸಗಳ ಲಭ್ಯತೆ ಹಾಗೂ ನಿಖರ ಬೇಸಾಯ ತಾಂತ್ರಿಕತೆಗಳನ್ನು ಕುರಿತು ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಎಂ.ಎಸ್. ರಾಜು, ಉಪನಿರ್ದೇಶಕರು, 8.00 ಯುವವಾಣಿ–ಅಂತಾರಾಷ್ಟ್ರೀಯ ಮಾದಕ ವಸ್ತು ದುರ್ಬಳಕೆ ಹಾಗೂ ಔಷಧಗಳ ಕಳ್ಳ ಸಾಗಾಣಿಕೆಯ ವಿರೋಧಿ ದಿನಾಚರಣೆಯ ಸಂದರ್ಭದಲ್ಲಿ ಚರ್ಚೆ, ಭಾಗವಹಿಸುವವರು ಮೈಸೂರಿ ವಿಶ್ವವಿದ್ಯಾಲಯದ ಸ್ನಾತಕೋತ್ತರ ಇಂಗ್ಲೀಷ್ ಹಾಗೂ ರಾಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು, 9.30 ಕನ್ನಡ ಭಾರತಿ, 10.00 ನಾಟಕ "ಮಾಯಾಮೃಗ", ಮೂಲಕಥೆ– ಪೂರ್ಣಚಂದ್ರ ತೇಜಸ್ವಿ, ಬಾನುಲಿಗೆ, ಅಳವಡಿಸಿದವರು– ಅ.ನ.ರಾವ್ ಜಾಧವ್, ನಿರ್ಮಾಣ ಎಸ್.ಎಸ್. ಉಮೇಶ್, 10.30 ಸವಿನೆನಪು

ಭಾರತದಲ್ಲಿ ಪ್ರತಿದಿನ 195 ಶ್ರವಣದೋಷ ಮಕ್ಕಳ ಜನನ

●ದೋಷ ನಿವಾರಣೆಗೆ ಪೈಲೆಟ್ ಪ್ರಾಜೆಕ್ಟ್‌ಗೆ ಮೈಸೂರು ಆಯ್ಕೆ
●ಇದು ಯಶಸ್ವಿಯಾದರೆ ದೇಶದಾದ್ಯಂತ ಯೋಜನೆ ಜಾರಿ

ಮೈಸೂರು, ಜೂ.21(ಬಿಎಲ್‌ಯು)– ನವಜಾತ ಶಿಶುವಿನಲ್ಲಿ ಕಂಡು ಬರುವ ಶ್ರವಣದೋಷ ನಿವಾರಣೆ ಮಾಡುವ ಪ್ರಾಯೋಜಿಕ ಯೋಜನೆಗೆ ಕೇಂದ್ರ ಸರ್ಕಾರ ಮೈಸೂರನ್ನು ಆಯ್ಕೆ ಮಾಡಿಕೊಂಡಿದೆ. ಇಡೀ ದೇಶಕ್ಕೆ ಮಾದರಿಯಾಗುವ ಈ ಯೋಜನೆಗೆ ಮೈಸೂರಿನಲ್ಲೇ ಚಾಲನೆ ನೀಡಲಾಗುತ್ತಿದೆ.

ಇಡೀ ವಿಶ್ವವೇ ಭಾರತದ ಅಭಿವೃದ್ಧಿಯನ್ನು ಕುತೂಹಲದಿಂದ ನೋಡುತ್ತಿದೆ ಎಂದು ಅಧಿಕಾರಕ್ಕೆ ಬರುವ ಎಲ್ಲಾ ಪಕ್ಷಗಳ ಸರ್ಕಾರಗಳು ಬೊಬ್ಬೆ ಹೊಡೆಯುತ್ತವೆ. ಆದರೆ ಸ್ವಾತಂತ್ರ್ಯ ಬಂದು 75 ವರ್ಷವಾದರೂ ಮಕ್ಕಳನ್ನು ಶ್ರವಣ ದೋಷ ಮುಕ್ತಗೊಳಿಸುವ ಕಾರ್ಯವನ್ನು ಇದುವರೆಗೂ ಕೈಗೆತ್ತಿಕೊಂಡಿರಲಿಲ್ಲ. ಆದರೆ ಈಗ ಮಕ್ಕಳನ್ನು ಶ್ರವಣ ದೋಷ ಮುಕ್ತ ಮಾಡುವ ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿ ಮಾಡಿದೆ. ಒಂದು ಸಾವಿರದಲ್ಲಿ ಕನಿಷ್ಠ ಮೂರು ಮಕ್ಕಳಲ್ಲಿ ಶ್ರವಣದೋಷ ಇರುತ್ತದೆ. 145 ಕೋಟಿ ಜನಸಂಖ್ಯೆ ಇರುವ ಭಾರತದಲ್ಲಿ ಕನಿಷ್ಠ ಒಂದು ದಿನಕ್ಕೆ 65 ಸಾವಿರ ಮಕ್ಕಳು ಜನಿಸುತ್ತವೆ. ಇವುಗಳಲ್ಲಿ ಕನಿಷ್ಠ 195 ಮಕ್ಕಳಲ್ಲಿ ಶ್ರವಣದೋಷವಿರುತ್ತದೆ.

ನವಜಾತ ಶಿಶುವಿನಲ್ಲಿ ಶ್ರವಣದೋಷ ಇದೆ ಎಂಬುದು ಮಕ್ಕಳ ತಜ್ಞ ವೈದ್ಯರ ಅರಿವಿಗೂ ಬರುವುದಿಲ್ಲ. ಮಗುವಿನ ಕಿವಿಯ ಹೊರ ಭಾಗ ಚೆನ್ನಾಗಿರುತ್ತದೆ. ಆದರೆ ಕಿವಿಯ ಒಳ ಭಾಗದಲ್ಲಿ ದೋಷವಿರುತ್ತದೆ. ವಂಶವಾಹಿ ಹಾಗೂ ತಾಯಿಯ ಅನಾರೋಗ್ಯದ ಕಾರಣದಿಂದ ಮಗುವಿನಲ್ಲಿ ಶ್ರವಣದೋಷ ಉಂಟಾಗುತ್ತದೆ. ಆರಂಭದಲ್ಲೇ ಸೂಕ್ತ ಚಿಕಿತ್ಸೆ ನೀಡಿದರೆ ನವಜಾತ ಶಿಶುವಿನಲ್ಲಿ ಕಂಡು ಬರುವ ಶ್ರವಣದೋಷವನ್ನು ಸರಿಪಡಿಸಬಹುದು. ಇದಕ್ಕೆ ಮಗುವಿಗೆ ನ್ಯೂ ಬಾರ್ನ್ ಹಿಯರಿಂಗ್ ಸ್ಕ್ರೀನಿಂಗ್ ಅಥವಾ ನವಜಾತ ಶಿಶುವಿನ ಶ್ರವಣ



ಪರೀಕ್ಷೆ ನಡೆಸಬೇಕಾಗುತ್ತದೆ. ಅಮೆರಿಕಾ, ಚೀನಾ, ಜಪಾನ್ ಸೇರಿದಂತೆ ಅಭಿವೃದ್ಧಿ ಹೊಂದಿದ ಹಲವು ದೇಶಗಳಲ್ಲಿ ನವಜಾತ ಶಿಶುವಿನ ಶ್ರವಣ ಪರೀಕ್ಷೆ ಕಡ್ಡಾಯವಾಗಿದೆ. ಮಗು ಜನಿಸಿದ ನಂತರ ಅದಕ್ಕೆ ಶ್ರವಣದೋಷ ಇದೆಯೇ, ಇಲ್ಲವೇ ಎಂದು ತಿಳಿಯಲು ಕಡ್ಡಾಯವಾಗಿ ಮಗುವಿಗೆ ಶ್ರವಣದೋಷ ಪರೀಕ್ಷೆ ಮಾಡಿಸಲಾಗುತ್ತದೆ. ಆದರೆ ಇಡೀ ಭಾರತ ದೇಶದಲ್ಲಿ ಈ ವ್ಯವಸ್ಥೆ ಇಲ್ಲ. ಈ ನಿಟ್ಟಿನಲ್ಲಿ ಇನ್ನು ಮುಂದೆ ಜನಿಸುವ ಮಕ್ಕಳಲ್ಲಿ ಎದುರಾಗುವ ಶ್ರವಣದೋಷ ಮುಕ್ತ ಮಾಡಲು ಕೇಂದ್ರ ಸರ್ಕಾರ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ ರೂಪಿಸಿದೆ.



ನವಜಾತ ಶಿಶುವಿನ ಶ್ರವಣದೋಷ 1950ರ ಅವಧಿಯಲ್ಲೇ ಬೆಳಕಿಗೆ

ನವಜಾತ ಶಿಶುವಿನಲ್ಲಿ ಶ್ರವಣದೋಷ ಇದೆ ಎಂಬುದು 1950ರ ಅವಧಿಯಲ್ಲೇ ವೈದ್ಯರಿಗೆ ಅರಿವಾಯಿತು. ಇದನ್ನು ಪತ್ತೆ ಮಾಡಲು ನವಜಾತ ಶಿಶುವಿನ ಶ್ರವಣ ಪರೀಕ್ಷೆಯ ಪರಿಕಲ್ಪನೆ 1970ರ ಅವಧಿಯಲ್ಲಿ ಆರಂಭವಾಯಿತು.

ನವಜಾತ ಶಿಶುವಿನಲ್ಲಿ ಶ್ರವಣದೋಷ ಇದೆಯೇ ಎಂಬುದನ್ನು ಪತ್ತೆ ಮಾಡುವ ಯಂತ್ರಗಳ ಸಂಶೋಧನಾ ಕಾರ್ಯ ಅಂದಿನಿಂದಲೇ ಆರಂಭವಾಗಿ 1990ರ ಅವಧಿಯಲ್ಲಿ ಅದನ್ನು ಕಂಡುಹಿಡಿಯಲಾಯಿತು. ಅಮೆರಿಕಾ ಸೇರಿದಂತೆ ಹಲವು ದೇಶಗಳಲ್ಲಿ 1990ರಿಂದಲೇ ನವಜಾತ ಶಿಶುವಿನ ಶ್ರವಣದೋಷ ಪರೀಕ್ಷೆ ಮಾಡುವುದು ಆರಂಭವಾಯಿತು. ಆ ದೇಶಗಳಲ್ಲಿ ಇದನ್ನು ಕಡ್ಡಾಯ ಮಾಡಲಾಗಿ ಶೇ.98ರಷ್ಟು ಮಕ್ಕಳಲ್ಲಿ ಶ್ರವಣದೋಷ ಇಲ್ಲದಂತಾಗಿದೆ. ಆದರೆ ಭಾರತದಲ್ಲಿ ಈಗ ನವಜಾತ ಶಿಶುವಿನ ಶ್ರವಣದೋಷ ಪರೀಕ್ಷೆ ಅಥವಾ ಸ್ಕ್ರೀನಿಂಗ್ ಮಾಡುವ ಕಾರ್ಯ ಆರಂಭವಾಗಿದೆ. ಇಲ್ಲೂ ಕೂಡ ಸ್ಕ್ರೀನಿಂಗ್ ಅನ್ನು ಕಡ್ಡಾಯ ಮಾಡಿ, ಸೂಕ್ತ ಚಿಕಿತ್ಸೆ ಕೊಟ್ಟರೆ ಭಾರತ ಕೂಡ ಮಕ್ಕಳ ಶ್ರವಣದೋಷ ಮುಕ್ತ ದೇಶವಾಗಲಿದೆ.

ಇದಕ್ಕೆ ಕೇಂದ್ರ ಸರ್ಕಾರ ಮೈಸೂರು ಜಿಲ್ಲೆಯನ್ನು ಪೈಲೆಟ್ ಪ್ರಾಜೆಕ್ಟ್ ಆಗಿ ಆಯ್ಕೆ ಮಾಡಿದೆ. ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಮೂಲಕ ಈ ಯೋಜನೆ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಓಟೊ ಅಕೌಸ್ಟಿಕ್ ಎಮಿಷನ್ಸ್ ಹಾಗೂ ಆಟೋ ಮ್ಯಾಟೇಡ್ ಎಬಿಆರ್ ಎಂಬ ಆಧುನಿಕ ಯಂತ್ರದ ಮೂಲಕ ನವಜಾತ ಶಿಶುವಿನ ಶ್ರವಣ ದೋಷವನ್ನು ಕಂಡು ಹಿಡಿಯಬಹುದು. ಪ್ರತಿಯೊಂದು ಮಗುವಿನಲ್ಲಿ ಶ್ರವಣದೋಷ ಇದ್ದರೆ ಅದಕ್ಕೆ ಸೂಕ್ತ ಚಿಕಿತ್ಸೆ ನೀಡಿದರೆ ಮಗುವಿಗೆ ಇರುವ ಶ್ರವಣದೋಷ ನಿವಾರಣೆ ಮಾಡಬಹುದು. ಈ ಬಗ್ಗೆ ನಿರ್ಲಕ್ಷ್ಯ ತೋರಿದರೆ ಮಗುವಿನಲ್ಲಿ ಶ್ರವಣದೋಷ ಜೊತೆಗೆ ಮಾತನಾಡದ ಪರಿಸ್ಥಿತಿಯೂ ಬರುತ್ತದೆ. ಈ ಹಿನ್ನೆಲೆ ಪ್ರತಿಯೊಂದು ಮಗುವನ್ನು ಸ್ಕ್ರೀನಿಂಗ್‌ಗೆ ಒಳಪಡಿಸಿದರೆ ಅದರಲ್ಲಿ ಇರುವ ಶ್ರವಣದೋಷ ತಿಳಿಯುತ್ತದೆ. ಆಗ ಆ ಮಗುವಿಗೆ 1 ತಿಂಗಳ ಕಾಲ ತಜ್ಞ ವೈದ್ಯರಿಂದ ಚಿಕಿತ್ಸೆ ನೀಡಿದರೆ ಅದನ್ನು ಶ್ರವಣದೋಷ ಮುಕ್ತ ಮಾಡಬಹುದು.

ಮಕ್ಕಳ ಶ್ರವಣದೋಷ ಮುಕ್ತ ಮಾಡಲು ಕೇಂದ್ರ ಸರ್ಕಾರ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ ರೂಪಿಸಿದೆ. ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯು ಈ ಯೋಜನೆ ಅನುಷ್ಠಾನಕ್ಕೆ ಇಡೀ ಜಿಲ್ಲೆಗೆ 100 ಸಿಬ್ಬಂದಿ ನಿಯೋಜಿಸಿದೆ. ಮೈಸೂರು ನಗರ ಹಾಗೂ ಜಿಲ್ಲೆಯ 8 ತಾಲೂಕು ಕೇಂದ್ರಗಳ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗೆ ಹೋಗುವ ಸಿಬ್ಬಂದಿ ನವಜಾತ ಶಿಶುವನ್ನು ಸ್ಕ್ರೀನಿಂಗ್‌ಗೆ ಒಳಪಡಿಸಲಿದ್ದಾರೆ. ಇದು ಯಶಸ್ವಿಯಾದ ಮೇಲೆ ಮೈಸೂರು ಮಾದರಿಯ ಈ ಯೋಜನೆಯನ್ನು ಇಡೀ ದೇಶದ ಎಲ್ಲಾ ಜಿಲ್ಲೆಯಲ್ಲೂ ಅನುಷ್ಠಾನ ಮಾಡಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಸಿಬ್ಬಂದಿಗೆ ತರಬೇತಿ ಆರಂಭಿಸಲಾಯಿತು. ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್, ಜಿಪಂನ ಯೂನಿಸೆಫ್ ಪ್ರಾದೇಶಿಕ ನಿರ್ದೇಶಕ ಡಾ.ರವೀಶ್, ಆಡಿಯೋಲಜಿ ವಿಭಾಗದ ಮುಖ್ಯಸ್ಥ ಡಾ.ಸಂದೀಪ್ ಈ ವೇಳೆ ಉಪಸ್ಥಿತರಿದ್ದರು.

ಯುನಿಲೆಟ್ ಕುವೆಂಪುನಗರ ಶಾಖೆ ಆರಂಭ



ಮೈಸೂರು, ಜೂ.21(ಎಸ್‌ಪಿಎನ್)– ಮೈಸೂರು ಕುವೆಂಪುನಗರದ ವಿಶ್ವಮಾನವ ಜೋಡಿ ರಸ್ತೆಯಲ್ಲಿರುವ ಯುನಿಲೆಟ್ ಡಿಜಿ ಟಲ್ ಶೋ ರೂಂಗೆ ನಟ ಡಾಲಿ ಧನಂಜಯ್ ಬುಧವಾರ ಚಾಲನೆ ನೀಡಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಯುನಿಲೆಟ್ ಡಿಜಿಟಲ್ ಶೋ ರೂಂನಲ್ಲಿ ಉತ್ತಮ ತಂತ್ರಜ್ಞಾನವುಳ್ಳ ಮೊಬೈಲ್, ಗೃಹೋಪಯೋಗಿ ಸಾಮಗ್ರಿಗಳು ಹಾಗೂ ಎಲ್ಲ ಗ್ರಾಹಕರಿಗ ಒಪ್ಪುವ ರೀತಿ ಸಾಧನಗಳು ದೊರೆಯುತ್ತವೆ. ಈ ಶೋ ರೂಂಗೆ ಗ್ರಾಹಕರು ಆಗಮಿಸಿ, ಖರೀದಿಸುವಂತೆ ಮನವಿ ಮಾಡಿದರು.

ಮೈಸೂರಲ್ಲಿ ಯುನಿಲೆಟ್‌ನ ನಾಲ್ಕನೇ ಶಾಖೆ ಇದಾಗಿದೆ. ಉತ್ತಮ ತಂತ್ರಜ್ಞಾನವುಳ್ಳ ವಾಷಿಂಗ್ ಮೆಷಿನ್, ವಿವಿಧ ಕಂಪನಿಗಳ ಫ್ರಿಡ್ಜ್, ವಿವಿಧ ಕಂಪನಿಗಳ ಮೊಬೈಲ್ ಫೋನ್‌ಗಳು, ಲ್ಯಾಪ್‌ಟಾಪ್ ಸೇರಿದಂತೆ ಹಲ ವಾರು ಸಾಮಗ್ರಿಗಳು ದೊರಕುತ್ತವೆ. ಉತ್ತಮ ಸಾಲ ಸೌಲಭ್ಯ ಕೂಡ ಇದೆ. ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಯುನಿ ಲೆಟ್ ಡಿಜಿಟಲ್ ಶೋ ರೂಂ ಮಾಲೀಕ ಉಮಾಯಾನ್ ಫಯಾಜ್, ಬ್ಯುಸಿನೆಸ್ ಹೆಡ್ ಮುರುಳಿ, ಆಯಾಜ್, ಅಭಿಜಿತ್ ಉಪಸ್ಥಿತರಿದ್ದರು.

ಕಲ್ಯಾಣಿ ಮೋಟಾರ್ಸ್‌ನಿಂದ ಜಿಮ್ನಿ ಬಿಡುಗಡೆ...



ಮೈಸೂರಿನ ವಾಣಿವಿಲಾಸ ರಸ್ತೆಯಲ್ಲಿರುವ ಕಲ್ಯಾಣಿ ಮೋಟಾರ್ಸ್ ನೆಕ್ಸಾದಲ್ಲಿ ಹೊಸ ಮಾರುತಿ ಸುಜುಕಿಯ ಜಿಮ್ನಿ ವಾಹನವನ್ನು ಬಿಡುಗಡೆ ಮಾಡಲಾಯಿತು. ಈ ವೇಳೆ ಚಿತ್ರನಟ ವಸಿಷ್ಠ ಎನ್.ಸಿಂಹ, ಕಲ್ಯಾಣಿ ಮೋಟಾರ್ಸ್ ಪ್ರೈ. ಲಿ.ನ ಹಿರಿಯ ಜನರಲ್ ಮ್ಯಾನೇಜರ್ ಶ್ರೀಮತಿ ಮಾಧುರಿ, ಮೈಸೂರು ಎನ್‌ಸಿಸಿ ಗ್ರೂಪ್‌ನ ಗ್ರೂಪ್ ಕಮಾಂಡರ್ ಕರ್ನಲ್ ಆರ್.ಆರ್.ಮೆನನ್, ತರಬೇತಿ ಅಧಿಕಾರಿ ಎಲ್‌ಟಿ ಕರ್ನಲ್ ಹಿತೇಶ್ ಕಲಾ ಇನ್ನಿತರರು ಉಪಸ್ಥಿತರಿದ್ದರು.

ಸಚಿವ ಎಂ.ಬಿ.ಪಾಟೀಲ್ ಕುರಿತು ಸಂಸದ ಪ್ರತಾಪ್ ಸಿಂಹ ಹೇಳಿಕೆಗೆ ವೀರಶೈವ ಲಿಂಗಾಯತ ಮುಖಂಡರ ಖಂಡನೆ



ಲೋಕಸಭಾ ಚುನಾವಣೆಗೆ ಇನ್ನು 10 ತಿಂಗಳು ಬಾಕಿ ಇದ್ದು, ಇನ್ನಾದರೂ ಪ್ರತಾಪ್ ಸಿಂಹ ಅವರು ಈ ರೀತಿ ವರ್ತಿಸುವುದನ್ನು ಬಿಡಬೇಕು. ಇಲ್ಲವಾದರೆ ಚುನಾವಣೆಯಲ್ಲಿ ವೀರಶೈವ ಲಿಂಗಾಯತ ಸಮುದಾಯ ಅವರಿಗೆ ತಕ್ಕ ಪಾಠ ಕಲಿಸಲಿದೆ.
–ಪ್ರದೀಪ್‌ಕುಮಾರ್, ಮಾಜಿ ಕಾರ್ಪೋರೇಟರ್

ಮೈಸೂರು,ಜೂ.21(ಪಿಎಂ)– ಸಚಿವ ಎಂ.ಬಿ. ಪಾಟೀಲ್ ಅವರ ಬಗ್ಗೆ ಲಘುವಾಗಿ ಮಾತನಾಡುವುದು ಪ್ರತಾಪ್ ಸಿಂಹ ಅವರ ಸಂಸದ ಸ್ಥಾನಕ್ಕೆ ಶೋಭೆಯಲ್ಲ ಎಂದು ಎಂ.ಬಿ.ಪಾಟೀಲ್ ಅಭಿಮಾನಿಗಳ ಬಳಗದ ಸದಸ್ಯರು ಹಾಗೂ ವೀರಶೈವ ಲಿಂಗಾಯತ ಸಮುದಾಯದ ಮುಖಂಡರು ಖಂಡಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಳಗದ ಸಂಚಾಲಕ ಶರಣ ಮಹಾದೇವಪ್ಪ, ಸಚಿವ ಎಂ.ಬಿ.ಪಾಟೀಲ್ ಅವರ ಬಗ್ಗೆ ಸಂಸದ ಪ್ರತಾಪ್ ಸಿಂಹ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಪ್ರತಾಪ್ ಸಿಂಹ ಅವರ ಇಂತಹ ಮಾತುಗಳು ಅವರೊಬ್ಬ ಬಾಲಿಶ ವ್ಯಕ್ತಿ ಎಂಬುದನ್ನು ತೋರಿಸುತ್ತದೆ ಎಂದು ತಿರುಗೇಟು ನೀಡಿದರು.

ಸಿದ್ದರಾಮಯ್ಯನವರು ಸಮಾಜವಾದಿ ಹಿನ್ನೆಲೆಯಿಂದ ಬಂದ ಜನಪರ ನಾಯಕರು. ಸ್ವಯಂ ವರ್ಚಸ್ಸಿನಿಂದ ರಾಜಕಾರಣದಲ್ಲಿ ಪ್ರವರ್ಧಮಾನಕ್ಕೆ ಬಂದವರು. ಅವರ ಸಮಾನಮನಸ್ಕ ಆಪ್ತ ಬಳಗದಲ್ಲಿ ಎಂ.ಬಿ.ಪಾಟೀಲ್ ಪ್ರಮುಖರು. ಎಂ.ಬಿ.ಪಾಟೀಲ್ ಅವರು 27ನೇ ವಯಸ್ಸಿಗೆ ಶಾಸಕರಾಗಿ, 33ನೇ ವಯಸ್ಸಿಗೆ ಸಂಸದರಾದವರು. ಅವರು ನುಡಿದಂತೆ ನಡೆಯುವ ಸಜ್ಜನ ರಾಜಕಾರಣಿ. ಅವರ ಬಗ್ಗೆ ಹಗುರವಾಗಿ ಮಾತನಾಡಿರುವುದು ಪ್ರತಾಪ್ ಸಿಂಹ ಅವರ ಸಣ್ಣತನ ತೋರಿಸುತ್ತದೆ ಎಂದು ಕಿಡಿಕಾರಿದರು.

ಮಂತ್ರಿಯಾಗುವುದು ದುಡ್ಡು ಮಾಡಲಿಕ್ಕಾಗಿಯೇ ಎಂಬಂತೆ ಪ್ರತಾಪ್ ಸಿಂಹ ಭಾವಿಸಿದ್ದಾರೆ. ಎಂ.ಬಿ. ಪಾಟೀಲರು ಯಾವ ಖಾತೆ ಕೊಟ್ಟರೂ ಸಮರ್ಥವಾಗಿ ನಿಭಾಯಿಸುತ್ತಾರೆ. ಬಿ.ಎಲ್.ಸಂತೋಷ್ ಅವರನ್ನು ಯಾರೂ ದ್ವೇಷಿಸಿಲ್ಲ. ಅವರು ಬ್ರಾಹ್ಮಣರೋ, ಅಲ್ಲವೋ ಅದು ನಮಗೆ ಮುಖ್ಯವಲ್ಲ. ಬಿ.ಎಸ್.ಯಡಿಯೂರಪ್ಪರನ್ನು ಪದಚ್ಯುತಿಗೊಳಿಸುವಲ್ಲಿ ಅವರ ಪಾತ್ರ ಇರುವ ಕಾರಣ ಸಹಜವಾಗಿಯೇ ಲಿಂಗಾಯತ ಸಮುದಾಯ ಕೋಪಗೊಂಡಿದೆ. ಅಲ್ಲದೆ, ಎಂ.ಬಿ.ಪಾಟೀಲ್ ಅವರ ಜೊತೆಗೆ ಬೇರೆ ಪಕ್ಷದ ಲಿಂಗಾಯತ ಮುಖಂಡರು ನೊಂದುಕೊಂಡಿದ್ದುಂಟು. ದ್ವೇಷಿಸಲಿಕ್ಕಾಗಲೀ ಪ್ರೀತಿಸಲಿಕ್ಕಾಗಲೀ ಒಂದು ವ್ಯಕ್ತಿತ್ವ ಬೇಕಾಗುತ್ತದೆ. ಅಂತಹ ಯಾವುದೇ ವ್ಯಕ್ತಿತ್ವ ಬಿ.ಎಲ್. ಸಂತೋಷ್ ಅವರಲ್ಲಿ ಇಲ್ಲ ಎಂದು ಕುಟುಕಿದರು.

ಎಂ.ಬಿ.ಪಾಟೀಲ್ ನಿಜವಾಗಿಯೂ ಲಿಂಗಾಯತರೇ ಆಗಿದ್ದಾರೆ. ಅದಕ್ಕಾಗಿಯೇ ಅವರು ಬಸವ ತತ್ವದಂತೆ ನಡೆದು ಬಿಜಾಪುರ ಜನತೆಯ ಪಾಲಿಗೆ ಎಂದೆಂದಿಗೂ ಸಲ್ಲುವ ನಾಯಕರಾಗಿದ್ದಾರೆ. ಅವರ ಬಗ್ಗೆ ಮತ್ತೆ ಲಘುವಾಗಿ ಮಾತನಾಡಿದರೆ ಸಮುದಾಯ ಬೀದಿಗಿಳಿದು ಹೋರಾಟ ನಡೆಸಬೇಕಾಗುತ್ತದೆ ಎಂದು ಪ್ರತಾಪ್ ಸಿಂಹರಿಗೆ ಎಚ್ಚರಿಸಿದರು.

ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಎಂ.ಪ್ರದೀಪ್ ಕುಮಾರ್ ಮಾತನಾಡಿ, ಬೆಳಗ್ಗೆ ಎದ್ದ ತಕ್ಷಣ ತೀಟೆ ತೆಗೆದು ಜಗಳ ಶುರು ಮಾಡುವುದೇ ಪ್ರತಾಪ್ ಸಿಂಹ ಅವರ ಕೆಲಸವಾಗಿದೆ. 2014ರಲ್ಲಿ ಸಂಸದರಾಗಿ ಅವರು ಮೈಸೂರಿಗೆ ಬಂದಾಗ, ಧರ್ಮ ಧರ್ಮಗಳ ನಡುವೆ ಕೋಮು ದ್ವೇಷ ಹುಟ್ಟುವಂತೆ ಹೇಳಿಕೆ ನೀಡಿ ಪ್ರಚೋದಿಸುತ್ತಿದ್ದರು. ಈಗ ಜಾತಿ ಜಾತಿಗಳ ನಡುವೆ ದ್ವೇಷ ಸೃಷ್ಟಿಸಲು ಹೊರಟಿದ್ದಾರೆ. ಬಸವ ತತ್ವದಡಿ ಸಾಮಾಜಿಕ ಕೆಲಸ ಮಾಡುತ್ತಿರುವ ಎಂ.ಬಿ.ಪಾಟೀಲ್ ಅವರಂತಹ ನಾಯಕರ ಬಗ್ಗೆ ಲಘುವಾಗಿ ಮಾತನಾಡಿರುವುದು ಖಂಡನೀಯ ಎಂದು ತೀವ್ರವಾಗಿ ಕಿಡಿಕಾರಿದರು. ಕೃಷ್ಣರಾಜ ಬ್ಯಾಂಕ್ ಅಧ್ಯಕ್ಷ ಪ್ರತಿಧ್ವನಿ ಪ್ರಸಾದ್, ಕಾಂಗ್ರೆಸ್ ಪ್ರಚಾರ ಸಮಿತಿ ರಾಜ್ಯ ಸಂಚಾಲಕ ಆಲನಹಳ್ಳಿ ಪುಟ್ಟಸ್ವಾಮಿ, ವೀರಶೈವ ಲಿಂಗಾಯತ ಮಹಾಸಭಾ ಮೈಸೂರು ಪ್ರಧಾನ ಕಾರ್ಯದರ್ಶಿ ಕೆ.ಎಸ್.ಪ್ರಕಾಶ್, ಮುಖಂಡ ವಿರೂಪಾಕ್ಷ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರಲ್ಲಿ ಧಾರಾಕಾರ ವರ್ಷಧಾರೆ

ಮೈಸೂರು, ಜೂ.21(ಆರ್‌ಕೆ)–ಮೈಸೂರಲ್ಲಿ ಬುಧವಾರ ಮಧ್ಯಾಹ್ನದಿಂದ ರಾತ್ರಿವರೆಗೂ ಧಾರಾಕಾರ ಮಳೆ ಸುರಿಯಿತು.

ಮಧ್ಯಾಹ್ನ ಸುಮಾರು 1.45 ಗಂಟೆಗೆ ಆರಂಭವಾದ ಮಳೆ ನಿರಂತರವಾಗಿ ಮಧ್ಯಾಹ್ನ 3 ಗಂಟೆವರೆಗೆ ಸುರಿಯಿತು. ಮತ್ತೆ ಸಂಜೆ 5ರಿಂದ 7 ಗಂಟೆವರೆಗೆ ಬಿದ್ದ ಮಳೆಯಿಂದ ಜನಜೀವನಕ್ಕೆ ಅಡ್ಡಿಯಾಯಿತು. ಕೆ.ಆರ್.ಸರ್ಕಲ್, ದೇವರಾಜ ಮಾರುಕಟ್ಟೆ, ದೊಡ್ಡ ಗಡಿಯಾರ ಸರ್ಕಲ್, ಶೇಷಾದ್ರಿ ಅಯ್ಯರ್ ರಸ್ತೆಯ ಓಲ್ಡ್ ಆರ್‌ಎಂಸಿ ಬಳಿ, ರಿಂಗ್ ರಸ್ತೆಯ ಕೆಲವೆಡೆ ನೀರು ನಿಂತು ವಾಹನ ಸಂಚಾರಕ್ಕೆ ಅಡ್ಡಿಯುಂಟಾಯಿತು. ತಗ್ಗು ಪ್ರದೇಶ, ಕೊಳಚೆ ಪ್ರದೇಶಗಳಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗಲು ಅವಕಾಶವಾಗದೇ ಮನೆಗಳಿಗೂ ನುಗ್ಗಿತ್ತು. ಮಳೆಯಿಂದಾಗಿ ವಿದ್ಯಾರ್ಥಿಗಳು, ಬೀದಿಬದಿ ವ್ಯಾಪಾರಿಗಳು, ವಿವಿಧ ಸಂಸ್ಥೆ, ಸರ್ಕಾರಿ ಕಚೇರಿ ಸಿಬ್ಬಂದಿ ಹಾಗೂ ಸಾರ್ವಜನಿಕರು ಓಡಾಡಲು ಪರಿತಪಿಸುವಂತಾಯಿತು.


ದೊಡ್ಡ ಮೋರಿ, ಚರಂಡಿಗಳಲ್ಲಿ ನೀರು ಉಕ್ಕಿ ಹರಿಯಿತು. ಪರಿಣಾಮ ಜನರು ಮಳೆಯಿಂದ ರಕ್ಷಣೆ ಪಡೆಯಲು ಕಟ್ಟಡಗಳು, ಮರಗಳನ್ನು ಆಶ್ರಯಿಸುವಂತಾಯಿತು. ಬೆಳಗ್ಗೆಯಿಂದಲೂ ಮೋಡ ಮುಸುಕಿದ ವಾತಾವರಣವಿತ್ತು. ಮಧ್ಯಾಹ್ನ ಮಳೆ ಆರಂಭವಾಯಿತಾದರೂ, ಗಾಳಿ ಇಲ್ಲದ ಕಾರಣ ಮರದ ರೆಂಬೆಗಳು, ವಿದ್ಯುತ್ ಕಂಬಗಳು ಮುರಿದು ಬಿದ್ದು, ಅವಾಂತರವಾದ ಬಗ್ಗೆ ವರದಿಯಾಗಿಲ್ಲ.






ಮೈಸೂರಲ್ಲಿ ಫಿಲಂ ಸಿಟಿ ನಿರ್ಮಾಣ: ಗರಿಗೆದರಿದ ಚಟುವಟಿಕೆ

ಅಧಿಕಾರಿಗಳ ಭೇಟಿ ಮಾಡಿ, ಮಾಹಿತಿ ಕಲೆ ಹಾಕಲು ಮುಂದಾಗಿರುವ ಚಿತ್ರ ನಿರ್ದೇಶಕ ಎಸ್.ವಿ.ರಾಜೇಂದ್ರಸಿಂಗ್ ಬಾಬು





ಬೆಂಗಳೂರು ಟ್ರಾಫಿಕ್ ನಗರದ ಜೊತೆಗೆ ಟೆನ್ಷನ್ ನಗರವಾಗಿರುವುದರಿಂದ ಅಲ್ಲಿ ಚಿತ್ರೀಕರಣ ಮಾಡುವುದು ಕಷ್ಟಕರ. ಕರ್ನಾಟಕದ ಹೊರ ರಾಜ್ಯಗಳಲ್ಲಿರುವ ಫಿಲಂ ಸಿಟಿಗೆ ಹೋಗಿ ಚಿತ್ರೀಕರಣ ಮಾಡಲು ಸಾಕಷ್ಟು ಖರ್ಚಾಗುತ್ತದೆ. ಅದರ ಬದಲು ನಮ್ಮದೇ ಫಿಲಂ ಸಿಟಿ ಇದ್ದರೆ, ಇದಕ್ಕೆಲ್ಲ ಕಡಿವಾಣ ಬೀಳಲಿದ್ದು, ಮೈಸೂರು ಚಿತ್ರೀಕರಣಕ್ಕೆ ಸ್ನೇಹಿ ನಗರವಾಗಿದೆ. ಇದರಿಂದ ಕನಿಷ್ಠ 50 ಸಾವಿರ ಮಂದಿಗೆ ಉದ್ಯೋಗ ಸಿಗುತ್ತದೆ. ಸಿನಿಮಾ ಅಥವಾ ಧಾರಾವಾಹಿಗಳ ಚಿತ್ರೀಕರಣ ನಡೆದರೆ 2 ಸಾವಿರ ಮಂದಿ ಜೀವನಕ್ಕೆ ದಾರಿಯಾಗಲಿದೆ. **–ರಾಜೇಂದ್ರಸಿಂಗ್ ಬಾಬು, ಚಿತ್ರ ನಿರ್ದೇಶಕ, ನಿರ್ಮಾಪಕ**

ಮೈಸೂರು, ಜೂ.21(ಜಿಎ)– ಕಾಂಗ್ರೆಸ್ ಸರ್ಕಾರ ಮುಂದಿನ ತಿಂಗಳು ಮಂಡಿಸಲಿರುವ ಬಜೆಟ್ ನಂತರ ಮೈಸೂರಿನಲ್ಲಿ ಫಿಲಂ ಸಿಟಿಗೆ ಅಧಿಕೃತವಾಗಿ ಚಾಲನೆ ದೊರೆಯುವ ಸಾಧ್ಯತೆ ಹೆಚ್ಚಿದ್ದು, ಮತ್ತೆ ಮೈಸೂರಿನಲ್ಲಿ ಕನ್ನಡ ಚಿತ್ರರಂಗದ ಚಟುವಟಿಕೆಗಳು ಆರಂಭವಾಗುವ ನಿರೀಕ್ಷೆ ಮೂಡಿದೆ.

ರಾಜ್ಯದಲ್ಲಿ ನೂತನ ಸರ್ಕಾರ ಅಧಿಕಾರದ ಚುಕ್ಕಾಣಿ ಹಿಡಿದ ನಂತರ ಮೈಸೂರಿನಲ್ಲಿ ಫಿಲಂ ಸಿಟಿ ನಿರ್ಮಾಣ ಮಾಡುವ ಹಿನ್ನೆಲೆಯಲ್ಲಿ ನಿರ್ದೇಶಕ ಹಾಗೂ ನಿರ್ಮಾಪಕ ಎಸ್.ವಿ.ರಾಜೇಂದ್ರಸಿಂಗ್ ಬಾಬು ನೇತೃತ್ವದಲ್ಲಿ ಚಲನಚಿತ್ರ ಕಲಾವಿದರ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿ, ಫಿಲಂ ಸಿಟಿಯಿಂದ ಆಗುವ ಪ್ರಯೋಜನಗಳ ಕುರಿತು ತಿಳಿಸಿದ್ದರು.

ಮನವಿ ಸ್ವೀಕರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಕಾರಾತ್ಮಕವಾಗಿ ಸ್ಪಂದಿಸಿ, ಬಜೆಟ್ ನಂತರ ಅಧಿಕೃತವಾಗಿ ಚಾಲನೆ ನೀಡುವ ಭರವಸೆಯನ್ನು ನೀಡಿದ್ದರು. ಇದರಿಂದ ಕನ್ನಡ ಚಿತ್ರರಂಗದ ಕಲಾವಿದರು, ಕಾರ್ಮಿಕರು ಮತ್ತು ತಂತ್ರಜ್ಞರು ಮೈಸೂರಿನಲ್ಲಿ ಫಿಲಂ ಸಿಟಿ ಆರಂಭವಾದರೆ, ಎಲ್ಲರಿಗೂ ಅನುಕೂಲವಾಗುತ್ತದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ. ಸದ್ಯ ಎಸ್.ವಿ.ರಾಜೇಂದ್ರಸಿಂಗ್ ಬಾಬು ಮೈಸೂರಿನಲ್ಲಿ ಉಳಿದುಕೊಂಡು ಸಂಬಂಧ ಪಟ್ಟ ಅಧಿಕಾರಿಗಳನ್ನು ಭೇಟಿ ಮಾಡಿ, ಫಿಲಂ ಸಿಟಿಯ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದಾರೆ.

ಕರ್ನಾಟಕದಲ್ಲಿ ಫಿಲಂ ಸಿಟಿ ನಿರ್ಮಾಣ ಮಾಡಬೇಕೆಂದು ಕೆಲವು ಕಲಾವಿದರು ಕೈ ಹಾಕಿ ಅದು ಅಸಾಧ್ಯವೆಂದು ಹಿಂದೆ ಸರಿದಿದ್ದರು. ನಂತರ ರಾಜ್ಯ ಸರ್ಕಾರದ ವತಿಯಿಂದ ನಿರ್ಮಾಣ ಮಾಡಿಸಬೇಕೆಂದು ಚಿತ್ರರಂಗದ ಅನೇಕ ನಟರು, ನಿರ್ದೇಶಕರು ಒತ್ತಡ ಹಾಕಿದ ನಂತರ ಬೆಂಗಳೂರು, ಮೈಸೂರು, ಹೆಸರಘಟ್ಟ ನಂತರ ರಾಮನಗರದಲ್ಲಿ ನಿರ್ಮಾಣ ಮಾಡಬೇಕೆಂದು ಪ್ರಸ್ತಾಪವೂ ಬಂದಿತ್ತು. ಆದರೆ, ಡಾ.ರಾಜ್‌ಕುಮಾರ್, ಡಾ.ವಿಷ್ಣುವರ್ಧನ್ ಕೂಡ ಮೈಸೂರಿನಲ್ಲೇ ಚಿತ್ರನಗರಿ ಸ್ಥಾಪನೆಯಾಗಬೇಕೆಂದು ಬಯಸಿದ್ದರು. 2014ರಲ್ಲಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಗಳಾಗಿದ್ದಾಗ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ವರುಣ ವಿಧಾನಸಭಾ ಕ್ಷೇತ್ರದ ಇಮ್ಮಾವು ಕೈಗಾರಿಕಾ ಪ್ರದೇಶದಲ್ಲಿ 110 ಎಕರೆ ಜಾಗವನ್ನು ಗುರುತಿಸಿದ್ದರು. ನಂತರ ಅದರ ಬಗ್ಗೆ ಹೆಚ್ಚು ಚರ್ಚೆಯೂ ಆಗಲಿಲ್ಲ. ಮುಂದೆ ಬಂದ ಸರ್ಕಾರಗಳು ಆಸಕ್ತಿ ತೋರದ ಕಾರಣ ಮುಂದಿನ ಹಂತಕ್ಕೆ ಸಾಗಲಿಲ್ಲ.

ಈಗ ಮತ್ತೊಮ್ಮೆ ಸಿದ್ದರಾಮಯ್ಯ ಮುಖ್ಯಮಂತ್ರಿಗಳಾಗಿದ್ದು, ಅವರ ಅವಧಿಯಲ್ಲಿ ಚಾಲನೆ ಪಡೆದಿದ್ದ ಯೋಜನೆಗೆ ಮತ್ತೆ ಉಸಿರು ಬಂದಂತಾಗಿದೆ. ಅದರಲ್ಲಿಯೂ ಫಿಲಂ ಸಿಟಿ ನಿರ್ಮಾಣವಾಗುತ್ತಿರುವ ಕ್ಷೇತ್ರವು ಮುಖ್ಯಮಂತ್ರಿಗಳದ್ದೇ ಆಗಿರುವುದರಿಂದ ಆದಷ್ಟು ಬೇಗ ಇದಕ್ಕೆ ಚಾಲನೆ ದೊರೆಯುವ ಆಶಾಭಾವನೆ ಎಲ್ಲರಲ್ಲೂ ಮೂಡಿದೆ.

1930ರಿಂದ ಮೈಸೂರಿನಲ್ಲಿ ಚಿತ್ರರಂಗವು ಪ್ರೀಮಿಯರ್ ಸ್ಟುಡಿಯೋದಲ್ಲಿ ಕಾರ್ಯ ಚಟುವಟಿಕೆ ನಡೆಸುತ್ತಿತು. ಆದರೆ, ಅದು ಮುಚ್ಚಿದ ನಂತರ ವೈಭವವನ್ನು ಕಳೆದುಕೊಂಡಿತು. ಹಿಂದೆಯೇ ಮೈಸೂರಿನಲ್ಲಿಯೇ ಫಿಲಂ ಸಿಟಿ ಸ್ಥಾಪಿಸಲು ನೀಲನಕ್ಷೆ ತಯಾರಿಸಲಾಗಿತ್ತು. ಆದರೆ, ಅದು ಸಾಧ್ಯವಾಗಿಲಿಲ್ಲ ಎಂದು ನಿರ್ದೇಶಕ ಹಾಗೂ ನಿರ್ಮಾಪಕ ಎಸ್.ವಿ.ರಾಜೇಂದ್ರಸಿಂಗ್ ಬಾಬು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೈಸೂರಲ್ಲಿ ಫಿಲಂ ಸಿಟಿಗೆ ಗುರುತಿಸಿರುವ ಸ್ಥಳವು ಮೊದಲು ಕೆಐಎಡಿಬಿ ಅಧೀನದಲ್ಲಿತ್ತು. ತದನಂತರ ವಾರ್ತ ಇಲಾಖೆಗೆ ಹಸ್ತಾಂತರಿಸಲಾಗಿದೆ. ಪ್ರವಾಸೋದ್ಯಮ ಇಲಾಖೆಯೂ ಈ ಫಿಲಂ ಸಿಟಿ ಯೋಜನೆ ನಿರ್ವಹಿಸಬೇಕಿತ್ತು. ಆದರೆ, ಅವರು ಆಸಕ್ತಿ ತೋರಲಿಲ್ಲ. ಮೈಸೂರಲ್ಲಿ ಫಿಲಂ ಸಿಟಿ ನಿರ್ಮಾಣ ಆಗುವುದರಿಂದ ಕನ್ನಡ ಚಿತ್ರರಂಗಕ್ಕೆ ಸಾಕಷ್ಟು ಅನುಕೂಲಗಳಿದ್ದು, ಖರ್ಚು ವೆಚ್ಚಗಳು ಕಡಿಮೆ ಆಗಲಿದೆ ಎಂದರು.

ಈ ಹಿಂದೆ ನೀಲನಕ್ಷೆ ಸಿದ್ಧವಾಗಿದ್ದು, 9 ವರ್ಷಗಳ ಹಿಂದೆ. ಈಗ ಹೊಸ ನೀಲನಕ್ಷೆ ಹಾಗೂ ಯೋಜನಾ ವೆಚ್ಚವೂ ಪರಿಷ್ಕರಣೆಯಾಗುವ ನಿರೀಕ್ಷೆ ಇದೆ.

ಮುಂಗಾರು ಚುರುಕು: ಜಿಲ್ಲೆಯಲ್ಲಿ ಇನ್ನೆರಡು ದಿನ ಮಳೆ ಸಾಧ್ಯತೆ

ಮೈಸೂರು,ಜೂ.21(ಸಿಎನ್)–ರಾಜ್ಯದಲ್ಲಿ ಕ್ಷೀಣಿಸಿದ್ದ ಮುಂಗಾರು ಇದೀಗ ಚುರುಕಾಗಿದ್ದು, ಜಿಲ್ಲೆಯಲ್ಲಿ ಮಳೆಯಾಗುತ್ತಿದೆ. ಇನ್ನು ತೀವ್ರ ಮಳೆಯಿಂದಾಗಿ ನಗರದ ರಸ್ತೆಗಳು, ಫುಟ್‌ಪಾತ್, ಯುಜಿಡಿ, ಒಳಚರಂಡಿ, ಮುಖ್ಯರಸ್ತೆಗಳಲ್ಲಿ ನೀರು ತುಂಬಿ ರಸ್ತೆಗೆ ಹರಿದ ಪರಿಣಾಮ ಸವಾರರು ಪರದಾಡುವ ದೃಶ್ಯಗಳು ಕಂಡು ಬಂದಿದೆ.

ಸಬ್‌ಅರ್ಬನ್ ಬಸ್ ನಿಲ್ದಾಣ, ಬೆಂಗಳೂರು ನೀಲಗಿರಿ ರಸ್ತೆ ದೇವರಾಜ ಮೊಹಲ್ಲಾದ ಸೀಬಯ್ಯ ರಸ್ತೆ, ಎಂಜಿ ರಸ್ತೆಯ ಅಂಡರ್‌ಪಾಸ್ ಸೇರಿದಂತೆ ಇನ್ನಿತರ ಕಡೆಗಳಲ್ಲಿ ರಸ್ತೆ ಮೇಲೆ ನೀರು ನಿಂತು ವಾಹನ ಸವಾರರು ಪರದಾಡಿದರು.

ಒಳಚರಂಡಿ ಅವ್ಯವಸ್ಥೆ: ಸುರಿದ ಮಳೆ ನೀರು ಸರಾಗವಾಗಿ ಹರಿಯಲು ನಿರ್ಮಿಸಿರುವ ಒಳಚರಂಡಿಗಳಲ್ಲಿ ತ್ಯಾಜ್ಯ, ಹೂಳು ತುಂಬಿದ್ದು, ಮಳೆ ನೀರು ಹರಿಯಲು ಸಾಧ್ಯವಾಗದೇ ರಸ್ತೆ ಮೇಲೆ ಹರಿಯುತ್ತಿದೆ. ಹಾಗಾಗಿ ಒಳಚರಂಡಿ, ಯುಜಿಡಿ, ರಾಜಕಾಲುವೆಗಳಲ್ಲಿ ತುಂಬಿರುವ ಹೂಳು ತೆರವು ಕಾರ್ಯ ಮಾಡಬೇಕಾಗಿದೆ ಎಂದು ಅಕ್ಕಪಕ್ಕದ ನಿವಾಸಿಗಳು, ಅಂಗಡಿ ಮಾಲೀಕರು ನಗರಪಾಲಿಕೆ ವಿರುದ್ಧ ಕಿಡಿಕಾರಿದ್ದಾರೆ.



ಮೂರ್ನಾಲ್ಕು ದಿನ ಮಳೆ ಸಾಧ್ಯತೆ: ಬಿಪರ್‌ಜಾಯ್ ಚಂಡಮಾರುತದ ಪ್ರಭಾವದಿಂದ ದುರ್ಬಲಗೊಂಡಿದ್ದ ಮುಂಗಾರು ಮಾರುತಗಳು ಮುಂದಿನ ಮೂರ್ನಾಲ್ಕು ದಿನಗಳಲ್ಲಿ ತೀವ್ರತೆ ಪಡೆದುಕೊಳ್ಳಲಿದ್ದು, ಜಿಲ್ಲೆಯಾದ್ಯಂತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಹಾಗಾಗಿ ನಗರಪಾಲಿಕೆ ಎಚ್ಚೆತ್ತುಕೊಂಡು ಮಳೆ ನೀರು ರಸ್ತೆಗಳಲ್ಲಿ ನಿಲ್ಲದಂತೆ ಅಗತ್ಯ ಕ್ರಮ ವಹಿಸಬೇಕಾಗಿದೆ.

ನಕ್ಕರೆ ಅದೇ ಸ್ವರ್ಗ

ಅಧಿಕಾರಿ : "ನಮಗೆ ಒಬ್ಬ ಜವಾಬ್ದಾರಿಯುತ ನೌಕರ ಬೇಕಾಗಿದ್ದಾನೆ"

ಅಭ್ಯರ್ಥಿ : "ಹಾಗಿದ್ರೆ ಅದಕ್ಕೆ ನಾನೇ ಯೋಗ್ಯ ಸಾರ್, ನನ್ನ ಹಿಂದಿನ ಆಫೀಸಿನಲ್ಲಿ ಎಲ್ಲಾ ತಪ್ಪಿಗೂ ನೀನೇ 'ಜವಾಬ್ದಾರಿ' ಅಂತಿದ್ರು!"

ಮೈಸೂರು ಮಿತ್ರ

ಗುರುವಾರ, 22 ಜೂನ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಮ್ಮ ನಿಜವಾದ ಮಿತ್ರನೆಂದರೆ ಉಳಿತಾಯದಲ್ಲಿರುವ ಹಣದಂತೆ ಆಪತ್ಕಾಲದಲ್ಲಿ ನಮಗೆ ಕೂಡಲೇ ಸಹಾಯಕವಾಗುವಂತಹವನು

–ಬೆಂಜಮಿನ್ ಫ್ರಾಂಕ್ಲಿನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೃತಿಯಿಲ್ಲದ ಮಾತು ಕಸ ಬೆಳೆದ ತೋಟದಂತೆ

ನಿಮ್ಮ ಪತ್ರಗಳು

'ಶಕ್ತಿ ಯೋಜನೆ' ಫಲಾನುಭವಿಗಳಿಂದ ದುರುಪಯೋಗವಾಗದಿರಲಿ

ಮಾನ್ಯರೆ,

ಕರ್ನಾಟಕದ ನೂತನ ಸರ್ಕಾರವು ಅಧಿಕಾರದ ಚುಕ್ಕಾಣಿಯನ್ನು ಹಿಡಿಯಲು ಹಾಗೂ ಮತದಾರರ ಮನಸ್ಸುಗಳನ್ನು ಸೆಳೆಯಲು ಐದು ಗ್ಯಾರಂಟಿಗಳನ್ನು ಘೋಷಣೆ ಮಾಡಿತ್ತು. ಇದರ ಪೈಕಿ ಶಕ್ತಿ ಯೋಜನೆಯು ಕೂಡ ಒಂದು. ರಾಜ್ಯದ ಮಹಿಳೆಯರಿಗೆ ಉಚಿತವಾಗಿ ಪ್ರಯಾಣ ಮಾಡಲು ಕಾಂಗ್ರೆಸ್ ಪಕ್ಷವು ಕಲ್ಪಿಸಿರುವ ಯೋಜನೆಯೇ ಈ ಶಕ್ತಿ ಯೋಜನೆ. ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಈ ಶಕ್ತಿ ಯೋಜನೆಯನ್ನು ಸಚಿವ ಸಂಪುಟದ ಒಪ್ಪಿಗೆ ಮೇರೆಗೆ ಜಾರಿಗೊಳಿಸಲಾಯಿತು.

ಶಕ್ತಿ ಯೋಜನೆಯು ಎಲ್ಲಾ ಸಾಮಾನ್ಯ ಮಹಿಳೆಯರಿಗೆ, ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ, ದುಡಿಯುವ ಕಾರ್ಮಿಕ ಮಹಿಳೆಯರಿಗೆ ಮತ್ತು ಸರ್ಕಾರಿ ನೌಕರಿ ಮಹಿಳೆಯರೂ ಸೇರಿದಂತೆ ಸರ್ಕಾರಿ ಸಾರಿಗೆ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣದ ಸೌಲಭ್ಯವನ್ನು ನೀಡಿರುವುದು ಒಳ್ಳೆಯ ಕೆಲಸ ಕಾರ್ಯಗಳಿಗೆ ಹಾಗೂ ಅವಶ್ಯಕ ಪ್ರಯಾಣದ ಉದ್ದೇಶಗಳಿಗೆ ಉಪಯೋಗವಾಗಲಿ ಎಂದು. ಆದರೆ ಶಕ್ತಿ ಯೋಜನೆ ಜಾರಿಯಾದ ದಿನದಿಂದ ಈ ದಿನದವರೆಗೂ ಅನವಶ್ಯಕವಾದ ಪ್ರಯಾಣವೇ ಅಧಿಕವಾಗಿದೆ. ಉಚಿತ ಎಂದು ಸುಖಾಸುಮ್ಮನೆ ಪ್ರಯಾಣ ಮಾಡಿದ ಕೆಲವು ವರದಿಗಳು ಕೂಡ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಉಚಿತವಾಗಿ ನೀಡುವ ಸೌಲಭ್ಯವನ್ನು ಸಮರ್ಪಕವಾಗಿ ಬಳಸಿಕೊಳ್ಳದೇ ಉಪಯೋಗಕ್ಕಿಂತ ದುರುಪಯೋಗವಾಗುತ್ತಿರುವುದೇ ಹೆಚ್ಚಾಗಿದೆ. ಆದ್ದರಿಂದ ಶಕ್ತಿ ಯೋಜನೆಯ ಫಲಾನುಭವಿ ಮಹಿಳೆಯರು ಈ ಯೋಜನೆಯನ್ನು ದುರುಪಯೋಗಪಡಿಸಿಕೊಳ್ಳದೇ ಹಾಗೂ ಅನವಶ್ಯಕ ಪ್ರಯಾಣ ಮಾಡದೇ... ಅವಶ್ಯಕತೆಯ ಪ್ರಯಾಣದ ಪಯಣವನ್ನು ಕೈಗೊಳ್ಳಲಿ. **–ಚಂದನಾ ಸಿದ್ದರಾಜು, ಅರಕಲವಾಡಿ, ಚಾ॥ ನಗರ**

ಪಾಲಿಕೆ ಸದಸ್ಯರ ಇಂದೋರ್ ಪ್ರವಾಸದಿಂದ ಏನು ಪ್ರಯೋಜನ?

ಮಾನ್ಯರೆ,

ಸ್ವಚ್ಛತಾ ಅಧ್ಯಯನಕ್ಕಾಗಿ ಮೇಯರ್ ನೇತೃತ್ವದ 48 ಸದಸ್ಯರ ಪಾಲಿಕೆ ತಂಡ ಇಂದೋರ್ ಪ್ರವಾಸ. ಇಂತಹ ಪ್ರವಾಸಗಳನ್ನು ಮೈಸೂರಿನ ನಾಗರಿಕರು ನೋಡಿ ನಗುತ್ತಾರೆ ಹಾಗೂ ಛೀಮಾರಿ ಹಾಕುತ್ತಾರೆ. ಏಕೆಂದರೆ ಈಗಾಗಲೇ ಹಿಂದಿನ ಹಲವು ವರ್ಷಗಳಲ್ಲಿ ಹಲವು ಮೇಯರ್‌ಗಳ ನೇತೃತ್ವದಲ್ಲಿ ಹಲವಾರು ಬಾರಿ ಪಾಲಿಕೆ ಸದಸ್ಯರು ಮತ್ತು ಅಧಿಕಾರಿಗಳು ತಂಡೋಪತಂಡವಾಗಿ ಇಂದೋರಿಗೂ ಮತ್ತು ದೇಶದ ಇನ್ನೂ ಹಲವು ಸ್ಥಳಗಳಿಗೆ ಇದೇ ಕಾರಣವನ್ನಿಟ್ಟುಕೊಂಡು ಹೋಗಿ ಬಂದಿದ್ದಾರೆ. ಹೋಗಿಬಂದ ನಂತರದಲ್ಲಿ ಪಾಲಿಕೆಗೆ ಏನು ಸಲಹೆ ಕೊಟ್ಟಿದ್ದಾರೋ ತಿಳಿಯದು. ಆದರೆ ಸಮಸ್ಯೆ ಮಾತ್ರ ಒಂದಿಂಚೂ ಬದಲಾವಣೆಯಾಗಿಲ್ಲ. ಇವರ ಈ ವರ್ತನೆಯನ್ನು ಅಣಕಿಸುವಂತೆ ಎಕ್ಸೆಲ್ ಪ್ಲಾಂಟ್ ಇನ್ನೂ ಬೃಹದಾಕಾರವಾಗಿ ಬೆಳೆಯುತ್ತಿದೆ. ಇದು ಕೇವಲ ಒಂದು ನೆಪ ಮಾತ್ರ. ಒಂದು ವೇಳೆ ಹೋಗಲೇ ಬೇಕೆಂದಿದ್ದರೆ ಒಂದು ತಂಡವನ್ನು ಕಳುಹಿಸಬಹುದಿತ್ತು. ಆದರೆ 48 ಜನ ಹೋಗುವ ಅಗತ್ಯವಿತ್ತೇನು. ಇಷ್ಟೂ ಜನರ ಖರ್ಚು ವೆಚ್ಚವನ್ನು, ನಗರದ ನಾಗರಿಕರು ಕೊಡುವ ಕಂದಾಯದಿಂದ ಭರಿಸಬೇಕು. ಇದನ್ನು ಕೇಳುವವರು ಯಾರು. ಈ ಮಧ್ಯೆ ಮೇಯರ್‌ರವರು ನೀರಿನ ಕಂದಾಯ ಏರಿಸುವ ಬಗ್ಗೆ ಸೂಚನೆ ನೀಡಿದ್ದಾರೆ. ಒಂದು ಕಡೆ ಕೇಂದ್ರ ಸರ್ಕಾರ, ಮತ್ತೊಂದು ಕಡೆ ರಾಜ್ಯ ಸರ್ಕಾರ ಹಾಗೆಯೇ ಸ್ಥಳೀಯ ಆಡಳಿತ ಇವುಗಳೆಲ್ಲ ಸೇರಿ ಜನರಿಗೆ ಅನುಕೂಲ ಮಾಡಿಕೊಡುವ ಬದಲು, ಸಲ್ಲದ ಖರ್ಚುಗಳನ್ನು ಮಾಡುತ್ತಾ ಅವೆಲ್ಲದರ ಭಾರವನ್ನು ನಾಗರಿಕರ ಮೇಲೆ ಹೇರುವುದು ಎಷ್ಟು ಸರಿ ಮತ್ತು ಇನ್ನೂ ಎಷ್ಟು ದಿನ ಇಂತಹದ್ದನ್ನೆಲ್ಲಾ ಸಹಿಸಿಕೊಳ್ಳಬೇಕೋ ತಿಳಿಯದು.

–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.

ಸರಳುಗಳನ್ನು ಕತ್ತರಿಸಿ ಅನಾಹುತ ತಪ್ಪಿಸಿ



ಮಾನ್ಯರೆ,

ಮೈಸೂರಿನ ಚಾಮರಾಜಪುರಂ ರೈಲ್ವೆ ಗೇಟ್ ಬಳಿ ಹೈಟ್ ಗೇಜ್ ನಿರ್ಮಿಸಲಾಗಿದ್ದು, ಅದರ ಅಡಿಪಾಯಕ್ಕೆ ಹಾಕಲಾಗಿರುವ ಕಬ್ಬಿಣದ ಸರಳುಗಳನ್ನು ಸಮತಟ್ಟಾಗಿ ಕತ್ತರಿಸದೆ ಹಾಗೇ ಬಿಟ್ಟಿದ್ದಾರೆ. ಇದರಿಂದಾಗಿ ಇಲ್ಲಿ ಓಡಾಡುವ ಪಾದಚಾರಿಗಳು ಸ್ವಲ್ಪ ಎಚ್ಚರ ತಪ್ಪಿದರೂ ಅಪಾಯ ಕಟ್ಟಿಟ್ಟಬುತ್ತಿ. ಆದ್ದರಿಂದ, ಸಂಬಂಧಪಟ್ಟವರು ಆ ಸರಳುಗಳನ್ನು ಸಮತಟ್ಟಾಗಿ ಕತ್ತರಿಸಿ ಆಗಬಹುದಾದ ಅನಾಹುತವನ್ನು ತಪ್ಪಿಸಬೇಕಿದೆ.

– ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಯೋಗದಿಂದ ಮಾನಸಿಕ ನೆಮ್ಮದಿ

ಮಾನ್ಯರೆ,

ಯೋಗವು ಭಾರತದ ಪ್ರಾಚೀನ ಸಂಪ್ರದಾಯದ ಒಂದು ಅಮೂಲ್ಯ ಕೊಡುಗೆ ಈ ಯೋಗವು ಮನಸ್ಸು ಮತ್ತು ದೇಹವನ್ನು ಚಂಚಲತೆಗೊಳಿಸದೆ ಸುಗಮವಾಗಿ ಸಾಕಾರಗೊಳಿಸಲು ವಿಷಯದ ಬಗ್ಗೆ ಏಕಾಗ್ರತೆಗೊಳಿಸಲು ಯೋಗವು ದಿನ ನಿತ್ಯ ಜೀವನದಲ್ಲಿ ಬಹಳ ಮುಖ್ಯ.

ಆಧುನಿಕ ಒತ್ತಡ ಜೀವನದಲ್ಲಿ ಮನಸ್ಸನ್ನು ಹತೋಟಿಗೆ ತರಲು ಯೋಗವು ಅತ್ಯವಶ್ಯಕ. ಶಾರೀರಿಕ, ಬೌದ್ಧಿಕ, ಭಾವನಾತ್ಮಕ, ಮಾನಸಿಕ ನೆಮ್ಮದಿಯಿಂದ ಇರುವುದು, ಉತ್ತಮ ಜೀವನ ನಿರ್ವಹಣೆಗೆ ಯೋಗವೇ ಮದ್ದು. ಯೋಗದ ಮಹತ್ವ ವನ್ನು ಅರಿಯಲು ರಾಜ್ಯದ ಎಲ್ಲಾ ಸರ್ಕಾರಿ ಅನುದಾನಿತ ಮತ್ತು ಖಾಸಗಿ ಕಾಲೇಜುಗಳಲ್ಲಿ ಆಚರಿಸಲು ಶಿಕ್ಷಣ ಇಲಾಖೆ ಸೂಚನೆ ನೀಡಿರುವುದು ಶ್ಲಾಘನೀಯ. ಜನ ಸಾಮಾನ್ಯರು ತಮ್ಮ ದಿನನಿತ್ಯ ಜೀವನದಲ್ಲಿ ಯೋಗವನ್ನು ಅನುಸರಿಸಿಕೊಂಡರೆ ಮಾನಸಿಕ ನೆಮ್ಮದಿ ಭಾಗ್ಯವನ್ನು ಪಡೆಯಬಹುದು.

–ಪಿ.ಸಿ.ಕಂಗಾಣಿ ಸೋಮು, ಕ್ಯಾತಮಾರನಹಳ್ಳಿ, ಮೈಸೂರು



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಅರಣ್ಯ ಮೂಲ ನಿವಾಸಿಗಳಿಂದಷ್ಟೇ ಪರಿಸರ ಸ್ನೇಹಿ ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ

ಕರ್ನಾಟಕದಲ್ಲಿ ಅತ್ಯಂತ ಹೆಚ್ಚು ಅರಣ್ಯಾವೃತ್ತವಾದ ಜಿಲ್ಲೆ ಉತ್ತರ ಕನ್ನಡ. ಈ ಜಿಲ್ಲೆಯ ಕೊನೆಯಲ್ಲಿರುವ ಜೊಯಿಡಾ ತಾಲೂಕು ರಾಜ್ಯದಲ್ಲಿಯೇ ಅತಿ ದೊಡ್ಡ ತಾಲೂಕೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪ್ರತ್ಯೇಕ ತಾಲೂಕೆಂದು ಘೋಷಣೆಯಾಗುವವರೆಗೂ ದಾಂಡೇಲಿಯೂ ಜೊಯಿಡಾದ ಭಾಗವೇ ಆಗಿತ್ತು. ಜೊಯಿಡಾ–ದಾಂಡೇಲಿ ಪ್ರದೇಶದಲ್ಲಿ ನಿಸರ್ಗದ ಅತ್ಯಂತ ಮನಮೋಹಕ ಚಿತ್ರಣ ದೊರೆಯುವುದೇ ಅಲ್ಲದೆ, ಅಲ್ಲಲ್ಲಿ ಹರಿಯುವ ಜಲಧಾರೆಗಳು ಹಾಗೂ ಜಿಲ್ಲೆಯ ಜೀವನದಿ ಕಾಳಿ ಅನೇಕ ಜಲಕ್ರೀಡೆಗಳಿಗೂ ಆಧಾರವಾಗಿವೆ. ಜೊಯಿಡಾ –ದಾಂಡೇಲಿ ಪ್ರದೇಶದಲ್ಲಿ ಎಲ್ಲೆಲ್ಲಿ ನೋಡಿದರೂ ಕಾಣುವ ಮಳೆಕಾಡುಗಳು, ಜಲಪಾತಗಳು, ಸಮೃದ್ಧ ಸಸ್ಯ ಮತ್ತು ವನ್ಯಜೀವಿ ಸಂಕುಲಗಳನ್ನು ತನ್ನೊಳಗಿರಿಸಿಕೊಂಡ ಪಶ್ಚಿಮ ಘಟ್ಟಗಳ ವಿಹಂಗಮ ನೋಟ–ಇದಕ್ಕಿಂತ ಬೇಕೆ ಪ್ರವಾಸೋದ್ಯಮಕ್ಕೆ ಪೂರಕವಾದ ತಾಣ?

ಜೋಯಿಡಾ–ದಾಂಡೇಲಿ ಪ್ರದೇಶದೊಡನೆ ನನ್ನ ಸಂಬಂಧ ಬೆಳೆದದ್ದು 'ಅರಣ್ಯಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಮಹಿಳೆಯರ ಪಾತ್ರ' ಎಂಬ ಸಂಶೋಧನಾ ಸಂಯೋಜನೆ 1997ರಲ್ಲಿ ಆರಂಭವಾದಾಗ. ಆಗ ತಾನೇ ಜಾರಿಗೆ ಬಂದಿದ್ದ ಜಂಟಿ ಅರಣ್ಯ ಯೋಜನೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಪರಿ ಮತ್ತು ಪ್ರಮಾಣವನ್ನು ಅಧ್ಯಯನ ಮಾಡಲು ಕೆನಡಿಯನ್ ಇಂಟರ್ನ್ಯಾಷನಲ್ ಡೆವಲಪ್ಮೆಂಟ್ ಏಜೆನ್ಸಿ ಮತ್ತು ಶಾಸ್ತ್ರಿ ಇಂಡೋ ಕೆನಡಿಯನ್ ಇನ್ಸ್ಟಿಟ್ಯೂಟ್ ಸಂಸ್ಥೆಗಳ ಪ್ರಾಯೋಜಕತ್ವದಲ್ಲಿ ಜೋಯಿಡಾ ತಾಲೂಕಿನ ಜನ ಸಮುದಾಯಗಳೊಡನೆ ಕೂಡಿ ಅವರ ಸಹಭಾಗಿತ್ವದಲ್ಲಿ ಕೈಗೊಂಡ ಈ ಸಂಶೋಧನೆ ನಮ್ಮ ತಂಡ ಮತ್ತು ಅವರ ನಡುವೆ ನಿಕಟ ಬಾಂಧವ್ಯವನ್ನು ಬೆಸೆಯಿತು. ಸಂಶೋಧನೆಯ ಪ್ರಾರಂಭಿಕ ಹಂತಗಳಲ್ಲಿ ಮಹಿಳೆಯರನ್ನು ನಮ್ಮ ಸಂಶೋಧನೆಯಲ್ಲಿ ಒಳಗೊಳ್ಳುವ ಪ್ರಯತ್ನಗಳಿಗೆ ವಿರೋಧ ವ್ಯಕ್ತಪಡಿಸಿದ ಕೆಲ ಸಂಪ್ರದಾಯಬದ್ಧ ಹಿರಿಯರು ಕಾಲ ಕ್ರಮೇಣ ನಮ್ಮ ಸಂಶೋಧನಾ ಸಂಯೋಜನೆಯಲ್ಲಿ ಪ್ರೀತಿಯಿಂದ ಭಾಗವಹಿಸಿದ್ದು, ಭವಿಷ್ಯದಲ್ಲಿ ನನಗೇನಾದರೂ ಅವಕಾಶಗಳು ದೊರೆತರೆ ನನ್ನ ಎಲ್ಲ ಸಂಶೋಧನೆಗಳನ್ನು ಇದೇ ಪ್ರದೇಶದಲ್ಲಿಯೇ ಕೈಗೊಳ್ಳಬೇಕೆಂಬ ನಿರ್ಧಾರಕ್ಕೆ ನಾನು ಬಂದದ್ದು, ನನ್ನ ಆಶಯಗಳಿಗೆ ಸ್ಫೂರ್ತಿಯಾಗಿ ನಿಂತ ನನ್ನ ಸಂಶೋಧನಾ ಸಹಭಾಗಿ ಕೆನಡಾದ ಪ್ರೊ. ಕರೀಂ ಅಲಿ ಕಸಾಮ್ ಅವರ ಬೆಂಬಲದಿಂದ.



ಜೊಯಿಡಾದ ಜನರೊಡನೆ ಮೊದಲ ಸಂಶೋಧನಾ ಯೋಜನೆಯಿಂದ ಬೆಸೆದ ನಮ್ಮ ಬಾಂಧವ್ಯ, 'ತಾಲೂಕಿನ ಅಭಿವೃದ್ಧಿಯಲ್ಲಿ ಸ್ವಸಹಾಯ ಸಂಘಗಳ ಪಾತ್ರ' ಮತ್ತು 'ಪಂಚಾಯತಿ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರ ಪಾತ್ರ ಬಲವರ್ಧನೆಯನ್ನು' ಕುರಿತು ನಾವು ಕೈಗೊಂಡ ಇನ್ನೆರಡು ಸಂಶೋಧನಾ ಯೋಜನೆಗಳ ಮೂಲಕ ಮತ್ತಷ್ಟು ಗಟ್ಟಿಯಾಯಿತು. ಸ್ಥಳೀಯ ಸಮುದಾಯಗಳ ಭಾಗವಹಿಸುವಿಕೆಯಿಂದ ಕೈಗೊಂಡ ಶಾಸ್ತ್ರಿ ಸಂಯೋಜನೆಗಳ ಫಲಶ್ರುತಿಯಾಗಿ ಜೊಯಿಡಾದಲ್ಲಿ ಪ್ರಾರಂಭವಾದ ಸ್ವಸಹಾಯ ಸಂಘಗಳ ಒಕ್ಕೂಟ, ಗಣಕ ಕೇಂದ್ರಗಳು, ತಾಲೂಕಿನ ವಿವಿಧ ಭಾಗಗಳಲ್ಲಿ ಆಯೋಜಿಸಲ್ಪಟ್ಟ ಸಂವಾದ ಕಾರ್ಯಕ್ರಮಗಳು, ಜೋಯಿಡಾದ ಪ್ರತಿ ಹಳ್ಳಿಯಲ್ಲಿಯೂ ಲಭ್ಯವಿರುವ–ಲಭ್ಯವಿಲ್ಲದಿರುವ ಮೂಲಸೌಕರ್ಯಗಳ ನಕ್ಷೆಯ ತಯಾರಿ, ಸ್ಥಳೀಯ ಸಮಸ್ಯೆಗಳನ್ನು ಅವರ ಮಾತೃಭಾಷೆಯಲ್ಲೇ ಬಿಂಬಿಸಿ ಜನಜಾಗೃತಿ ಮೂಡಿಸುವ ಬೀದಿ ನಾಟಕಗಳು–ಇವೇ ಮುಂತಾದ ಕಾರ್ಯಕ್ರಮಗಳು ಸಂಶೋಧನಾ ತಂಡವನ್ನು ಜನರ ಹತ್ತಿರ ತಂದವು. ಆರ್ಥಿಕ ಸ್ವಾವಲಂಬನೆಯ ಹಾದಿಯಲ್ಲಿ ಪ್ರಥಮ ಬಾರಿಗೆ ಹೆಜ್ಜೆಯಿಡತೊಡಗಿದ ಮಹಿಳೆಯರ ಬದುಕಿನಲ್ಲಿ ತಲೆದೋರತೊಡಗಿದ ಬದಲಾವಣೆಗಳು ನಮಗೆ ವಿಶೇಷ ಸಮಾಧಾನವನ್ನು ನೀಡಿದವು. ನಮ್ಮ ಎಲ್ಲ ಪ್ರಯತ್ನಗಳಿಗೆ ಬೆನ್ನೆಲುಬಾಗಿ ನಿಂತ ಸ್ಥಳೀಯ ಯುವಕ ಜಯಾನಂದ ನಮ್ಮ ಸಂಶೋಧನಾ ತಂಡದಲ್ಲಿ ಸೇರಿದ್ದು, ಆತ ತನ್ನ ಸ್ನಾತಕೋತ್ತರ ಮತ್ತು Ph.D ಪದವಿಗಳನ್ನು ಪಡೆದು ಜೋಯಿಡಾದ ಯುವ ಜನತೆಗೆ ಮಾದರಿಯಾಗಿ ನಿಂತದ್ದು– ಇವೆಲ್ಲ ನಮ್ಮ ಸಂಶೋಧನಾ ತಂಡಕ್ಕೆ ಹೊಸ ಹುರುಪನ್ನು ತಂದಿತು.

ಸ್ಥಳೀಯ ಸಮುದಾಯಗಳ ಪರಿಸರ ಸೂಕ್ಷ್ಮ ಜ್ಞಾನಾನುಭವಗಳನ್ನು ಬಳಸಿಕೊಂಡು ಏಕೆ ಅವರನ್ನು ಪ್ರವಾಸೋದ್ಯಮದಲ್ಲಿ ತೊಡಗಲು ನಾವು ಉತ್ತೇಜಿಸಬಾರದು ಎನಿಸಿ ನಮ್ಮ ಸಂಶೋಧನಾ ತಂಡದ ಜೊತೆ ಕೈಜೋಡಿಸಿದ್ದ ಯುವಜನತೆಯೊಡನೆ ಈ ಆಲೋಚನೆಯನ್ನು ಹಂಚಿಕೊಂಡೆವು. ಮೊದ ಮೊದಲಲ್ಲಿ ಇದು ನಮ್ಮಿಂದ ಎಲ್ಲಿ ಆಗುತ್ತದೆ ಎಂಬ ಅನುಮಾನವನ್ನು ವ್ಯಕ್ತಪಡಿಸಿದರೂ ನಿಧಾನವಾಗಿ ಅವರು ಈ ಸಲಹೆಗೆ ತಮ್ಮನ್ನು ತೆರೆದುಕೊಂಡು ಅದನ್ನು ಕಾರ್ಯರೂಪಕ್ಕೆ ತರಲು ಯೋಜನೆಗಳನ್ನು ರೂಪಿಸತೊಡಗಿದರು. ಅವರಲ್ಲಿದ್ದ ಸ್ಥಳೀಯ ಜ್ಞಾನವನ್ನು ಬಳಸಿಕೊಂಡು ತಮ್ಮಲ್ಲಿರುವ ಮಾನವ ಮತ್ತು ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಸಣ್ಣ ಪ್ರಮಾಣದಲ್ಲಿ ಪ್ರವಾಸೋದ್ಯಮ ಕ್ಷೇತ್ರಕ್ಕೆ ಪ್ರವೇಶಿಸಲು ಅವರು ನಿರ್ಧರಿಸಿದ್ದು ಜೋಯಿಡಾದ ಅಭಿವೃದ್ಧಿ ಪಥದಲ್ಲಿ ಒಂದು ಮೈಲಿಗಲ್ಲಾಯಿತು.

ಜೊಯಿಡಾ–ದಾಂಡೇಲಿ ಪರಿಸರ ಪ್ರವಾಸೋದ್ಯಮಕ್ಕೆ ಹೇಳಿ ಮಾಡಿಸಿದ ಪ್ರದೇಶ. ಇಲ್ಲಿ ಕಳೆದ ಒಂದು ದಶಕದವರೆಗೂ ಕೆಲ ರೆಸಾರ್ಟುಗಳು ಅಥವಾ ಹೋಂಸ್ಟೇಗಳು ಮಾತ್ರ ಇದ್ದವು. ಈಗಾಗಲೇ ಅಸ್ತಿತ್ವಕ್ಕೆ ಬಂದಿದ್ದ ಇಂಥ ಪ್ರವಾಸಿ ತಾಣಗಳಲ್ಲಿಯೂ ಮೂಲ ನಿವಾಸಿ ಸಮುದಾಯಗಳ ಮಹಿಳೆಯರು, ಪುರುಷರು ಅಥವಾ ಯುವಕರು ಒಂದು ಸೇವಾ ವರ್ಗವಾಗಿದ್ದರೇ ಹೊರತು ಅವರಲ್ಲಿ ತಾವೂ ಇಂಥ ಪ್ರವಾಸಿ ತಾಣಗಳನ್ನು ನಡೆಸಬಹುದು ಎಂಬ ಆತ್ಮವಿಶ್ವಾಸವಿರಲಿಲ್ಲ, ಎಲ್ಲಕಿಂತ ಮಿಗಿಲಾಗಿ ಬಂಡವಾಳದ ಕೊರತೆ ಅವರನ್ನು ಕಾಡುತ್ತಿತ್ತು. ಅವರಿಗೆ ಕಾನನದ ಸಸ್ಯ, ಪ್ರಾಣಿ–ಪಕ್ಷಿ ಸಂಕುಲಗಳು, ತಮ್ಮ ಸುತ್ತ ಮುತ್ತಣ ಪರಿಸರದಲ್ಲಿ ಹೇರಳವಾಗಿ ಬೆಳೆಯುವ ಗೆಡ್ಡೆ–ಗೆಣಸುಗಳು, ಸಾವಯವ ಆಹಾರ ಪದಾರ್ಥಗಳು, ಗಿಡಮೂಲಿಕೆಗಳಿಂದ ತಯಾರಿಸಿದ ಔಷಧಗಳು, ಚಾರಣಾಸಕ್ತರಿಗೆ ಅತ್ಯಂತ ಸೂಕ್ತವಾದ ಸ್ಥಳಗಳು ಮುಂತಾದವುಗಳ ಬಗ್ಗೆ ಇದ್ದ ಜ್ಞಾನ ಹೊರಗಿನವರಿಗೆಲ್ಲಿ ಬರಬೇಕು? ಆದರೆ ಈ ಕ್ಷೇತ್ರಕ್ಕೆ ಬರಲು ಅವರಲ್ಲಿ ಅಂತ ಉತ್ಸಾಹವೇನೂ ಇರಲಿಲ್ಲ

ಇಂಥ ಪರಿಸ್ಥಿತಿಯಲ್ಲಿ ಸ್ಥಳೀಯ ಯುವ ಸಮುದಾಯದ ಕೆಲವರು ಒಟ್ಟಾಗಿ ಕಲೆತು ಪ್ರವಾಸೋದ್ಯಮಕ್ಕೆ ಕಾಲಿಡಲು ತೆಗೆದುಕೊಂಡ ತೀರ್ಮಾನ ಜೋಯಿಡಾದ ಬದಲಾವಣೆಯ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನೇ ಆರಂಭಿಸಿತು. ತಾಲೂಕಿನ ವಿವಿಧ ಭಾಗಗಳಲ್ಲಿ ಆರಂಭವಾದ ಹೋಂಸ್ಟೇಗಳು ನಿಧಾನವಾಗಿ ಪರಿಸರಾಸಕ್ತ ಪ್ರವಾಸಿಗರು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ಅಥವಾ ಯಾಂತ್ರಿಕ ಬದುಕಿನಿಂದ ಮುಕ್ತಿಯನ್ನು ಪಡೆಯಲು ಇಚ್ಛಿಸುವವರನ್ನು ಆಕರ್ಷಿಸ ತೊಡಗಿದವು. ಇವರಲ್ಲಿ ಅನುಕೂಲಸ್ಥರು ಹೊಸ–ಹೊಸ ಕುಟೀರಗಳನ್ನು ನಿರ್ಮಾಣ ಮಾಡಿದರೆ, ಆರ್ಥಿಕವಾಗಿ ಅನುಕೂಲವಿಲ್ಲದವರು ಟೆಂಟುಗಳನ್ನು ತಂದು ಅದರಲ್ಲಿಯೇ ಅಥವಾ ಅವರ ಮನೆಗಳಲ್ಲೇ ಇರಲು ಬಯಸುವ ಪ್ರವಾಸಿಗಳಿಗೆ ಅರಣ್ಯ ಜೀವನದ ಅನುಭವವನ್ನು ನೀಡಲು ಆರಂಭಿಸಿದ್ದು, ವಿಶೇಷವಾಗಿ ಮಹಿಳೆಯರು ತಯಾರಿಸುವ ಆ ಪ್ರದೇಶಕ್ಕೆ ವಿಶಿಷ್ಟವೆನಿಸುವ ಖಾದ್ಯಗಳನ್ನು ಸೇವಿಸಿ ಪ್ರವಾಸಿಗರು ನೇರವಾಗಿ ಅವರು ಬ್ಯಾಂಕುಗಳಲ್ಲಿ ತೆರೆದಿದ್ದ ಖಾತೆಗಳಿಗೆ ಹಣ ಸಂದಾಯ ಮಾಡಲಾರಂಭಿಸಿದ್ದು, ಎಲ್ಲಕಿಂತ ಮಿಗಿಲಾಗಿ ಮೋಜು–ಮಸ್ತಿ, ಕಿವಿಗಡಚಿಕ್ಕುವ ಸಂಗೀತ ಅಥವಾ ಇಂದಿನ ರೆಸಾರ್ಟುಗಳಲ್ಲಿ ಸಾಮಾನ್ಯವೆನಿಸುವ ಪ್ಲಾಸ್ಟಿಕ್ ಹಾವಳಿ–ಇವುಗಳಿಗೆ ಅವಕಾಶ ನೀಡದಿದ್ದುದು–ಇವೆಲ್ಲ ಪರಿಸರ ಸ್ನೇಹಿ ಪ್ರವಾಸೋದ್ಯಮಕ್ಕೆ ಪ್ರೋತ್ಸಾಹದಾಯಕವಾಗಿ ಪರಿಣಮಿಸಿದ ಕ್ರಮಗಳಾಗಿದ್ದವು.

ಇದೇ ಗುಂಗಿನಲ್ಲಿ ಕಳೆದ ವಾರವಷ್ಟೇ ನಾನು ಸುಮಾರು 4 ವರ್ಷಗಳ ನಂತರ ಜೋಯಿಡಾ–ದಾಂಡೇಲಿ ಪ್ರದೇಶಕ್ಕೆ ಭೇಟಿ ಇತ್ತಾಗ ಆಘಾತವೊಂದು ಕಾದಿತ್ತು. ಎಲ್ಲಿ ನೋಡಿದರಲ್ಲಿ ಹೋಂಸ್ಟೇಗಳು ತಲೆ ಎತ್ತಿದ್ದವು. ಕಳೆದ ಒಂದೆರಡು ವರ್ಷಗಳಲ್ಲಿ ಅವುಗಳ ಸಂಖ್ಯೆ 200–300ಕ್ಕೆ ಏರಿವೆ, ವಾರಾಂತ್ಯದಲ್ಲಿ 15,000ದಿಂದ 20,000 ಪ್ರವಾಸಿಗರು ಇಲ್ಲಿಗೆ ಬರುತ್ತಿದ್ದಾರೆ. ಈಗ ಅನೇಕ ಹೋಂಸ್ಟೇಗಳಲ್ಲಿ ಅಬ್ಬರದ ಬಹು ದೂರಕ್ಕೂ ಕೇಳಿಸುವ ಬಗೆಬಗೆಯ ಸಂಗೀತ, ಈಜುಕೊಳಗಳು, ಸ್ಪಾಗಳು, ಮಳೆ ನರ್ತನಕ್ಕೆ ಜಾಗಗಳ ನಿರ್ಮಾಣ ಕಣ್ಣು ಕುಕ್ಕುವ ದೀಪಾಲಂಕಾರ, ಎಲ್ಲೆಲ್ಲೂ ರಾರಾಜಿಸುತ್ತಿರುವ ಪ್ಲಾಸ್ಟಿಕ್ ಬಾಟಲಿಗಳು, ತಂಪು ಪಾನೀಯಗಳ ಕ್ಯಾನುಗಳು ಕಾಣಿಸುತ್ತಿವೆ. ಒಂದೆಡೆ ವನ್ಯಜೀವಿ ಸಂಪತ್ತು ವೃದ್ಧಿಸಿರುವುದರ ಬಗ್ಗೆ ಸಂತಸ, ಮತ್ತೊಂದೆಡೆ ಅವುಗಳನ್ನು ಕೆರಳಿಸುವ ಶಬ್ದ ಮತ್ತು ವಾಹನಗಳ ಸಂಚಾರ–ಇವುಗಳೆಲ್ಲ ಪರಿಸರದ ಮೇಲೆ ಅಪಾಯಕಾರಿ ಪರಿಣಾಮಗಳನ್ನು ಬೀರುತ್ತಿವೆ. ಯಾಣ, ಧುದ್ಸಾಗರ್ ಈಗಾಗಲೇ ಚಿತ್ರೀಕರಣಕ್ಕೆ ನೀಡಿದ ಅನುಮತಿ ತಂದ ಅಬ್ಬರದ ಪ್ರಚಾರಕ್ಕೆ ಬಲಿಯಾಗಿವೆ. ಮೊದಲೇ ಜೋಯಿಡಾದಲ್ಲಿ ಕಾಳಿ ನದಿಯ ಮೇಲೆ ನಿರ್ಮಾಣವಾದ 6 ಆಣೆಕಟ್ಟುಗಳು, ಇವುಗಳಿಂದ ಮುಳಗಡೆಯಾದ 32,000 ಎಕರೆ ಅರಣ್ಯ ಪ್ರದೇಶ ಮತ್ತು 89 ಹಳ್ಳಿಗಳಿಂದ ಅಸ್ತವ್ಯಸ್ತವಾಗಿರುವ ಜನ ಜೀವನ ಹಾಗೂ ಪರಿಸರ ಈ ವ್ಯಾಪಾರಿ ಪ್ರವಾಸೋದ್ಯಮದ ಪ್ರಹಾರವನ್ನು ಇನ್ನೆಷ್ಟು ದಿನ ತಡೆದಾವು? ಒಂದೆಡೆ ಕಳೆಯುತ್ತಿರುವ ಕಾಡು, ಮುರಿಯುತ್ತಿರುವ ಜೀವನಾಧಾರ, ಮತ್ತೊಂದೆಡೆ ಅಭಿವೃದ್ಧಿಯ ಹೆಸರಿನಲ್ಲಿ ಅರಣ್ಯದ ಒಳ ಹೊಕ್ಕುತ್ತಿರುವ ನವ ಬಂಡವಾಳಶಾಹಿ ನಿರ್ಧಾರಗಳು–ನಾವೆಚ್ಚೆತ್ತುಕೊಳ್ಳದಿದ್ದರೆ ಪರಿಸರದ ಸಹನಾಶಕ್ತಿ ಮುರಿದು ಬಿದ್ದು, ಈಗಾಗಲೇ ಪ್ರಕೃತಿಯ ವಿಕೋಪಕ್ಕೆ ಗುರಿಯಾಗಿರುವ ಪ್ರಕೃತಿ ರಮ್ಯ ತಾಣಗಳ ಸಾಲಿಗೆ ಜೋಯಿಡಾ–ದಾಂಡೇಲಿ ಅರಣ್ಯಗಳು ಸೇರುವುದರಲ್ಲಿ ಸಂದೇಹವಿಲ್ಲ.

ನಂದಿನಿ ಹಾಲಿನ ದರ 5 ರೂ. ಏರಿಕೆಗೆ ಪ್ರಸ್ತಾಪ

ಬೆಂಗಳೂರು: ಕಾಂಗ್ರೆಸ್ ಮಾಜಿ ಶಾಸಕ ಭೀಮಾನಾಯಕ್ ಅವರು ಕರ್ನಾಟಕ ಹಾಲು ಮಾರಾಟ ಮಹಾಮಂಡಳ (ಕೆಎಂಎಫ್)ದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಬೆನ್ನಲ್ಲೇ ನಂದಿನಿ ಹಾಲಿನ ದರ ಹೆಚ್ಚಳದ ಸುಳಿವು ನೀಡಿದ್ದಾರೆ.



ಇಂದು ಕೆಎಂಎಫ್ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಳ್ಳಾರಿ ಹಾಲು ಒಕ್ಕೂಟದ ಅಧ್ಯಕ್ಷರಾಗಿರುವ ಹಗರಿಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ಮಾಜಿ ಶಾಸಕ ಭೀಮಾನಾಯಕ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕೆಎಂಎಫ್ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಭೀಮಾನಾಯಕ್, ನಂದಿನಿ ಹಾಲಿನ ದರ 5 ರೂ. ಏರಿಕೆಗೆ ಬೇಡಿಕೆ ಇಟ್ಟಿದ್ದೇವೆ. ಹಾಲಿನ ದರ ಹೆಚ್ಚಿಸುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ಚರ್ಚಿಸುತ್ತೇವೆ. ನಂತರ ತೀರ್ಮಾನ ಕೈಗೊಳ್ಳುತ್ತೇವೆ ಎಂದರು. ಎಲ್ಲಾ ಹಾಲು ಒಕ್ಕೂಟಗಳು 5 ರೂ. ದರ ಹೆಚ್ಚಳಕ್ಕೆ ಬೇಡಿಕೆ ಇಟ್ಟಿವೆ. ದರ ಹೆಚ್ಚಿಸುವುದಲ್ಲದೆ, ಗುಣಮಟ್ಟದ ಹಾಲು, ಮೊಸರು, ತುಪ್ಪವನ್ನು ಗ್ರಾಹಕರಿಗೆ ಒದಗಿಸಲು ಆದ್ಯತೆ ನೀಡಲಿದ್ದೇವೆ ಎಂದು ಭೀಮಾನಾಯ್ಕ ಹೇಳಿದ್ದಾರೆ.

ಶ್ರೇಯಾಂಕಾ, ಮನ್ನತ್ ಸ್ಪಿನ್ ಮೋಡಿ; ಎಮರ್ಜಿಂಗ್ ಏಷ್ಯಾಕಪ್ ಗೆದ್ದ ಭಾರತ

ಮಾಂಗ್‌ಕಾಕ್: ವೃಂದಾ ದಿನೇಶ್ ಸಮಯೋಚಿತ ಬ್ಯಾಟಿಂಗ್ ಹಾಗೂ ಕನ್ನಡತಿ ಶ್ರೇಯಾಂಕಾ ಪಾಟೀಲ್, ಮನ್ನತ್ ಕಶ್ಯಪ್ ಸ್ಪಿನ್ ದಾಳಿಯ ನೆರವಿನಿಂದ ಬಾಂಗ್ಲಾದೇಶ ವನಿತೆಯರ ತಂಡವನ್ನು ಫೈನಲ್ ಪಂದ್ಯದಲ್ಲಿ 31 ರನ್‌ಗಳಿಂದ ಪರಾಭವಗೊಳಿಸಿದ ಭಾರತ ತಂಡ ಎಸಿಸಿ ಮಹಿಳಾ ಉದಯೋನ್ಮುಖ ತಂಡಗಳ ಏಷ್ಯಾ ಕಪ್ ಚಾಂಪಿಯನ್ ಪಟ್ಟವನ್ನು ಅಲಂಕರಿಸಿದೆ.



ಇಲ್ಲಿನ ಮಿಷನ್ ರಸ್ತೆ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಭಾರತ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 127 ರನ್ ಗಳಿಸಿತು. ತಂಡದ ಪರ ವೃಂದಾ ದಿನೇಶ್ 36 ರನ್ ಗಳಿಸಿದರೆ, ಕನಿಕಾ ಅಹುಜಾ 30 ರನ್ ಗಳಿಸಿದರು. ಬಾಂಗ್ಲಾ ಪರ ನಹಿದಾ ಅಕ್ತರ್, ಸುಲ್ತಾನ ಕತುರಾ ತಲಾ ಎರಡು ವಿಕೆಟ್ ಉರುಳಿಸಿದರು.

128 ರನ್‌ಗಳ ಅಲ್ಪ ಮೊತ್ತ ಬೆನ್ನತ್ತಿದ ಬಾಂಗ್ಲಾ ಆಟಗಾರರು ಆರಂಭದಲ್ಲೇ ಭಾರತದ ಸ್ಪಿನ್ ಜಾಲಕ್ಕೆ ಸಿಲುಕಿ ವಿಕೆಟ್ ಒಪ್ಪಿಸಿದರು. ನಹಿದಾ ಅಕ್ತರ್ 17 ರನ್ ಗಳಿಸಿ ಕೊನೆಯವರೆಗೂ ಇದ್ದರೂ ಉಳಿದ ಆಟಗಾರರು ಸಾಥ್ ನೀಡಲು ಆಗಲಿಲ್ಲ. ಅಂತಿಮವಾಗಿ ಬಾಂಗ್ಲಾ 19.2 ಓವರ್‌ಗಳಲ್ಲಿ 96 ರನ್ ಗಳಿಸಿ ಆಲೌಟ್ ಆಯಿತು.

ಭಾರತದ ಪರ ಕನ್ನಡತಿ ಶ್ರೇಯಾಂಕಾ ಪಾಟೀಲ್ 4 ವಿಕೆಟ್‌ಗಳನ್ನು ಪಡೆದು ಮಿಂಚಿದರೆ, ಮನ್ನತ್ ಕಶ್ಯಪ್ 3, ಕನಿಕಾ ಅಹುಜಾ 2 ವಿಕೆಟ್ ಪಡೆದು ತಂಡದ ಗೆಲುವಿನಲ್ಲಿ ಮುಖ್ಯ ಪಾತ್ರ ವಹಿಸಿದರು.

ಒಂದೇ ಪಂದ್ಯವಾಡಿ ಫೈನಲ್ ತಲುಪಿದ್ದ ಭಾರತ: ಪ್ರಸಕ್ತ ಸಾಲಿನ ಎಸಿಸಿ ಮಹಿಳಾ ಉದಯೋನ್ಮುಖ ತಂಡಗಳ ಏಷ್ಯಾ ಕಪ್‌ನ ಬಹುತೇಕ ಪಂದ್ಯಗಳಿಗೆ ಮಳೆ ಅಡ್ಡಿ ಆಗಿತ್ತು. ಇದರಿಂದ ಕೆಲ ಪಂದ್ಯಗಳು ರದ್ದುಗೊಂಡಿತ್ತು. ಭಾರತ ಈ ಮೊದಲು ಹಾಂಕಾಂಗ್ ತಂಡದ ವಿರುದ್ಧ ಭರ್ಜರಿ ಜಯ ದಾಖಲಿಸಿತ್ತು. ಬಳಿಕ ಪಾಕಿಸ್ತಾನ, ನೇಪಾಳ ವಿರುದ್ಧದ ಪಂದ್ಯಗಳು ರದ್ದಾಗಿದ್ದವು. ಶ್ರೀಲಂಕಾ ಎ ತಂಡದ ವಿರುದ್ಧದ ಸೆಮಿಫೈನಲ್ ಪಂದ್ಯ ಮಳೆಯಿಂದ ರದ್ದಾದ ಕಾರಣ ಉತ್ತಮ ರನ್‌ರೇಟ್ ಹೊಂದಿದ್ದ ಭಾರತವು ಫೈನಲ್‌ಗೆ ಅರ್ಹತೆ ಪಡೆದಿತ್ತು.

ಯೋಗಯುಕ್ತ ಜೀವನ ರೋಗಮುಕ್ತ

ಜೆಎಸ್‌ಎಸ್ ಸಂಶೋಧನಾ ಅಕಾಡೆಮಿ ಯೋಗ ವಿಭಾಗದ ಸಹ ಪ್ರಾಧ್ಯಾಪಕ ಡಾ.ಎಂ.ಯು.ಸುಜನ್ ಅಭಿಮತ

ಮೈಸೂರು,ಜೂ. 21(ಸಿಎನ್)–ಮನುಷ್ಯನ ಆರೋಗ್ಯ ಸ್ಥಿರವಾಗಿರಲು ಯೋಗಾಭ್ಯಾಸ ಅತ್ಯಗತ್ಯವಾಗಿದೆ. ಹಾಗಾಗಿ ಪ್ರತಿಯೊಬ್ಬರು ಸಹ ಯೋಗವನ್ನು ರೂಢಿಸಿಕೊಳ್ಳಬೇಕು. ಅದರಲ್ಲೂ ವಿದ್ಯಾರ್ಥಿಗಳು ತಮ್ಮ ದೈನಂದಿನ ಅಭ್ಯಾಸದಲ್ಲಿ ಯೋಗವನ್ನು ಅಳವಡಿಸಿಕೊಳ್ಳಬೇಕು ಎಂದು ಜೆಎಸ್‌ಎಸ್, ಸಂಶೋಧನಾ ಅಕಾಡೆಮಿ ಯೋಗ ವಿಭಾಗದ ಸಹ ಪ್ರಾಧ್ಯಾಪಕ ಡಾ. ಎಂ.ಯು.ಸುಜನ್ ಸಲಹೆ ನೀಡಿದರು.



ನಗರದ ಎಂಜಿ ರಸ್ತೆಯ ರಾಜೇಂದ್ರ ಭವನದಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಯೋಗ ವಿಭಾಗ ಹಾಗೂ ಇಪ್ಸಾ ಕಂಪನಿ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ 'ಅಂತಾರಾಷ್ಟ್ರೀಯ ಯೋಗ' ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇಂದಿನ ವೇಗದ ಜೀವನದಲ್ಲಿ ಒತ್ತಡವು ಸಹಜವಾಗಿದೆ. ಒತ್ತಡ ನಿಯಂತ್ರಿಸುವ ಬಗೆ ತಿಳಿಯದೇ ಇದ್ದರೆ ನಮ್ಮ ಆರೋಗ್ಯಕ್ಕೆ ಅಪಾಯ. ಪ್ರಾಚೀನ ಭಾರತೀಯ ವಿಜ್ಞಾನವಾಗಿರುವ ಯೋಗವು ನಮ್ಮ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ಮತ್ತು ವಿವಿಧ ರೋಗಗಳನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಅಲ್ಲದೇ ಕ್ರಿಯೆಗಳು, ಆಸನಗಳು, ಪ್ರಾಣಾಯಾಮ, ಧ್ಯಾನ, ವಿಶ್ರಾಂತಿಗಳಂತಹ ನಿಯಮಿತ ಯೋಗ ತಂತ್ರಗಳ ಅಭ್ಯಾಸದ ಮೂಲಕ ನಮ್ಮ ರೋಗ ನಿರೋಧಕ ವ್ಯವಸ್ಥೆ ಬಲಪಡಿಸಬಹುದು. ಜೊತೆಗೆ ಒತ್ತಡ ನಿಯಂತ್ರಿಸಲು, ಆತಂಕ, ತೊಡೆದುಹಾಕಲು ಮತ್ತು ದೀರ್ಘಕಾಲದ ಜೀವನಶೈಲಿಯ ಅಸ್ವಸ್ಥತೆಯನ್ನು ನಿರ್ವಹಿಸಲು ಸಹಾಯ ಮಾಡುತ್ತದೆ ಎಂದರು. ಸಾಮಾನ್ಯ ಶೀತ, ಜ್ವರ, ತಲೆನೋವು ಮಾತ್ರವಲ್ಲದೆ ಹೃದ್ರೋಗ, ಮಧುಮೇಹ ಮೆಲ್ಲಿಟಸ್, ಖಿನ್ನತೆ, ಬೊಜ್ಜು, ಆಸ್ತಮಾದಂತಹ ಕಾಯಿಲೆಗಳಿಗೂ ಒತ್ತಡವು ಕೆಲಮಟ್ಟಿಗೆ ಕಾರಣ ಎಂದು ಸಂಶೋಧನೆಗಳು ಹೇಳುತ್ತವೆ. ಒತ್ತಡವನ್ನು ನಿಯಂತ್ರಿಸುವಲ್ಲಿ ಮತ್ತು ಮಾನಸಿಕ ಆರೋಗ್ಯದ ಮೇಲಾಗುವ ಪ್ರಯೋಜನಗಳಿಂದಾಗಿ ಹೆಚ್ಚೆಚ್ಚು ಜನರು ಯೋಗದತ್ತ ಒಲವು ಬೆಳೆಸಿಕೊಳ್ಳುತ್ತಿದ್ದಾರೆ ಎಂದರು.

ಈ ಸಂದರ್ಭ ಅಂತಾರಾಷ್ಟ್ರೀಯ ಯೋಗಪಟುಗಳಾದ ಭಾವನ ಹಾಗೂ ಜಾಹ್ನವಿ ಅವರಿಂದ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ಯೋಗಾಭ್ಯಾಸ ಮಾಡಿದರು. ಈ ವೇಳೆ ಜೆಎಸ್‌ಎಸ್ ಆಸ್ಪತ್ರೆಯ ಮೂಳೆ ಮತ್ತು ಕೀಲು ವಿಭಾಗದ ಮುಖ್ಯ ವೈದ್ಯಾಧಿಕಾರಿ ಡಾ.ಸಿದ್ದಲಿಂಗಮೂರ್ತಿ, ಮಧುಕೇಶ್ವರ, ಜೆಎಸ್‌ಎಸ್ ಆಸ್ಪತ್ರೆ ವೈದ್ಯರು ಹಾಗೂ ವಿದ್ಯಾರ್ಥಿಗಳು ಭಾಗಿಯಾಗಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಆಷಾಢ ಶುಕ್ರವಾರಗಳಂದು ಚಾಮುಂಡಿಬೆಟ್ಟಕ್ಕೆ ವಾಹನ ಪ್ರವೇಶ, ಸಂಚಾರ ನಿರ್ಬಂಧ

ಲಲಿತಮಹಲ್ ಮೈದಾನದಲ್ಲಿ ವಾಹನ ನಿಲ್ಲಿಸಿ ಸಾರಿಗೆ ಬಸ್ಸಿನಲ್ಲಿ ಭಕ್ತರ ಉಚಿತ ಪ್ರಯಾಣಕ್ಕೆ ವ್ಯವಸ್ಥೆ

ಮೈಸೂರು, ಜೂ.21(ಆರ್‌ಕೆ)–ಆಷಾಢ ಶುಕ್ರವಾರಗಳಂದು ಚಾಮುಂಡಿಬೆಟ್ಟಕ್ಕೆ ಎಲ್ಲಾ ರೀತಿಯ ಸಾರ್ವಜನಿಕರ ವಾಹನಗಳ ಪ್ರವೇಶ ಹಾಗೂ ಸಂಚಾರ ನಿರ್ಬಂಧಿಸಲಾಗಿದೆ.

ಈ ಕುರಿತು ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಬುಧವಾರ ಅಧಿಸೂಚನೆ ಹೊರಡಿಸಿದ್ದಾರೆ. ಜೂನ್ 23, 30, ಜುಲೈ 7, 14 ಆಷಾಢ ಶುಕ್ರವಾರ ಹಾಗೂ ಜುಲೈ 10ರ ಶ್ರೀ ಚಾಮುಂಡೇಶ್ವರಿ ವರ್ಧಂತಿಯಂದು ಚಾಮುಂಡಿಬೆಟ್ಟಕ್ಕೆ ಬರುವ ಭಕ್ತಾದಿ ಗಳು ತಮ್ಮ ವಾಹನವನ್ನು ಲಲಿತ ಮಹಲ್ ಮೈದಾನದಲ್ಲಿ ನಿಲ್ಲಿಸಿ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ದೇವ ಸ್ಥಾನಕ್ಕೆ ಉಚಿತ ಪ್ರಯಾಣ ಮಾಡಬಹುದು. ಆ ದಿನಗಳಂದು ಮುಂಜಾನೆ 3ರಿಂದ ರಾತ್ರಿ 10ರವರೆಗೆ ಉಚಿತ ಬಸ್ ವ್ಯವಸ್ಥೆ ಇರುತ್ತದೆ ಎಂದು ಅವರು ತಿಳಿಸಿದ್ದಾರೆ.

ಗಣ್ಯರು, ಅತೀಗಣ್ಯರ ವಾಹನ ಹೊರತು ಪಡಿಸಿ ಎಲ್ಲಾ ಮಾದರಿಯ ಸಾರ್ವ ಜನಿಕರ ವಾಹನ ಸಂಚಾರವನ್ನು ಬೆಟ್ಟಕ್ಕೆ ನಿರ್ಬಂಧಿಸಲಾಗಿದೆ. ಲಲಿತಾದ್ರಿಪುರ, ಉತ್ತನಹಳ್ಳಿ ಹಾಗೂ ಇತರೆಡೆಗಳಿಂದ ಬರುವ ವಾಹನಗಳನ್ನು ಲಲಿತ ಮಹಲ್ ಬಳಿಯ ಮೈದಾನದಲ್ಲಿ ನಿಲ್ಲಿಸಬೇಕು.

ಭಕ್ತರನ್ನು ಕರೆದೊಯ್ಯುವ ಸಾರಿಗೆ ಬಸ್ಸುಗಳು ಲಲಿತಾದ್ರಿಪುರ ರಸ್ತೆ, ಐವಾನ್ ರಸ್ತೆ ಮೂಲಕ ಚಾಮುಂಡಿಬೆಟ್ಟಕ್ಕೆ ತೆರಳಿ ಬಸ್ ನಿಲ್ದಾಣದಲ್ಲಿ ಇಳಿಸಿ ವಾಪಸ್ ಅಲ್ಲಿಂದ ಲಲಿತ ಮಹಲ್ ಮೈದಾನಕ್ಕೆ ಕರೆತರಲಿವೆ. ಪ್ರಸಾದ ವಿನಿಯೋಗ ಮಾಡು ವವರಿಗೆ ಬೆಟ್ಟದ ಬಸ್ ನಿಲ್ದಾಣದ ಎದುರಿನ ಪಾರ್ಕಿಂಗ್ ಜಾಗದಲ್ಲಿ ವ್ಯವಸ್ಥೆ ಮಾಡಲಾಗಿದೆ. ದೇವಸ್ಥಾನಕ್ಕೆ ಆಗಮಿ ಸುವ ಗಣ್ಯರು, ಅತೀಗಣ್ಯರ ವಾಹನ ಗಳಿಗೆ ಚಾಮುಂಡಿಬೆಟ್ಟದ ಮಲ್ಟಿ ಲೆವೆಲ್ ಪಾರ್ಕಿಂಗ್‌ನಲ್ಲಿ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ ಹಾಗೂ ದೇವಸ್ಥಾನ ದವರೆಗೆ ಎಲ್ಲಾ ಮಾದರಿಯ ವಾಹನ ಪ್ರವೇಶ ವನ್ನು ನಿರ್ಬಂಧಿಸಲಾಗಿದೆ. ಪ್ರತೀ ಆಷಾಢ ಶುಕ್ರವಾರ ಹಾಗೂ ವರ್ಧಂತಿಯ ಹಿಂದಿನ ದಿನ ರಾತ್ರಿ 10 ಗಂಟೆಯಿಂದಲೇ ಚಾಮುಂಡಿ ಬೆಟ್ಟಕ್ಕೆ ಎಲ್ಲಾ ರೀತಿಯ ವಾಹನ ಸಂಚಾರ ವನ್ನು ನಿರ್ಬಂಧಿಸಲಾಗಿದೆ. ಚಾಮುಂಡಿ ಬೆಟ್ಟದ ನಿವಾಸಿಗಳು ತಮ್ಮ ಮತದಾರರ ಗುರುತಿನ ಚೀಟಿ, ಆಧಾರ್ ಕಾರ್ಡ್, ಡಿಎಲ್‌ಗಳ ಜೆರಾಕ್ಸ್ ಪ್ರತಿಯನ್ನು ಪೊಲೀಸರಿಗೆ ತೋರಿಸಿ ಪ್ರವೇಶಿಸಬಹುದು. ಮೆಟ್ಟಿಲೇರಿ ದೇವಸ್ಥಾನಕ್ಕೆ ಹೋಗುವ ಭಕ್ತರ ವಾಹನಗಳನ್ನು ಪಿಂಜರಾ ಪೋಲ್ ಮುಂದಿನ ಮೈದಾನದಲ್ಲಿ ನಿಲ್ಲಿಸುವುದು ಎಂದು ಪೊಲೀಸ್ ಆಯುಕ್ತರು ತಿಳಿಸಿದ್ದಾರೆ.

ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ಮತ್ತೊಂದು ದುರಂತ

ಕ್ಯಾಂಟರ್‌ಗೆ ಹೋಂಡಾ ಆಕ್ಟೀವಾ ಡಿಕ್ಕಿ; ತಾಯಿ ಸಾವು, ಮಗ, ಮೊಮ್ಮಗಳಿಗೆ ಗಾಯ



ಮದ್ದೂರು, ಜೂ. 21– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತದ ಸರಣಿ ಬುಧವಾರವೂ ಮುಂದುವರೆದಿದ್ದು, ಪಂಕ್ಚರ್ ಆಗಿ ರಸ್ತೆ ಬದಿ ನಿಂತಿದ್ದ ಕ್ಯಾಂಟರ್‌ಗೆ ಹೋಂಡಾ ಆಕ್ಟೀವಾ ಡಿಕ್ಕಿ ಹೊಡೆದ ಪರಿಣಾಮ ಗೃಹಿಣಿ ಸಾವನ್ನಪ್ಪಿದ್ದು, ಅವರ ಮಗ ಮತ್ತು ಮೊಮ್ಮಗಳು ತೀವ್ರವಾಗಿ ಗಾಯಗೊಂಡು ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಚನ್ನಪಟ್ಟಣದ ಮಂಡಿ ಪೇಟೆ ನಿವಾಸಿ ವರಲಕ್ಷ್ಮೀ(60) ಅಪಘಾತದಲ್ಲಿ ಮೃತಪಟ್ಟ ವರಾಗಿದ್ದು, ಇವರ ಮಗ ಸುಧಾಕರ್ (40) ಮತ್ತು ಮೊಮ್ಮಗಳು ಗೌತಮಿ(10) ತೀವ್ರವಾಗಿ ಗಾಯಗೊಂಡವರು. ವರಲಕ್ಷ್ಮೀಯವರ ಸಂಬಂಧಿಕರು ಅನಾರೋಗ್ಯ ದಿಂದ ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಮಗ ಮತ್ತು ಮೊಮ್ಮ ಗಳೊಂದಿಗೆ ಆಸ್ಪತ್ರೆಗೆ ತೆರಳಿದ್ದ ವರಲಕ್ಷ್ಮೀ ಮಗನ ಹೋಂಡಾ ಆಕ್ಟೀವಾದಲ್ಲಿ ಚನ್ನ ಪಟ್ಟಣಕ್ಕೆ ಹಿಂತಿರುಗುತ್ತಿದ್ದರು. ಮದ್ದೂರಿನ ಕೆ.ಕೋಡಿಹಳ್ಳಿ ಸಮೀಪ ಎಕ್ಸ್‌ಪ್ರೆಸ್ ವೇನಲ್ಲಿ ಪಂಕ್ಚರ್ ಆಗಿ ರಸ್ತೆ ಬದಿ ನಿಂತಿದ್ದ ಕ್ಯಾಂಟರ್‌ಗೆ ನಿಯಂತ್ರಣ ತಪ್ಪಿದ ಹೋಂಡಾ ಆಕ್ಟೀವಾ ಡಿಕ್ಕಿ ಹೊಡೆದು ಪಕ್ಕದ ಕಬ್ಬಿಣದ ಬ್ಯಾರಿಕೇಡ್‌ಗೆ ಅಪ್ಪಳಿಸಿದೆ. ಇದರ ಪರಿಣಾಮ ಹಿಂಬದಿ ಸವಾರರಾಗಿದ್ದ ವರಲಕ್ಷ್ಮೀ ಸ್ಥಳದಲ್ಲೇ ಸಾವನ್ನಪ್ಪಿದ್ದು, ತೀವ್ರವಾಗಿ ಗಾಯಗೊಂಡ ಅವರ ಮಗ ಮತ್ತು ಮೊಮ್ಮಗಳಿಗೆ ಮದ್ದೂರು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಮದ್ದೂರು ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೈಟು ಮಾರಾಟಕ್ಕಿದೆ
30x40 Site No.163 MMG, Ground City Infosys ಹತ್ತಿರ 3700/ Sqft (Negotiable)
9743636262

ಮೈಸೂರು ಮ್ಯಾರೇಜ್ ಬ್ಯೂರೋ
ಸುಂದರ ಶ್ರೀಮಂತ ಕೋಟ್ಯಾಧೀಶ್ವರ ಬಿಜಿನೆಸ್ ಒಬ್ಬನೇ ವರನಿಗೆ ಸುಂದರ ವಿದ್ಯಾವಂತ ವಧು, ವಿಧವೆ, ವಿಚ್ಛೇದಿತರು ನೇರ ಸಂಪರ್ಕಿಸಿ. ಜಾತಿ ಅಭ್ಯಂತರ ಇಲ್ಲ
ಡಾ. ಗುರೂಜಿ
9448229184
7899625268

WANTED
Wanted. Maths, PE, Social Science, Spoken English, Art and Craft, English and Computer Teaching Staff for Reputed Institution
Send your Resume through WhatsApp / Message
8971577685
9980631121

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

ಹೊಸ ಮನೆ ಮಾರಾಟಕ್ಕಿದೆ
ನಂ.29, GF + FF, 20 ಚದರ 30x46 ಅಡಿಗಳು ಕಾವೇರಿ ಬಡಾವಣೆ, ಕೆಹಚ್‌ಬಿ ಹೂಟಗಳ್ಳಿ ಪಕ್ಕ (Broker Excuse)
9731119250

WANTED SBI Life – Apne liye. Apno ke liye.
Life Insurance Advisors
Qualification: Minimum SSLC
Age: Minimum 25 yrs-65 yrs
Housewife / RD Agents /Retired Govt. Employee / Businessman
Contact: 8431252935

ಮಂಟಪ ಮನೆ
ನಿತ್ಯ ಪೂಜೆ ಮಾಡಲು ನಿಮಗೊಂದು ದೇವರ ಮಂಟಪ ಬೇಕೇ ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ
ಸಂಪರ್ಕಿಸಿ: ಶ್ರೀನಗರ ಮೈಸೂರು



9448207634
9036742526

SITES FOR SALE
MUDA APPROVED SEREIN VILLAS 30X40, 30X50
NEAR RAINBOW SCHOOL MARTIKYATHANALLI BOGADI ROAD, MYSORE
9448054390

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿಯೊಂದಿಗೆ ನರ್ಸಿಂಗ್ ಸೌಲಭ್ಯವಿದೆ. ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

JMS COACHING CENTRE
Tuitions Offered for 8th, 9th & 10th Std. Students (Science & Maths)
Venue: Kanaka Pragna Montessori School, #788/158, 12th Cross, Ramanuja Road, Mysore
Contact 9845329866

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ: 8861612486

ಹೋಲ್‌ಸೇಲ್ ದರದಲ್ಲಿ
ಜೀವಂತ ನಾಟಿ ಕೋಳಿ ಕೆ.ಜಿ. ರೂ. 260, ರೂ. 350, ರೂ. 580
ಗೌಡ್ರು ನಾಟಿಕೋಳಿ ಅಂಗಡಿ
ನಂ. 198/1, ಪಿ&ಟಿ ಕ್ವಾಟ್ರಸ್ ಮೇನ್ ರೋಡ್, ದೊಡ್ಡಮ್ಮ ತಾಯಿ ಕಲ್ಯಾಣ ಮಂಟಪ ಪಕ್ಕ, ಎನ್.ಆರ್. ಮೊಹಲ್ಲಾ, ಮೈಸೂರು–570 007



9448048576, 9632378020

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ: 7406375196, 9880548596

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ಶ್ರೀ ಗೌರಿಶಂಕರ ಟ್ರಾವೆಲ್ಸ್
8-7-2023 (4 ದಿನ): ಭೀಮಾಶಂಕರ, ಶಿರಡಿ, ಎಲ್ಲೋರ, ಘೃಷ್ಣೇಶ್ವರ, ನಾಸಿಕ್, ತ್ರಯಂಬಕೇಶ್ವರ.
30-7-23 (1 ದಿನ): ಘಾಟಿ ಸುಬ್ರಮಣ್ಯ, ಇಶಾ ಫೌಂಡೇಷನ್, ಕೋಟಿಲಿಂಗ.
26-8-23 (7 ದಿನ): ಅಯೋಧ್ಯೆ, ಪ್ರಯಾಗ್ ರಾಜ್, ಕಾಶಿ, ಗಯಾ, ಬಾಬಾ ಬೈದ್ಯನಾಥ್.
ವಿಮಾನ / ಎಸಿ ಬಸ್ / ಊಟ / ರೂಂ.
Mob: 9620002114

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15200/- to 86000/-
9740733021
9535028750

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

ಸಂಪು ಕ್ಲೀನಿಂಗ್
ಸಂಪರ್ಕಿಸಿ: 8431541631

HOUSE FOR SALE
3 BHK New Duplex House, MUDA, Fully Furnished, (20x30), N/F Door at Dattagalli, Near Triveni Supermarket
Price - 79 Lakhs
Contact Owner, Brokers Welcome
6361295132

Site for sale in Mysuru
4 km from Bogadi Ring Road, 7 km to University of Mysore, Bogadi Road, near Maratikyathana Halli & Trendz Apartment. 80% Bank loan available, approved layout. Measurement: 30x35, just Rs. 22,00,000/- only.
Contact: Mob: 8971918088

ನಿವೃತ್ತ ನೌಕರರಿಗೆ ಉದ್ಯೋಗಾವಕಾಶದ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸ ಲಾಗಿದೆ. Benefits: 1) Fixed Salary + PF + ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು: 1) ಫೋಟೋ, (2) ಪಾನ್ ಕಾರ್ಡ್, (3) ಆಧಾರ್ ಕಾರ್ಡ್, (4) ಬ್ಯಾಂಕ್ ಪಾಸ್ ಪುಸ್ತಕ. ಸ್ಥಳ: Kotak Office, Opp. Clock Tower, Mysuru. ದಿನಾಂಕ: 24-6-2023. ಸಮಯ: ಬೆಳಗ್ಗೆ 11 ಗಂಟೆಗೆ.
FOLLOWED BY LUNCH
9448376423, 9886883858

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
91487-33213

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

RESTAURANT FOR LEASE
Very Good Location Running Condition Very Good at Atmosphere
9535601201

ಡ್ರೈವರ್ ಬೇಕಾಗಿದ್ದಾರೆ
ಹೈಯರ್ ಎಂಡ್ ಕಾರ್ ಚಾಲನೆ ಮಾಡಬಲ್ಲ ಅನುಭವಿ ಚಾಲಕರು ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಚಾಲನೆ ಮಾಡಿ ಪರಿಪೂರ್ಣ ಅನುಭವ ಇರುವವರು ಮಾತ್ರ ಸಂಪರ್ಕಿಸಿ: (ವೇತನ : ರೂ. 30,000/- ವರೆಗೆ)
ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್
ಆರ್.ಟಿ.ನಗರ, ಮೈಸೂರು
ತಮ್ಮ ವಿವರಗಳನ್ನು ಈ ಸಂಖ್ಯೆಗೆ ವಾಟ್ಸ್‌ಆಪ್ ಮೂಲಕ ಸಲ್ಲಿಸಿ
9108002966

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು
Mob.: 9986926101

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318 91409

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು / ಮಹಿಳೆಯರು ಬೇಕಾಗಿದ್ದಾರೆ. ಸಂಬಳ: 8500 ದಿಂದ 10000 ಸಮಯ: ಬೆ.09.30 ಯಿಂದ ರಾತ್ರಿ 9.00 ರವರೆಗೆ
ಸ್ಥಳ: ಅಗ್ರಹಾರ, ಮೈಸೂರು (ಸ್ಥಳೀಯರಿಗೆ ಆದ್ಯತೆ)
9986311444
9986322444

SITE FOR SALE
Near MIT College Just 9 Kms From City with B.M.I.C APA Approved
9900375763

ಸಪ್ತಪದಿ ಮ್ಯಾರೇಜ್ ಬ್ಯೂರೋ
ಹಿಂದೂ ಎಲ್ಲಾ ಜಾತಿಯ ವಧು–ವರರ ಮಾಹಿತಿ ಮತ್ತು ಉಚಿತ ನೋಂದಣಿಗೆ
ಸಂಪರ್ಕಿಸಿ: website: https://www.sapthapadimatrimonyservices.com/
9663199511
8088776211

100% TEAK WOOD FACTORY FINISH DOORS @ DEPOT RATES



10 YEARS WARRANTY
www.ssbuildmart.com
9901291267
9845426862

ಸೈಟ್ ಮಾರಾಟಕ್ಕಿದೆ
60x40 ಶ್ರೀನಿಧಿ ಲೇಔಟ್ ರಾಜೀವ್ ನಗರ ರಿಂಗ್ ರೋಡ್ ಪಕ್ಕ
9845034953

ಉದ್ಯೋಗ ಅವಕಾಶ ಸೆಮಿನಾರ್
ಗಮನಿಸಿ: ಕೇಂದ್ರ/ರಾಜ್ಯ/ಸಾರ್ವಜನಿಕ/ಸ್ವಯಂ ನಿವೃತ್ತ ನೌಕರಿಗೆ ಹಾಗೂ ಬಿಸಿನೆಸ್ ವಲಯದವರಿಗೆ ವಿಶ್ವಾಸಾರ್ಹ ಬ್ಯಾಂಕ್ ಸಂಸ್ಥೆಯಲ್ಲಿ ಸೆಮಿನಾರ್ ಏರ್ಪಡಿಸಲಾಗಿದೆ. ವಿದ್ಯಾರ್ಹತೆ SSLC, Above Any Degree, Age : 30 Year to 65 Year ಸೆಮಿನಾರ್ ನಡೆಯುವ ಸ್ಥಳ: Kotak Life Insurance Com. Opp. to Big Clock Tower, 1st Floor, Sharada Platina, Mysore. ದಿನಾಂಕ 24-06-2023 ಸಮಯ 11 ಗಂಟೆಗೆ Fllowed by LUNCH
9449068132,9480055885

FOR SALE
Buy & Sell site ,house, land
1) 20x30,30x40,40x60 sites in H D Kote Road and Bogadi road
2) 30x40 sites Srinagar attch (jp nagar)
3) Commercial 25 Guntas Land Narasipura toll near
4) 20x30 30x40 House RK Nagar Dattagalli Kuvempu Nagar
9538690359
9035990359

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್, ಸೆಕ್ಯೂರಿಟಿ ಸೂಪರ್‌ವೈಸರ್, ಹೌಸ್‌ಕೀಪಿಂಗ್ ಸೂಪರ್‌ವೈಸರ್, ಹೌಸ್‌ಕೀಪಿಂಗ್ ಕೆಲಸಕ್ಕೆ ಮಹಿಳೆಯರು ಮತ್ತು ಹುಡುಗರು, ವಾರ್ಡ್ ಬಾಯ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ:
9482142207
8884286321, 8884339446
ಹೌಸ್ ಕೀಪಿಂಗ್ ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ.
9482142207

ನೇರ ದ್ವಿತೀಯ ಪಿಯುಸಿಗೆ ಪ್ರವೇಶ ಪ್ರಾರಂಭ
SSLC ಉತ್ತೀರ್ಣ / PUC ಅನುತ್ತೀರ್ಣ ಹಾಗೂ ಪಿಯುಸಿಯಲ್ಲಿ ಹಾಜರಾತಿ ಕೊರತೆ ಇದ್ದು ಪರೀಕ್ಷೆ ಬರೆಯದೆ ಇರುವ ವಿದ್ಯಾರ್ಥಿಗಳಿಗೆ ನೇರ ದ್ವಿತೀಯ ಪಿಯುಸಿ (PUC) ಗೆ ಪ್ರವೇಶಾತಿ ಆರಂಭವಾಗಿದೆ. ಹೆಚ್ಚಿನ ಮಾಹಿತಿಗಾಗಿ:
6364116745
9480709611

2 BHK HOME INTERIORS only @ ₹2.95 Lakh
SS Build Mart®
TALK TO OUR DESIGN EXPERT
9901291267

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಉತ್ತಮವಾದ ಸಂಬಳ ವಯೋಮಿತಿ 35 ರಿಂದ 48 ರವರೆಗೆ ಮೇಟಗಳ್ಳಿ, ಬೆಳವಾಡಿ, ಜೆ.ಪಿ.ನಗರ, ಬೋಗಾದಿ ಹಾಗೂ ಮೈಸೂರಿನ ಸುತ್ತ ಮುತ್ತ ಇರುವ ಪ್ರದೇಶಗಳಿಗೆ
0821-4852002
9538886328

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ (ಮೈಸೂರು)
ವಯೋಮಿತಿ : 25 to 45 Yrs
ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ & ಪಿಯುಸಿ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9739199355
9844235981

WANTED
Cashier and Helpers For Petrol bunk in Surya Bakery Main Road Vijayanagar Mysore
9538811425
8088393837

FOR SALE
TATA 1412 2019 Model Eicher 11.10.2011 Model Running Documents with Good Condition
9448550972

ಇಂದೇ ಸಂಪರ್ಕಿಸಿ
ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಹೊಸದಾಗಿ ತೆರೆದಿರುವ ಕಂಪನಿಯೊಂದಕ್ಕೆ 156 ವಿವಿಧ ಹುದ್ದೆಗಳಿಗೆ SSLC, PUC, ITI, Degree ಆಗಿರುವ ಉತ್ಸಾಹಿ ಯುವಕ /ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೂಟದೊಂದಿಗೆ 14,000–30,000/- (ESI+PF+OT)
6364103418,6366141586

100% Job
ಮೈಸೂರಿನ ಪ್ರತಿಷ್ಠಿತ ಕಂಪನಿಗಳಿಗೆ ಶೋರೂಂಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ Any Qualification, (7th, 10th, PUC, ITI, Any Degree Pass /Fail) ಆದವರಿಗೆ ಅರ್ಹತೆಗೆ ತಕ್ಕಂತೆ ಕೆಲಸ ಸಂಬಳ 14,500 ರಿಂದ 39,000/- (ESI+PF+OT) ಷರತ್ತು ಅನ್ವಯ
9036548905,9035143190

SITE FOR SALE
(30x40) @ Trimurthy Nagar Near Central St. Joseph & Acharya Vidya Kula Mysore-Hunsur Road
12.5 Lakhs
9538839926

WANTED
Accountant
Age : below 30 Years
Qualification : Any Degree
Male Candidate Only
Address : Vijayanagar 2nd Stage, Mysore
6363264048

ಬೇಕಾಗಿದ್ದಾರೆ
Position ಆಫೀಸ್ ಸಹಾಯಕ
Experience 0-2 years
ಸ್ಥಳ: ಲಕ್ಷ್ಮೀಪುರಂ
ಬೈಕು ಕಡ್ಡಾವಾಗಿರಲಿ
8277143053

ಬೇಕಾಗಿದ್ದಾರೆ
ತಂದೂರಿ ಕುಕ್
ಚೈನೀಸ್ ಕುಕ್
ಅಸಿಸ್ಟೆಂಟ್ ಕುಕ್
7795184433

ಬೇಕಾಗಿದ್ದಾರೆ
ಕ್ಯಾಪ್ಟನ್ – ಪುರುಷರು
ಸ್ಟೀವರ್ಡ್ – ಪುರುಷರು/ಮಹಿಳೆಯರು
ಹೌಸ್‌ಕೀಪಿಂಗ್ – ಪುರುಷರು
8884427224

ನಾವು ಹಾಡುತ್ತೇವೆ 50 PLUS
1) ಕರೋಕೆ ಮತ್ತು ವಾದ್ಯಗಳೊಂದಿಗೆ ವೇದಿಕೆ
2) ಗಾಯನ ತಿಳುವಳಿಕೆ ಶಿಬಿರ
3) ಯೂಟ್ಯೂಬ್ ಮೂಲಕ ಪ್ರಸಾರ
ಸಂಪರ್ಕಿಸಿ: ರಾಬರ್ಟ್ ಇ.ಕವನ್ರಾಗ್, ಮೈಸೂರು
9448942998

ಕುಶಾಲನಗರದಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಸಸ್ಯಹಾರಿ ಹೋಟೆಲ್‌ಗೆ ಈ ಕೆಳಕಂಡ ಕೆಲಸಗಾರರು ಬೇಕಾಗಿದ್ದಾರೆ
ಸೌತ್ ಇಂಡಿಯನ್ ಕುಕ್ –2
ಕಾಫಿ, ಟೀ, ಮೇಕರ್ಸ್ –2
ಟೇಬಲ್ ಕ್ಲೀನರ್ಸ್ –2
ಅಡುಗೆ ಸಹಾಯಕರು –2
ವಾಶಿಂಗ್ ಡಿಪಾರ್ಟ್‌ಮೆಂಟ್–2
ಸೆಕ್ಯೂರಿಟಿ ಗಾರ್ಡ್–2
7899929233

ಬಾಡಿಗೆಗೆ ದೊರೆಯುತ್ತದೆ
ಫಾಸ್ಟ್‌ಫುಡ್ (Food Truck) ಬಾಡಿಗೆಗೆ ದೊರೆಯುತ್ತದೆ.
7795751654
9902633187

WANTED
For an Industry at Mysore:
1. Technicians: ITI Electrical / Electronics
2. Helper : 7th Class/SSLC/PUC
Contact Between 10.00 am to 5.00 pm
9901178588

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ್, ಹೂಟಗಳ್ಳಿ, ಇನ್ಫೋಸಿಸ್ ಸುತ್ತಮುತ್ತ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC
ಸಂಬಳ: 14000/-
ESI ಮತ್ತು PF ಸೌಲಭ್ಯವಿರುತ್ತದೆ
9620667819
9880727819

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು/ ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
1) ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು
2) ಶಿಷ್ಕರಣಿ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು
9739816440

WANTED
Security Field Officer with 5 Years of Experience
Salary - 32000/-
Housekeeping Field Officer with 5 Years of Experience
Salary - 28000/-
Send Resume to
manojsemail@yahoo.com
veenababu07@gmail.com

WANTED
We require ITI Turner, Fitter, Electrical and Diploma in mechanical, preferably Female.
0821-2582668
7204445679
Address: Mystech Machines # Q113, 4th Cross, 8th Main, Hebbal, Industrial Estate, Mysore-570016

ವಧು ಬೇಕಾಗಿದೆ
46 ವರ್ಷದ ವಿಧುರ ವರನಿಗೆ ವಧು ಬೇಕಾಗಿದೆ
7676581547

ಬೇಕಾಗಿದ್ದಾರೆ/ WANTED
ಮೈಸೂರ್ ನಲ್ಲಿ KD ರೋಡ್ ನಲ್ಲಿ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ, , ಅನುಭವವುಳ್ಳ , (1) ಸಪ್ಲೈಯರ್ (SUPPLIER), ವೇಟರ್ (WAITER) , (2) Assistant Cook, (3) ಕೌಂಟರ್ ಪಾರ್ಸೆಲ್ PARCEL (4) ತಂದೂರ್, ಚೈನೀಸ್ ಮತ್ತು ನಾರ್ತ್ ಇಂಡಿಯನ್ ಕುಕ್‌ಗಳು (ಚೆಫ್) ಬೇಕಾಗಿದ್ದಾರೆ . ಆಕರ್ಷಕ ಸಂಬಳ ಹಾಗು ಉತ್ತಮ ಸೌಲಭ್ಯಗಳನ್ನೂ ನೀಡಲಾಗುತ್ತದೆ
7899028086

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ.
ವಯಸ್ಸು : 18 ರಿಂದ 40 ವರ್ಷ
ವಿದ್ಯಾರ್ಹತೆ: 7 ರಿಂದ ಪಿಯುಸಿ
9480404036

ಸೈಟು ಮಾರಾಟಕ್ಕಿದೆ
60x45 ಅಳತೆಯ ದಕ್ಷಿಣ ದಿಕ್ಕಿನ ನಿವೇಶನ 40 ಅಡಿ ರಸ್ತೆ, ಜೆಸಿ ನಗರ, ಚಾಮುಂಡಿ ಬೆಟ್ಟದ ರಸ್ತೆ ಹತ್ತಿರ, ಮೈಸೂರು–570011 ರಲ್ಲಿ ಮಾರಾಟಕ್ಕಿದೆ
3750 Per Sqft. Slightly Negotiable
9686720907
9448589862

ಬೇಕಾಗಿದ್ದಾರೆ
ಕಸ್ಟಮರ್ ರಿಲೇಷನ್ಶಿಪ್ ಮ್ಯಾನೇಜರ್/ ಎಕ್ಸಿಕ್ಯೂಟಿವ್, ಬ್ಯುಸಿನೆಸ್ ಡೆವಲಪ್ಮೆಂಟ್ ಎಕ್ಸಿಕ್ಯೂಟಿವ್/ಬ್ಯುಸಿನೆಸ್ ಡೆವಲಪ್ಮೆಂಟ್ ಮ್ಯಾನೇಜರ್, ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಮೈಸೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ (ಪಾರ್ಟ್ ಟೈಮ್ ಹಾಗೂ ಫುಲ್ ಟೈಮ್)
ವಯಸ್ಸು : 40ರ ಒಳಗೆ
83210098788, 6361439167

JOB VACANCY
Operator - Freshers
B.E (Mech) Electrical
Maintenance - 2
Year Exp- ITI/ Diploma
Kadkola Industrial Area
7353480662

30X40 ಸೈಟ್ 33.7 ಲಕ್ಷ
KSRTC ನಿಲ್ದಾಣ 9 ಕಿ.ಮೀ ಉತ್ತನಹಳ್ಳಿ ರಿಂಗ್ ರಸ್ತೆ 1.5 ಕಿ.ಮೀ Layout 150 ಅಡಿ ರಸ್ತೆ ಪಕ್ಕದಲ್ಲಿ MUDA ಅನುಮೋದಿತ 80% ಬ್ಯಾಂಕ್ ಸಾಲದೊಂದಿಗೆ
9164743059

ಮೈಸೂರು ಮಿತ್ರ – ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡ ನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮೇಲುಕೋಟೆಯಲ್ಲಿ ತಲೆಎತ್ತಿರುವ ಅಕ್ರಮ ಕಟ್ಟಡಗಳು

ತೆರವಿಗೆ ಗ್ರಾಪಂ ಅಧ್ಯಕ್ಷ ಸೋಮಶೇಖರ್ ಆಗ್ರಹ

- ಕೇವಲ ಒಂದು ಮನೆ ಮಾತ್ರ ತೆರವುಗೊಳಿಸಿದರೆ ಕಾನೂನು ಸುವ್ಯವಸ್ಥೆ ಹದಗೆಡಲಿದೆ
- ಅಧಿಕಾರಿಗಳಿಗೆ ಎಚ್ಚರಿಕೆ
- ಅಧಿಕಾರಿಗಳಿಂದ ಸರ್ವೆ ಕಾರ್ಯ ಆರಂಭ


ಮೇಲುಕೋಟೆಯಲ್ಲಿ ಸರ್ವೆ ನಡೆಸುತ್ತಿರುವ ಅಧಿಕಾರಿಗಳು.

ಮೇಲುಕೋಟೆ ಜೂ.21– ಶ್ರೀ ಯೋಗಾ ನರಸಿಂಹಸ್ವಾಮಿ ಬೆಟ್ಟದ ಸುತ್ತ ಸರ್ವೆ ನಂಬರ್ 15ರಲ್ಲಿ 50ಕ್ಕೂ ಹೆಚ್ಚು ಅಕ್ರಮ ಕಟ್ಟಡಗಳಿದ್ದು, ಈಗಲೂ ಕೆಲವು ಕಟ್ಟಡಗಳು ನಿರ್ಮಾಣವಾಗುತ್ತಿವೆ. ಜಿಲ್ಲಾಡಳಿತ ಸರ್ವೆ ಮಾಡಿ ಎಲ್ಲವನ್ನೂ ತೆರವು ಗೊಳಿಸುವ ಕಾರ್ಯ ಮಾಡಬೇಕು ಎಂದು ಮೇಲುಕೋಟೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಎನ್. ಸೋಮಶೇಖರ್ ಆಗ್ರಹಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿ ಅವರು, ಸರ್ವೆ ನಂಬರ್ 15ರಲ್ಲಿ ಅಕ್ರಮ ಕಟ್ಟಡಗಳ ಕಾಮಗಾರಿ ನಿರಂತರವಾಗಿ ನಡೆದಿದ್ದರೂ ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿದ್ದಾರೆ. ಆದರೆ ಒಬ್ಬರನ್ನು ಮಾತ್ರ ಗುರಿಯಾಗಿಸಿ ಕಿರುಕುಳ ನೀಡುವ ಕಾರ್ಯ ನಡೆಯುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದು, ಅಧಿಕಾರಿಗಳಿಗೆ ಬದ್ಧತೆಯಿದ್ದರೆ ಎಲ್ಲಾ ಅಕ್ರಮ ಕಟ್ಟಡಗಳನ್ನೂ ಪ್ರಾಮಾಣಿಕವಾಗಿ ತೆರವು ಕಾರ್ಯ ಮಾಡಲಿ. ಗ್ರಾ.ಪಂ ವತಿಯಿಂದ ಎಲ್ಲಾ ರೀತಿಯ ಸಹಕಾರ ನೀಡುತ್ತೇವೆ. ಅದು ಬಿಟ್ಟು ವೈಯುಕ್ತಿಕ ದ್ವೇಷ ಸಾಧಿಸುವುದು ಸರಿಯಲ್ಲ ಎಂದಿದ್ದಾರೆ.

15ನೇ ಸರ್ವೆ ನಂಬರ್‌ನಲ್ಲಿ ಅಕ್ರಮ ಕಟ್ಟಡಗಳ ದೊಡ್ಡಪಟ್ಟಿಯೇ ಇದ್ದು ನಮಗೆ ತಿಳಿದಿದ್ದರೂ ಸಂಪೂರ್ಣ ಸರ್ವೆ ಆಗುವವರೆಗೆ ಯಾರ ಹೆಸರನ್ನೂ ಹೇಳುವುದಿಲ್ಲ. ಒಟ್ಟಾರೆ 50ಕ್ಕೂ ಅಕ್ರಮ ಹೆಚ್ಚು ಅಕ್ರಮ ಕಟ್ಟಡಗಳಿದ್ದು, ಸ್ವಂತ ಮನೆಯಿದ್ದವರೂ ಅಕ್ರಮವಾಗಿ ಕಟ್ಟಡಗಳನ್ನು ನಿರ್ಮಾಣ ಮಾಡಿದ್ದಾರೆ. ಕಂದಾಯ ಇಲಾಖೆ ಅಧಿಕಾರಿಗಳಿಗೆ ಬದ್ಧತೆಯಿದ್ದು, ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆಂಬ ಆಶಯವಿದ್ದರೆ ಈ ಎಲ್ಲಾ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸಬೇಕಿದೆ ಎಂದು ಎನ್.ಸೋಮಶೇಖರ್ ಸವಾಲು ಹಾಕಿದ್ದಾರೆ ಇದೆಲ್ಲಾ ಅಕ್ರಮಗಳನ್ನು ಬಿಟ್ಟು ಹಕ್ಕುಪತ್ರ ಹೊಂದಿ ನ್ಯಾಯಾಲಯದಿಂದ ಆದೇಶ ಪಡೆದಿರುವ ಸಣ್ಣಮ್ಮಬಿನ್ ರಾಮೇಗೌಡರ ಮನೆಯನ್ನು ಮಾತ್ರ ತೆರವುಗೊಳಿಸಲು ಮುಂದಾದರೆ ಮೇಲುಕೋಟೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಡಲಿದೆ ಹೀಗಾಗಿ ಅಧಿಕಾರಿಗಳು ಕಾನೂನು ಪಾಲಿಸಬೇಕು ಎಂದು ಎಚ್ಚರಿಕೆ ನೀಡಿದ್ದಾರೆ.

ಅಕ್ರಮ ಕಟ್ಟಡ ನಿರ್ಮಾಣ ಸ್ಥಗಿತಕ್ಕೆ ಶಾಸಕರ ಸೂಚನೆ

ಮೇಲುಕೋಟೆ : ಶ್ರೀ ಯೋಗಾ ನರಸಿಂಹಸ್ವಾಮಿ ಬೆಟ್ಟದ ಸುತ್ತಮುತ್ತ ಸರ್ವೆ 15ರಲ್ಲಿ ಶೀಘ್ರ ಸರ್ವೆ ಕಾರ್ಯ ಪಡೆಯಲಿದ್ದು, ಅಕ್ರಮ ಕಟ್ಟಡಗಳನ್ನು ಗುರುತಿಸುವ ಕಾರ್ಯ ಆರಂಭವಾಗಲಿದೆ. ಇದೇ ವೇಳೆ ಎಲ್ಲಾ ಅಕ್ರಮ ನಿರ್ಮಾಣವನ್ನೂ ಸ್ಥಗಿತಗೊಳಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಇತ್ತೀಚೆಗೆ ಅಕ್ರಮ ಕಟ್ಟಡ ನಿರ್ಮಾಣ ವಿಚಾರ ಮುನ್ನಲೆಗೆ ಬಂದಿದ್ದು ಕಾನೂನು ರೀತಿ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಇದರ ಜೊತೆಗೆ ಚೆಲುವನಾರಾಯಣಸ್ವಾಮಿ ದೇವಾಲಯಕ್ಕೆ ಸೇರಿದ ಜಮೀನುಗಳನ್ನೂ ಸರ್ವೆ ಮಾಡಿ ಹದ್ದುಬಸ್ತು ಮಾಡಿ ಸಂರಕ್ಷಿಸಲಾಗುತ್ತದೆ ಎಂದರು.

ಸ್ಥಳ ಗುರುತಿಸಿದ ಸರ್ವೆಯರ್

ಶಾಸಕ ದರ್ಶನ್ ಪುಟ್ಟಣ್ಣಯ್ಯ ಮತ್ತು ಜಿಲ್ಲಾಧಿಕಾರಿಗಳ ಆದೇಶದ ಹಿನ್ನೆಲೆಯಲ್ಲಿ ಮೇಲುಕೋಟೆಗೆ ಬುಧವಾರ ಆಗಮಿಸಿದ ತಾಲೂಕು ಸರ್ವೆಯರ್ ಬಾಸ್ಕರ್ ಚೆಲುವನಾರಾಯಣಸ್ವಾಮಿ ದೇವಾಲಯಕ್ಕೆ ಸೇರಿದ್ದ ಸರ್ವೆ ನಂಬರ್ 15 ಮತ್ತು 16 ಮತ್ತು ಇತರ ಸರ್ವೆ ನಂಬರ್‌ಗಳು ಹಾಗೂ ಮೂಲ ನಕ್ಷೆ ಹಾಗೂ ಸಂಪಿಗೆಕೊಳ ಪರಿಶೀಲಿಸಿ ಈ ಸರ್ವೆ ನಂಬರ್ ಸ್ಥಳಗಳನ್ನು ಎಲ್ಲಿಂದ ಆರಂಭವಾಗಲಿದೆ ಎಂಬುದನ್ನು ಗುರುತಿಸಿದರು. ನಾಳೆಯಿಂದ ಎಲ್ಲಾ ಅಧಿಕಾರಿಗಳು ಮತ್ತು ನಾಗರಿಕರ ಸಮಕ್ಷಮ ಸರ್ವೆ ಕಾರ್ಯ ನಡೆಯಲಿದ್ದು, ಗುರುತಿಸುವ ಕಾರ್ಯ ನಡೆಯಲಿದೆ. ಇದೇ ವೇಳೆ ಅಕ್ರಮ ಕಟ್ಟಡಗಳ ವಿವರ ದೊರೆಯಲಿದೆ. ಈ ವೇಳೆ ಉಪತಹಶೀಲ್ದಾರ್ ರಾಜೇಶ್, ಚೆಲುವ ನಾರಾಯಣಸ್ವಾಮಿ ದೇವಾಲಯದ ಕಾರ್ಯ ನಿರ್ವಾಹಕ ಅಧಿಕಾರಿ ಮಹೇಶ್ ಗ್ರಾಮಾಧಿಕಾರಿ ರಮೇಶ್, ಕಂದಾಯ ನಿರೀಕ್ಷಕ ಮಹೇಶ್ ಸೇರಿದಂತೆ ಹಲವು ಅಧಿಕಾರಿಗಳು ಇದ್ದರು.

ನಿರಂತರ ಯೋಗದಿಂದ ರೋಗಕ್ಕೆ ಮುಕ್ತಿ



ಭಾರತೀನಗರ, ಜೂ.21– ರೋಗದಿಂದ ಮುಕ್ತರಾಗಬೇಕಾದರೆ ಯೋಗಯುಕ್ತರಾಗಬೇಕು. ಪ್ರತಿಯೊಬ್ಬರಿಗೂ ಯೋಗ ಅತ್ಯವಶ್ಯಕ ಎಂದು ಭಾರತೀಯ ಎಜುಕೇಷನ್ ಟ್ರಸ್ಟ್‌ನ ಬಿ.ಎಂ.ನಂಜೇಗೌಡ ತಿಳಿಸಿದರು.

ಭಾರತೀನಗರದ ಭಾರತೀ ಕಾಲೇಜಿನಲ್ಲಿ ಕ್ರೀಡಾಂಗಣದಲ್ಲಿ ನಡೆದ ಒಂಬತ್ತನೇ ವಿಶ್ವ ಯೋಗ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಬೃಹತ್ ಯೋಗ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ನಾವು ಅನಾರೋಗ್ಯ ಪೀಡಿತರಾದ ಸಂದರ್ಭದಲ್ಲಿ ಹಲವಾರು ರೀತಿಯ ಪರೀಕ್ಷೆಗಳು, ಚಿಕಿತ್ಸೆಗಾಗಿ ಸಾವಿರಾರು ರೂ.ಗಳನ್ನು ಖರ್ಚು ಮಾಡುತ್ತೇವೆ. ಆದರೆ ಸಣ್ಣ ಪುಟ್ಟ ಹಣದಲ್ಲಿಯೇ ಯೋಗವನ್ನು ಕಲಿಯಲು ಮುಂದೆ ಬರುವುದಿಲ್ಲ. ಇದಲ್ಲದೆ ಯೋಗದ ಬಗ್ಗೆ ತಿಳಿವಳಿಕೆ ಇಲ್ಲದವರು ಯೋಗ ಹಾಗೂ ಪ್ರಾಣಾಯಾಮದ ಬಗ್ಗೆ ಲಘುವಾಗಿ ಮಾತನಾಡುತ್ತಾರೆ. ಇಂತಹ ಬೆಳವಣಿಗೆಗಳಿಂದ ಯೋಗದ ಮಹತ್ವಕ್ಕೆ ಧಕ್ಕೆ ಬರುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು. ಪ್ರಸ್ತುತ ಸಂದರ್ಭ ಮನುಷ್ಯರು ಒತ್ತಡದ ಜೀವನ ಸಾಗಿಸುತ್ತಿದ್ದು, ಅನಾರೋಗ್ಯದಿಂದ ದೂರವಿರಬೇಕಾದರೆ ಯೋಗವನ್ನು ಮಾಡುವ ಮೂಲಕ ಆರೋಗ್ಯ ವೃದ್ಧಿಹೊಂದಿ ದೀರ್ಘಾಯುಷಿಗಳಾಗಿರುವಂತೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ನೂರಾರು ವಿದ್ಯಾರ್ಥಿಗಳು ಉಪನ್ಯಾಸಕರು ಕಾಲೇಜಿನ ಸಿಬ್ಬಂದಿ ಕ್ರೀಡಾಂಗಣದಲ್ಲಿ ನಡೆದ ಯೋಗ ದಿನಾಚರಣೆಯಲ್ಲಿ ಭಾಗವಹಿಸಿದರು. ಇದೇ ವೇಳೆ ಕಾಲೇಜಿನ ಪ್ರಾಂಶುಪಾಲರಾದ ತಮೀಜ್ ಮಣಿ, ನಾಗೇಂದ್ರ ಜೀ ಕೃಷ್ಣ ನಾಗಮಾದಯ್ಯ, ಮಲ್ಲಿಕಾರ್ಜುನ, ಪ್ರತಿಮಾ ಹಲವರು ಯೋಗ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಶಾಂತಿ ಸುವ್ಯವಸ್ಥೆ ಕಾಪಾಡಲು ಪೊಲೀಸರೊಂದಿಗೆ ಸಹಕರಿಸಿ

ಸಾರ್ವಜನಿಕರಿಗೆ ಎಸ್ಪಿ ಯತೀಶ್ ಮನವಿ



ಕೆ.ಆರ್.ಪೇಟೆ, ಜೂ.21– ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು ಸಾರ್ವಜನಿಕರು ಪೊಲೀಸರೊಂದಿಗೆ ಸಹಕರಿಸಬೇಕು. ಪ್ರಮುಖವಾಗಿ ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲಿಸುವ ಮೂಲಕ ಅಪಘಾತಗಳನ್ನು ತಪ್ಪಿಸಿ, ಅಮೂಲ್ಯ ಜೀವಗಳನ್ನು ಉಳಿಸಲು ಸಹಕಾರ ನೀಡಬೇಕು ಎಂದು ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ನಾಗರಿಕರಲ್ಲಿ ಮನವಿ ಮಾಡಿದರು.

ಅವರು ಕೆಆರ್.ಪೇಟೆ ಪಟ್ಟಣ ಪೊಲೀಸ್ ಠಾಣೆಯ ಆವರಣದಲ್ಲಿ ನಡೆದ ತಾಲೂಕು ಸಾರ್ವಜನಿಕರ ಸಮಾಲೋಚನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಂಡ್ಯ ಜಿಲ್ಲೆಯಲ್ಲಿ ರಸ್ತೆ ಅಫಘಾತದಲ್ಲಿ ಈ ವರ್ಷ ಒಂದರಲ್ಲಿಯೇ ಕನಿಷ್ಠ 450 ರಿಂದ 500ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ. ವಾಹನ ಚಾಲಕರು ಸುರಕ್ಷತೆಗೆ ಒತ್ತು ನೀಡಿ ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲನೆ ಮಾಡಿ ಅಮೂಲ್ಯವಾದ ಜೀವ ಹಾಗೂ ಜೀವನದ ಬಗ್ಗೆ ಎಚ್ಚರ ವಹಿಸಬೇಕು ಎಂದರು.

ಸಮಾಜದಲ್ಲಿ ಶ್ರೀಸಾಮಾನ್ಯರ ನೆಮ್ಮದಿಯ ಜೀವನಕ್ಕೆ ಭಂಗ ತರುವ ಸಮಾಜ ಘಾತುಕ ಶಕ್ತಿಗಳ ವಿರುದ್ಧ ಪೊಲೀಸರಿಗೆ ಮಾಹಿತಿಯನ್ನು ನೀಡಿದರೆ ಅಂತಹ ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮಕೈಗೊಳ್ಳಲಾಗುವುದು ಎಂದ ಎಸ್ಪಿ, ಕೆ.ಆರ್.ಪೇಟೆ ಪಟ್ಟಣವು ಮಂಡ್ಯ ಜಿಲ್ಲೆಯಲ್ಲಿಯೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪಟ್ಟಣವಾಗಿದ್ದು ವಾಹನ ದಟ್ಟಣೆಯನ್ನು ನಿಯಂತ್ರಿಸಿ ಸುಗಮ ಸಂಚಾರಕ್ಕೆ ಒತ್ತು ನೀಡಲಾಗುವುದು. ಕೆ.ಆರ್.ಪೇಟೆ ಪಟ್ಟಣದ ಬಸ್ ನಿಲ್ದಾಣದಲ್ಲಿ ಮೇಲಿಂದ ಮೇಲೆ ಕಳ್ಳತನವಾಗುತ್ತಿದ್ದು, ಈ ಬಗ್ಗೆ ಪಟ್ಟಣ ಪೊಲೀಸರು ಎಚ್ಚರ ವಹಿಸಬೇಕು.

ಸಂಚಾರ ನಿಯಮಗಳನ್ನು ಉಲ್ಲಂಘಿಸುವ ವ್ಯಕ್ತಿಗಳಿಗೆ ಕೇಸನ್ನು ದಾಖಲಿಸಿ ದಂಡ ವಸೂಲಿ ಮಾಡಬೇಕು. ಒಂದೆರಡು ಬಾರಿ ಎಚ್ಚರಿಕೆ ನೀಡಿ ಹೆಲ್ಮೆಟ್ ಧರಿಸದೇ ವಾಹನ ಚಾಲನೆ ಮಾಡುವ, ಅಡ್ಡಾದಿಡ್ಡಿಯಾಗಿ ವಾಹನ ಚಾಲನೆ ಮಾಡುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಕೈಗೊಳ್ಳಿ ಎಂದು ಪಟ್ಟಣ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಎಂ.ಕೆ. ದೀಪಕ್ ಅವರಿಗೆ ಎಸ್ಪಿ ನಿರ್ದೇಶನ ನೀಡಿದರು.

ರಸ್ತೆ ಬದಿಯಲ್ಲಿ ತಳ್ಳುವ ಅಂಗಡಿಗಳು ಹಾಗೂ ಗೂಡಂಗಡಿಗಳನ್ನು ಇಟ್ಟುಕೊಂಡು ವಾಹನಗಳು ಹಾಗೂ ಸಾರ್ವಜನಿಕರ ಓಡಾಟಕ್ಕೆ ತೊಂದರೆ ನೀಡುತ್ತಿರುವ ಅಂಗಡಿಗಳ ಮಾಲೀಕರಿಗೆ ತಿಳಿವಳಿಕೆ ನೀಡಿ, ಪುರಸಭೆ ಮುಖ್ಯಾಧಿಕಾರಿಗಳು ಹಾಗೂ ಪುರಪಿತೃಗಳೊಂದಿಗೆ ಸಮನ್ವಯತೆ ಸಾಧಿಸಿ ವಾಹನ ಸಂಚಾರ ಹಾಗೂ ಸಾರ್ವಜನಿಕರ ಓಡಾಟಕ್ಕೆ ಅನುಕೂಲ ಮಾಡಿಕೊಡಿ. ಹಣ್ಣು, ಹೂವು, ತರಕಾರಿಗಳನ್ನು ಮಾರಾಟ ಮಾಡುವ ಮಾರಾಟಗಾರರಿಗೆ ಸೂಕ್ತವಾದ ಸ್ಥಳವನ್ನು ಗುರುತಿಸಿ ವ್ಯಾಪಾರ ವಹಿವಾಟು ನಡೆಸಲು ಅನುಕೂಲ ಮಾಡಿಕೊಡಿ. ಬೀದಿ ಬದಿಯ ವ್ಯಾಪಾರಿಗಳು ಕೂಡ ಜೀವನ ನಡೆಸಬೇಕಾಗಿದೆ ಎಂಬ ಸತ್ಯ ಅರಿತು ಕೆಲಸ ಮಾಡಿ ಎಂದು ಎಸ್ಪಿ ಯತೀಶ್ ಅಧಿ ಕಾರಿಗಳಿಗೆ ಕಿವಿಮಾತು ಹೇಳಿದರು.

ನಾಗಮಂಗಲ ಡಿವೈಎಸ್ಪಿ ಲಕ್ಷ್ಮೀ ನಾರಾಯಣಪ್ರಸಾದ್, ಪೊಲೀಸ್ ಇನ್ಸ್‌ಪೆಕ್ಟರ್ ಗಳಾದ ದೀಪಕ್, ಜಗದೀಶ್, ಸುನಿಲ್, ಬಸವರಾಜು, ಪ್ರವೋದ್, ಎಎಸ್‌ಐ ಚಂದ್ರಶೇಖರ್, ಮುಖಂಡರಾದ ಬಸ್ತಿರಂಗಪ್ಪ, ರಾಜಯ್ಯ, ನಿಂಗಯ್ಯ, ಸುರೇಶ್ ಹರಿಜನ, ಆಸರೆ ಸಮಾಜ ಸೇವಾ ಟ್ರಸ್ಟಿನ ಅಧ್ಯಕ್ಷ ಹೆಚ್.ಬಿ.ಮಂಜುನಾಥ್, ಪ್ರಗತಿ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಕೆ.ಕಾಳೇಗೌಡ, ನವೀದ್ ಅಹಮದ್, ರೈತ ಸಂಘದ ಮುಖಂಡರಾದ ಮುದ್ದುಕುಮಾರ್, ಕರೋಟಿ ತಮ್ಮಯ್ಯ, ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆಯ ತಾಲೂಕು ಅಧ್ಯಕ್ಷ ಸಮೀರ್, ಮಂಡ್ಯ ಜಿಲ್ಲಾ ಛಲವಾದಿ ಮಹಾಸಭಾದ ಅಧ್ಯಕ್ಷ ಮಾಂಬಳ್ಳಿ ಜಯರಾಂ, ಬಿ.ವಿ.ನಾಗೇಶ್, ಆರ್. ಜಗದೀಶ್ ಸೇರಿದಂತೆ ನೂರಾರು ಮಂದಿ ನಾಗರಿಕರು ಸಭೆಯಲ್ಲಿ ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಸಾರ್ವಜನಿಕರು ಹಾಗೂ ಸಂಘ ಸಂಸ್ಥೆಗಳ ವತಿಯಿಂದ ಎಸ್ಪಿ ಯತೀಶ್ ಅವರನ್ನು ಸನ್ಮಾನಿಸಲಾಯಿತು.

ಪಕ್ಷಪಾತ ಬದಿಗಿಟ್ಟು ಕಾರ್ಯ ನಿರ್ವಹಿಸಿ

ಅಧಿಕಾರಿಗಳಿಗೆ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಸೂಚನೆ



ಹಲಗೂರು, ಜೂ.21– ಅಧಿಕಾರಿಗಳು ರಾಗ, ದ್ವೇಷ ಇಲ್ಲದೇ, ಪಕ್ಷಪಾತ ಬದಿಗಿಟ್ಟು ಕಾರ್ಯ ನಿರ್ವಹಿಸಬೇಕು ಎಂದು ಶಾಸಕ ಪಿ.ಎಂ. ನರೇಂದ್ರಸ್ವಾಮಿ ಸೂಚಿಸಿದರು.

ಸೋಮವಾರ ಹಲಗೂರು ಸೇರಿದಂತೆ ದಳವಾಯಿ ಕೋಡಿಹಳ್ಳಿ, ಹೆಚ್.ಬಸಾಪುರ, ಬ್ಯಾಡರಹಳ್ಳಿ, ಲಿಂಗಪಟ್ಟಣ, ನಿಟ್ಟೂರು, ತೊರೆಕಾಡನಹಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳಿಗೆ ಭೇಟಿ ನೀಡಿ ಮತದಾರರಿಗೆ ಕೃತಜ್ಞತೆ ಸಲ್ಲಿಸಿ, ಸಾರ್ವಜನಿಕರ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ಆಡಳಿತದಲ್ಲಿ ಬದಲಾವಣೆ ತರಲು ಹಾಗೂ ನಿಷ್ಪಕ್ಷಪಾತವಾಗಿ ಕಾರ್ಯ ನಿರ್ವಹಿಸಲು ನಿಮ್ಮೆಲ್ಲರ ಸಹಕಾರ ಅಗತ್ಯ. ಅಧಿಕಾರಿಗಳು ಸರ್ಕಾರದ ಸೌಲಭ್ಯಗಳನ್ನು ಜನರಿಗೆ ತಿಳಿಸುವ ಜೊತೆಗೆ ಅರ್ಹರಿಗೆ ಅಗತ್ಯ ಸೌಲಭ್ಯಗಳನ್ನು ತಲುಪಿಸಿ ಎಂದು ಕರೆ ನೀಡಿದರು.

ಅಧಿಕಾರಿಗಳು ಸೇವಾ ಮನೋಭಾವದಿಂದ ಕಾರ್ಯ ನಿರ್ವಹಿಸಬೇಕು. ಆ ಮೂಲಕ ಜಡ್ಡುಗಟ್ಟಿದ ವ್ಯವಸ್ಥೆಯನ್ನು ತಿಳಿ ಮಾಡೋಣ ಎಂದ ಅವರು ತಾಲೂಕಿನಲ್ಲಿ ನಡೆಯುವ ಆಟಾಟೋಪಗಳಿಗೆ ಕಡಿವಾಣ ಹಾಕುತ್ತೇನೆ. ಮುಂಬರುವ ದಿನಗಳಲ್ಲಿ ಕಾನೂನಿನ ಚೌಕಟ್ಟಿನೊಳಗೆ ಉತ್ತಮ ಆಡಳಿತ ನೀಡಲಾಗುವುದು ಎಂದರು.

ಈ ವೇಳೆ ಉಪ ತಹಸೀಲ್ದಾರ್ ಉಮೇಶ್, ಕಂದಾಯ ರಾಜಸ್ವ ನಿರೀಕ್ಷಕ ಮಧುಸೂದನ್, ಗ್ರಾಮ ಆಡಳಿತಾಧಿಕಾರಿಗಳಾದ ವಿ.ಸೋಮಣ್ಣ, ಶಿವಕುಮಾರ್, ಲತಾ, ಪಿಡಿಓಗಳಾದ ಮಂಜಮ್ಮ, ಮಂಗಳ, ಮಲ್ಲಿಕಾರ್ಜುನ, ರುದ್ರಯ್ಯ ಇತರರಿದ್ದರು.

ಮರೀಗೌಡ ನಿಧನ




ಕೆ.ಆರ್.ಪೇಟೆ, ಜೂ.21– ತಾಲೂಕಿನ ಕಸಬಾ ಹೋಬಳಿಯ ವಳಗೆರೆ ಮೆಣಸ ಗ್ರಾಮದ ಹಿರಿಯ ಮುಖಂಡರು ಹಾಗೂ ನ್ಯಾಂಬ್‌ಲೆ ಅಂಗಡಿ ಮಾಲೀಕ ಮರೀಗೌಡ(75) ಅನಾರೋಗ್ಯದಿಂದ ನಿಧನರಾದರು.

ಮೃತರು ಪತ್ನಿ, ನಾಲ್ವರು ಹೆಣ್ಣು ಮಕ್ಕಳು, ಮೂವರು ಸಹೋದರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಗುರುವಾರ (ಜೂ.22) ಬೆಳಗ್ಗೆ 10 ಗಂಟೆಗೆ ಸ್ವಗ್ರಾಮ ವಳಗೆರೆಮೆಣಸ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೃತರ ನಿಧನಕ್ಕೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಅಕ್ಕಿ ಗ್ಯಾರಂಟಿ ಬಗ್ಗೆ ಸರ್ಕಾರದ ದಿನಕ್ಕೊಂದು ನೆಪ

ಸ್ವಯಂಕೃತ ತಪ್ಪಿಗೆ ಕೇಂದ್ರ ಹೊಣೆ ಮಾಡುವುದು ತರವೇ; ಮಾಜಿ ಸಿಎಂ ಕುಮಾರಸ್ವಾಮಿ ವಾಗ್ದಾಳಿ



ಬೆಂಗಳೂರು, ಜೂ.21 (ಕೆಎಂಶಿ)– ಅಕ್ಕಿ ಗ್ಯಾರಂಟಿ ಬಗ್ಗೆ ದಿನಕ್ಕೊಂದು ನೆಪ ಹೇಳುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಕಿಡಿಕಾರಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ತಾನು ಎಸಗಿದ ಸ್ವಯಂಕೃತ ತಪ್ಪಿಗೆ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುತ್ತಾ ಜನರನ್ನು ಈ ಸರ್ಕಾರ ಯಾಮಾರಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾರೋ ಚುನಾವಣಾ ತಂತ್ರಗಾರರ ಮಾತು ಕೇಳಿಕೊಂಡು ಗ್ಯಾರಂಟಿ ಘೋಷಣೆ ಮಾಡಿದಾಗ, ಯೋಜನೆ ಜಾರಿಗೆ ಅಗತ್ಯವಾದ ಸಿದ್ಧತೆ ಮಾಡಿಕೊಳ್ಳಬೇಕಿತ್ತು. ಅಕ್ಕಿ ಗ್ಯಾರಂಟಿ ಬಗ್ಗೆ ಇವರೇನು ಕೇಂದ್ರ ಸರ್ಕಾರಕ್ಕೆ ಅರ್ಜಿ ಹಾಕಿದ್ರಾ. ಪೊಳ್ಳು ಭರವಸೆ ಕೊಟ್ಟು ಇನ್ನೊಬ್ಬರ ಮೇಲೆ ಗೂಬೆ ಕೂರಿಸುವುದು ಎಷ್ಟು ಸರಿ. ಸರಿ–ತಪ್ಪು ಎನ್ನುವುದನ್ನು ನಾವು ವಿಚಾರ ಮಾಡಬೇಕಲ್ಲವೇ ಎಂದು ಅಭಿಪ್ರಾಯಪಟ್ಟರು.

ಕೇಂದ್ರ ಸರ್ಕಾರ ಯಾಕೆ ಅಕ್ಕಿ ಕೊಡಬೇಕು ನಿಮಗೆ. ಕೇಂದ್ರ ಸರ್ಕಾರಕ್ಕೆ ಅರ್ಜಿ ಹಾಕಿಕೊಂಡಿದ್ರಾ ನೀವು. ಯಾವನೋ ಬಂದು ಎಲೆಕ್ಷನ್ ಸ್ಟ್ರಾಟೆಜಿಸ್ಟ್ ಐಡಿಯಾ ಕೊಟ್ಟ ಅಂತ ನೀವು ಫ್ರೀ ಫ್ರೀ ಅಂದ್ರಿ. ಸಚಿವರ ಹೆಂಡ್ತಿಗೂ ಫ್ರೀ, ನನ್ನ ಹೆಂಡತಿಗೂ ಫ್ರೀ ಎಂದು ಹೇಳಿ ಎಲ್ಲರೂ ಅರ್ಜಿ ಹಾಕಿಕೊಳ್ಳಬಹುದು ಎಂದ್ರಿ, ಈಗ ನೋಡಿದರೆ ಬೇರೆ ವರಸೆ ಶುರು ಮಾಡಿಕೊಂಡಿದ್ದೀರಿ ಎಂದು ವಾಗ್ದಾಳಿ ನಡೆಸಿದರು.

ಗೃಹಜ್ಯೋತಿ ಕತ್ತಲಾಗಿ ಪರಿಣಮಿಸಿದೆ. ವಿದ್ಯುತ್ ಉಚಿತ ಕೊಡ್ತೀವಿ ಅಂತ ಹೇಳಿದವರು ಈಗಿನ ಪರಿಸ್ಥಿತಿಯನ್ನು ಅವಲೋಕನ ಮಾಡಬೇಕು. ವಿಟಿಯು ಉಪ ಕುಲಪತಿ ಬಾಯಿ ಬಡ್ಕೊಳ್ತಿದ್ದಾರೆ. ವಿದ್ಯುತ್ ಬಿಲ್ ನೋಡಿ ಅವರು ಶಾಕ್‌ಗೆ ಗುರಿಯಾಗಿದ್ದಾರೆ. ಬಾಕಿ ಮೊತ್ತ ಕಂಡು ಬೇಸ್ತು ಬಿದ್ದಿದ್ದಾರೆ. ಇನ್ನೆಷ್ಟು ಶಾಕ್ ಕೊಡುತ್ತೀರಿ ಎಂದು ಮಾಜಿ ಮುಖ್ಯಮಂತ್ರಿ ಅವರು ಸರಕಾರವನ್ನು ತರಾಟೆಗೆ ತೆಗೆದುಕೊಂಡರು.

ಎರಡು ರಾಷ್ಟ್ರೀಯ ಪಕ್ಷಗಳ ಇಂದಿನ ನಡವಳಿಕೆ ನೋಡಿದಾಗ ತೀವ್ರ ಬೇಸರವಾಗುತ್ತಿದೆ ಎಂದ ಅವರು, ರಾಜ್ಯದ ಜನತೆ ಅವರನ್ನು ನಂಬಿ ಮತ ಕೊಟ್ಟಿದ್ದಾರೆ. ಜನತೆ ಎರಡು ಪಕ್ಷಗಳ ನಾಟಕ ನೋಡಬೇಕಾಗಿದೆ. ಇವರು ಯಾವ ರೀತಿ ಟೋಪಿ ಹಾಕ್ತಾರೆ ಅಂತ ನೋಡುವ ಅನಿವಾರ್ಯತೆಯನ್ನು ಜನರೇ ಸೃಷ್ಟಿ ಮಾಡಿಕೊಂಡಿದ್ದಾರೆ.

ಕಾಂಗ್ರೆಸ್ ಪಕ್ಷದ ಅಧ್ಯಕ್ಷರು, ಸರಕಾರದ ಸಚಿವ, ಕೇಂದ್ರ ಸರ್ಕಾರವನ್ನು ದೂಷಣೆ ಮಾಡುತ್ತಿದ್ದಾರೆ. ಗ್ಯಾರಂಟಿಗಳನ್ನು ರೂಪಿಸುವಾಗ ಇದೆಲ್ಲಾ ಗೊತ್ತಿರಲಿಲ್ಲವೇ ಎಂದು ಕುಮಾರಸ್ವಾಮಿ ಅವರು ತರಾಟೆಗೆ ತೆಗೆದುಕೊಂಡರು.

ಮುಖ್ಯಮಂತ್ರಿಗಳು ನೋಡಿದರೆ ಭಾರತದ ಆಹಾರ ನಿಗಮಕ್ಕೆ ಪತ್ರ ಬರೆದಿದ್ದೆ ಎಂದು ಹೇಳುತ್ತಿದ್ದಾರೆ. ಅವರು ಜವಾಬ್ದಾರಿ ಸ್ಥಾನದಲ್ಲಿ ಇದ್ದು ಇಂಥ ಉಡಾಫೆ ಉತ್ತರ ಕೊಟ್ಟರೆ ಹೇಗೆ. ಕೇಂದ್ರದಿಂದ ಅಕ್ಕಿ ಬೇಕು ಅಂದರೆ ಕೇಂದ್ರ ಸರಕಾರದ ಸಂಬಂಧಪಟ್ಟ ಸಚಿವರ ಜತೆ ಮಾತನಾಡಬೇಕಿತ್ತು ಮನವಿ ಕೊಡಬೇಕಿತ್ತು. ರಾಜ್ಯದ ಆಹಾರ ಮತ್ತು ನಾಗರಿಕ ಪೂರೈಕೆ ಖಾತೆ ಸಚಿವರೇ ಹೋಗಿ ಚರ್ಚೆ ನಡೆಸಬೇಕಿತ್ತು. ಅದನ್ನು ಬಿಟ್ಟು ಉಡಾಫೆ ಹೇಳಿಕೆ ಕೊಡುತ್ತಿದ್ದಾರೆ ಎಂದು ಕಿಡಿಕಾರಿದರು.

ಕೇಂದ್ರ ಸರ್ಕಾರಕ್ಕೆ ಅವರದೇ ಆದ ಕಮಿಟ್‌ಮೆಂಟ್ ಇರುತ್ತದೆ. ನಮಗೆ ಅಕ್ಕಿ ಬೇಕು ಅಂದರೆ ಅವರು ಹೇಗೆ ಕೊಡ್ತಾರೆ. ನಾನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿದ್ದ ಸಾಲ ಮನ್ನಾ ಮಾಡಿದಾಗ ಪ್ರಧಾನಿಗಳ ಹತ್ತಿರ ಹೋಗಿ ಕೇಳಿದ್ದೇನೆಯೆ. ದರ್ದು ಇರೋದು ಕಾಂಗ್ರೆಸ್ ಪಕ್ಷಕ್ಕೆ, ಅವರಿಗೇನಿದೆ ದರ್ದು. ನಿಮಗೆ ಬೇಕಾದ ವ್ಯವಸ್ಥೆ ನೀವೇ ಮಾಡಿಕೊಳ್ಳಬೇಕು ಎಂದು ಅವರು ಅಭಿಪ್ರಾಯಪಟ್ಟರು.

ನಾನು ಪಂಚರತ್ನ ಯೋಜನೆಗಳನ್ನು ಘೋಷಣೆ ಮಾಡಿದ್ದೆ. ಅವುಗಳನ್ನು ಹೇಗೆ ಜಾರಿ ಮಾಡಬೇಕು. ಹೇಗೆ ಹಣ ಹೊಂದಿಸಬೇಕು ಎಂಬುದಕ್ಕೆ ರೂಪುರೇಷೆ ಸಿದ್ಧ ಮಾಡಿದ್ದೆ. ಆದರೆ ಜನ ನನ್ನನ್ನು ನಂಬಲಿಲ್ಲ. ಪಾಪ ಇವರ 5 ಗ್ಯಾರಂಟಿಗಳನ್ನು ನಂಬಿದರು. ಇನ್ನು ಯಜಮಾನಿಯರಿಗೆ 2 ಸಾವಿರ ಹೇಗೆ ಕೊಡ್ತಾರೆ ನೋಡೋಣ ಎಂದರು.

ಕೇಂದ್ರ ಸರಕಾರ ಸರ್ವರ್ ಹ್ಯಾಕ್ ಮಾಡಿದ್ದ ಪರಿಣಾಮ ಗೃಹಲಕ್ಷ್ಮಿ ಗ್ಯಾರಂಟಿ ಜಾರಿ ಮಾಡಲಾಗುತ್ತಿಲ್ಲ ಎಂದಿರುವ ಸಚಿವ ಸತೀಶ್ ಜಾರಕಿಹೊಳಿ ಹೇಳಿಕೆ ಬಗ್ಗೆ ಕೇಳಲಾದ ಪ್ರಶ್ನೆಗೆ ಸಿಡಿಮಿಡಿಗೊಂಡ ಮಾಜಿ ಮುಖ್ಯಮಂತ್ರಿಗಳು, ಯಾರ್ರೀ ಸತೀಶ್ ಜಾರಕಿಹೊಳಿ, ಬಾಯಿ ಚಪಲಕ್ಕೆ ಮಾತನಾಡ್ತಿದ್ದಾರೆ ಅವರು. ಯಾಕೆ ಹ್ಯಾಕ್ ಮಾಡ್ತಾರೆ, ನಿಮ್ಮ ಸರ್ವರ್ ಬಲಪಡಿಸಿಕೊಳ್ಳೋದು ನಿಮ್ಮ ಜವಾಬ್ದಾರಿ ಎಂದರು. ನಾನು ಇವರಿಗೆ ಟೈಮ್ ಕೊಡ್ತೀನಿ. ಬಜೆಟ್ ಅಧಿವೇಶನದಲ್ಲಿ ಏನೇನು ಘೋಷಣೆ ಮಾಡ್ತಾರೆ ನೋಡೋಣ. ಪ್ರಣಾಳಿಕೆಯಲ್ಲಿ ಕೂಡ ಅದೆಷ್ಟೋ ಭರವಸೆಗಳನ್ನು ನೀಡಿದ್ದಾರೆ. ಎಲ್ಲವೂ ಎಲ್ಲಿಗೆ ಬಂದು ನಿಲ್ಲುತ್ತದೆಯೋ ನೋಡೋಣ.

ಬೆಂಗಳೂರು–ಮೈಸೂರು ಹೆದ್ದಾರಿಯೋ... ಸಾವಿನ ರಹದಾರಿಯೋ...



ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಸಂಭವಿಸುತ್ತಿರುವ ನಿರಂತರ ಅಪಘಾತಗಳ ಬಗ್ಗೆ ತೀವ್ರ ಆಘಾತ ವ್ಯಕ್ತಪಡಿಸಿದ ಕುಮಾರಸ್ವಾಮಿ ಅವರು, ಇದು ಎಕ್ಸ್‌ಪ್ರೆಸ್ ಹೆದ್ದಾರಿಯೋ ಅಥವಾ ಸಾವಿನ ರಹದಾರಿಯೋ ಎಂದು ಪ್ರಶ್ನಿಸಿದರು. ಈ ಹೆದ್ದಾರಿಯನ್ನು ಅತ್ಯಂತ ಅವೈಜ್ಞಾನಿಕವಾಗಿ ನಿರ್ಮಾಣ ಮಾಡಲಾಗಿದೆ. ಅದನ್ನು ಸರಿಪಡಿಸುವ ಬಗ್ಗೆ ಕೇಂದ್ರ ಸರ್ಕಾರವಾಗಲೀ, ಹೆದ್ದಾರಿ ಪ್ರಾಧಿಕಾರವಾಗಲೀ ಅಥವಾ ರಾಜ್ಯ ಸರ್ಕಾರವಾಗಲೀ ಗಮನ ಕೊಡುತ್ತಿಲ್ಲ. ಯಾರೋ ಬಂದರು, ದುಡ್ಡು ಮಾಡಿ ಕೊಂಡು ಹೋದರು. ಜನ ಮಾತ್ರ ದಿನನಿತ್ಯವೂ ಸಾಯುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಅವರು ಕಿಡಿಕಾರಿದರು. ಶಾಲಾಮಕ್ಕಳಿಗೆ ವಿತರಣೆ ಮಾಡಲಾಗುವ ಮೊಟ್ಟೆ, ಬಾಳೆಹಣ್ಣು ಕಡಿತ ಮಾಡಿರುವ ಬಗ್ಗೆಯೂ ಕುಮಾರಸ್ವಾಮಿ ಆಕ್ಷೇಪ ವ್ಯಕ್ತಪಡಿಸಿದರು. ಮುಂದೆ ಒಂದು ಮೊಟ್ಟೆ, ಒಂದು ಬಾಳೆಹಣ್ಣು ಅದು ಕೂಡ ಇರಲ್ವೇನೊ. ಇವರಿಗೆ ಮಕ್ಕಳ ಆಹಾರದಲ್ಲಿ ಹಣದ ಹಪಾಹಪಿ ಶುರುವಾಗಿದೆ ಎಂದು ಕಟುವಾಗಿ ಟೀಕಿಸಿದರು.

ವಿಧಾನಸೌಧದಲ್ಲಿ ಕುಸ್ತಿ ಆಗುತ್ತೇನೋ...!

ಮುಖ್ಯಮಂತ್ರಿ ಹುದ್ದೆಯನ್ನು ಹಂಚಿಕೊಳ್ಳುವ ಬಗ್ಗೆ ಕಾಂಗ್ರೆಸ್ ಪಕ್ಷದಲ್ಲಿ ಎದ್ದಿರುವ ಕೋಲಾಹಲದ ಬಗ್ಗೆ ಕುಮಾರಸ್ವಾಮಿ ಪ್ರತಿಕ್ರಿಯಿಸಿ, ಅಧಿಕಾರ ಹಂಚಿಕೆ ಅವರಿಗೆ ಸೇರಿದ ವಿಚಾರ. 5 ವರ್ಷ ಅವರೇ ಇರುತ್ತಾರೋ, ಇನ್ನಾದರೂ ಬರುತ್ತಾರೋ ನನಗೆ ಗೊತ್ತಿಲ್ಲ. ವೀರಪ್ಪ ಮೊಯ್ಲಿ ಅವರ ಕಾಲದಲ್ಲಿ ವಿಧಾನಸೌಧದಲ್ಲಿ ಚೇರ್, ಮೇಜು ಹಿಡಿದುಕೊಂಡು ಕುಸ್ತಿ ಮಾಡಿದ್ದರು. ಈಗಲೂ ಆ ರೀತಿ ಆಗುತ್ತೋ ಏನೋ ನನಗೆ ಗೊತ್ತಿಲ್ಲ. ಎಲ್ಲವೂ ಮುಂದೆ ಗೊತ್ತಾಗಲಿದೆ ಎಂದರು.

ವಿಶ್ವ ಸಂಗೀತ ದಿನಾಚರಣೆ ಅಂಗವಾಗಿ ಕಲಾ ಸಾರಥಿ ಪ್ರಶಸ್ತಿ ಪ್ರದಾನ

ಸಂಗೀತದಿಂದ ಆರೋಗ್ಯ ವಿಚಾರ ಮಂಥನ ಕಾರ್ಯಕ್ರಮ



ಮೈಸೂರು, ಜೂ. 21– ವಿಶ್ವ ಸಂಗೀತ ದಿನಾಚರಣೆ ಅಂಗವಾಗಿ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಸಂಗೀತ ಕ್ಷೇತ್ರದ ಸಾಧಕರಿಗೆ ಸಂಗೀತ ಕಲಾ ಸಾರಥಿ ಪ್ರಶಸ್ತಿ ಪ್ರಧಾನ ಹಾಗೂ ಸಂಗೀತದಿಂದ ಆರೋಗ್ಯ ವಿಚಾರ ಮಂಥನ ಕಾರ್ಯಕ್ರಮವನ್ನು ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತನಿಧಿ ಕೇಂದ್ರದ ಆವರಣದಲ್ಲಿ ಏರ್ಪಡಿಸಲಾಗಿತ್ತು.

ವಿದ್ವಾನ್ ಗಣೇಶ ಭಟ್ (ಕೀಬೋರ್ಡ್ ವಾದಕರು), ವಿದ್ವಾನ್ ರಾಘವೇಂದ್ರ ರತ್ನಾಕರ್ (ಗಾಯಕರು), ವಿದ್ವಾನ್ ಡಿ. ರಾಜಕುಮಾರ್ (ತಾಳವಾದ್ಯ), ವಿದೂಷಿ ದಿವ್ಯಾ ಸಾಚಿ (ಗಾಯಕಿ), ವಿದ್ವಾನ್ ಎಮ್.ಸಿ. ಜಗದೀಶ್ (ತಬಲಾ ವಾದಕರು), ವಿದ್ವಾನ್ ಗುರುದತ್ (ರಿದಂಪ್ಯಾಡ್ ವಾದಕರು) ಅವರಿಗೆ ಕಲಾ ಸಾರಥಿ ಪ್ರಶಸ್ತಿ ಪ್ರಧಾನ ಮಾಡಲಾಯಿತು

ತಾಳವಾದ್ಯ ಪ್ರತಿಷ್ಠಾನದ ಅಧ್ಯಕ್ಷ ವಿದ್ವಾನ್ ಡಾ.ರಾಘವೇಂದ್ರ ಪ್ರಸಾದ್ ಮಾತನಾಡಿ, ಸಂಗೀತದಿಂದ ಮಕ್ಕಳ ಮಾನಸಿಕ ಅರೋಗ್ಯ ಉತ್ತಮಗೊಳ್ಳುತ್ತದೆ. ಅವರ ಮೆದುಳು ಚುರುಕುಗೊಳ್ಳುತ್ತದೆ. ಏಕಾಗ್ರತೆ ಮತ್ತು ನೆನಪಿನ ಶಕ್ತಿ ಹೆಚ್ಚಿಸುತ್ತದೆ. ಪಾರ್ಕಿನ್ಸನ್, ಡೆಮಿನ್ಶಿಯಾ, ಆಟಿಸಂನಂತಹ ಕಾಯಿಲೆಗಳಿಗೆ ಸಂಗೀತ ಚಿಕಿತ್ಸೆ ಕುರಿತು ಅಧ್ಯಯನಗಳು ನಡೆಯುತ್ತಿವೆ. ನಿಮ್ಹಾನ್ಸ್‌ನಲ್ಲಿ ಸಂಗೀತ ಪ್ರಯೋಗಾಲಯ ಸ್ಥಾಪಿಸಲಾಗಿದ್ದು, ಮಾನಸಿಕ ರೋಗಿಗಳಿಗೆ ಇದರ ಮೂಲಕ ಚಿಕಿತ್ಸೆ ನೀಡುವ ಪ್ರಯತ್ನವೂ ಸಾಗಿದೆ ಎಂದು ಹೇಳಿದರು. ನಂತರ ಮಾತನಾಡಿದ ಕಾಂಗ್ರೆಸ್ ಮುಖಂಡರಾದ ಎನ್ ಎಂ ನವೀನ್ ಕುಮಾರ್, ಸಂಗೀತ ಕೇವಲ ಮನೋರಂಜನೆಗೆ ಸೀಮಿತವಾಗಿಲ್ಲ. ಅದು ರೋಗಿಗಳ ಆರೋಗ್ಯ ಸುಧಾರಣೆಯಲ್ಲೂ ಪ್ರಮುಖ ಪಾತ್ರ ವಹಿಸುತ್ತದೆ. ಮನಸ್ಸಿಗೆ ಶಾಂತಿ, ನೆಮ್ಮದಿ ನೀಡುವ ಸಂಗೀತ ಹೃದಯಕ್ಕೆ ಸಂಬಂಧಿಸಿದ ಜೊತೆಯಲ್ಲೇ ಅದು ಮಾನಸಿಕ ಆರೋಗ್ಯದ ಮೇಲೂ ಉತ್ತಮ ಪರಿಣಾಮ ಬೀರಲಿದೆ. ನರಸಂಬಂಧಿ ಸಮಸ್ಯೆಗಳು ಹಾಗೂ ಮೆದುಳಿನ ಸಮಸ್ಯೆಗಳಿಗೆ ಸಂಗೀತ ಪರಿಣಾಮಕಾರಿ ಚಿಕಿತ್ಸೆಯಾಗಿದೆ. ಈ ನಿಟ್ಟಿನಲ್ಲಿ ವೈಜ್ಞಾನಿಕ ಸಂಶೋಧನೆಗಳು ನಡೆಯುತ್ತಿವೆ ಎಂದರು. ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷರಾದ ಹೇಮಾ ನಂದೀಶ್ ಮಾತನಾಡಿ, ಸಂಗೀತ ಕಾರ್ಯಕ್ರಮಗಳು ಕಲಾಭಿಮಾನಿಗಳಿಗೆ ನೆಮ್ಮದಿಯ ಔಷಧಿ ನೀಡುತ್ತದೆ. ದೇವರನಾಮ, ಭಜನೆ, ಸುಗಮ ಸಂಗೀತದಿಂದ ಹಿರಿಯ ನಾಗರಿಕರಿಗೆ ಬದುಕಿನ ಶಕ್ತಿ ಸಿಗುತ್ತದೆ. ಆಕಾಶವಾಣಿ, ದೂರದರ್ಶನ, ಸಂಗೀತ ವಿಶ್ವವಿದ್ಯಾನಿಲಯಗಳು ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಸಾಮಾಜಿಕ ಜಾಲತಾಣದ ಮೂಲಕ ಕಲಾವಿದರನ್ನು ಗುರುತಿಸಿ ಮುಖ್ಯವಾಹಿನಿಗೆ ತಂದು ಕಲಾಭಿಮಾನಿಗಳಿಗೆ ಪರಿಚಯಿಸಲು ಯೋಜನೆಗಳನ್ನು ರೂಪಿಸಬೇಕು ಎಂದು ಕರೆ ನೀಡಿದರು.

ವಿದ್ವಾನ್ ರಾಘವೇಂದ್ರ ಪ್ರಸಾದ್, ಜೀವದಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಎಂಪಿಕೆ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಸಾಮಾಜಿಕ ಹೋರಾಟಗಾರ ಅಜಯ್ ಶಾಸ್ತ್ರಿ, ಮಿರ್ಲೆ ಫಣೀಶ್, ಸುಚೇಂದ್ರ, ಚಂದ್ರು, ಸೂರಜ್ ಹಾಗೂ ಇನ್ನಿತರರು ಹಾಜರಿದ್ದರು.

ಪಿಎಸ್‌ಐ ನೇಮಕಾತಿ ಹಗರಣದ 52 ಆರೋಪಿತರ ಶಾಶ್ವತ ಡಿಬಾರ್

- ಪೊಲೀಸ್ ನೇಮಕಾತಿ ವಿಭಾಗ ಆದೇಶ
- ಉಳಿದ ಅಭ್ಯರ್ಥಿಗಳಿಗೆ ನೇಮಕಾವಕಾಶದ ಸಾಧ್ಯತೆ

ಬೆಂಗಳೂರು, ಜೂ.21(ಕೆಎಂಶಿ)– ರಾಜ್ಯದಲ್ಲಿ ತೀವ್ರ ವಿವಾದಕ್ಕೆ ಎಡೆಮಾಡಿಕೊಟ್ಟಿದ್ದ 545 ಪಿಎಸ್‌ಐ ಹುದ್ದೆಗಳ ನೇಮಕಾತಿ ಹಗರಣದ 52 ಆರೋಪಿತ ಅಭ್ಯರ್ಥಿಗಳನ್ನು ಪರೀಕ್ಷೆಯಿಂದ ಶಾಶ್ವತವಾಗಿ ಡಿಬಾರ್ ಮಾಡಿ ಪೊಲೀಸ್ ನೇಮಕಾತಿ ವಿಭಾಗ ಆದೇಶಿಸಿದೆ. ಉಳಿದ ಅಭ್ಯರ್ಥಿಗಳಿಗೆ ನೌಕರಿ ಸಿಗುವ ವಿಶ್ವಾಸವಿದ್ದು, ಇದು ನ್ಯಾಯಾಲಯದ ತೀರ್ಪಿನ ಮೇಲೆ ಅವಲಂಬನೆಯಾಗಲಿದೆ.

ಪಿಎಸ್‌ಐ ನೇಮಕಾತಿ ಲಿಖಿತ ಪರೀಕ್ಷೆಯಲ್ಲಿ ನಡೆದಿದ್ದ ಅಕ್ರಮದಲ್ಲಿ ಭಾಗಿಯಾದ ಆರೋಪಿಗಳ ವಿರುದ್ಧ ತನಿಖೆ ನಡೆಸಿದ್ದ ಸಿಐಡಿಯು 52 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ. ಪೊಲೀಸ್ ಇಲಾಖೆ ನಡೆಸುವ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗವಹಿಸದಂತೆ ಶಾಶ್ವತವಾಗಿ ನಿಷೇಧಿಸಲಾಗಿದೆ ಎಂದು ಸಿಐಡಿ ಮೂಲಗಳು ತಿಳಿಸಿವೆ. ಬೆಂಗಳೂರು ನಗರ, ಕಲಬುರಗಿ, ಹುಬ್ಬಳ್ಳಿ– ಧಾರವಾಡ ನಗರ, ತುಮಕೂರು ನಗರ ಠಾಣೆಗಳಲ್ಲಿ ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದ್ದವು. ನೇಮಕಾತಿಯ ಲಿಖಿತ ಪರೀಕ್ಷೆಯಲ್ಲಿ ಪತ್ರಿಕೆ–1ರಲ್ಲಿ ಕೆಲ ಅಭ್ಯರ್ಥಿಗಳು ಬ್ಲೂಟೂತ್, ಇತರೆ ಎಲೆಕ್ಟ್ರಾನಿಕ್ ಸಾಧನ ಬಳಸಿ ಅಕ್ರಮ ಎಸಗಿದ್ದ ಆರೋಪಗಳಿದ್ದವು. ಕೆಲವು ಅಭ್ಯರ್ಥಿಗಳು ಓಎಂಆರ್ ಶೀಟ್‌ಗಳನ್ನೇ ತಿದ್ದುಪಡಿ ಮಾಡಿಸಿಕೊಂಡಿರುವುದು ದೃಢವಾಗಿದ್ದರಿಂದ ಅಂಥ ಅಭ್ಯರ್ಥಿಗಳನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದರು. ಕರ್ನಾಟಕ ನಾಗರಿಕ ಸೇವೆಗಳ ನಿಯಮಗಳ ಪ್ರಕಾರ 52 ಅಭ್ಯರ್ಥಿಗಳು ದುರ್ನಡತೆ ತೋರಿದ್ದಾರೆ. ನಕಲಿ ವ್ಯಕ್ತಿಗಳು, ಸುಳ್ಳು ಹೇಳಿಕೆ, ವಾಸ್ತವ ಮಾಹಿತಿ ಮರೆಮಾಚಿರುತ್ತಾರೆ. ನೇಮಕಾತಿ ಸಮಿತಿ ನೀಡಿರುವ ಸೂಚನೆಗಳನ್ನು ಪರೀಕ್ಷಾ ಕೊಠಡಿಯಲ್ಲಿ ಉಲ್ಲಂಘಿಸಿ ನಕಲು ಮಾಡಿರುವುದನ್ನು ದುರ್ನಡತೆ ಎಂದು ನಿರ್ಧರಿಸಲಾಗಿದೆ ಎಂದು ನೇಮಕಾತಿ ವಿಭಾಗದ ಅಧಿಕಾರಿಗಳು ಹೇಳಿದ್ದಾರೆ. ಡಿಬಾರ್ ಆದ ಅಭ್ಯರ್ಥಿಗಳಲ್ಲಿ 10 ಜನ ಕಾನ್‌ಸ್ಟೆಬಲ್‌ಗಳು ಸಹ ಇದ್ದಾರೆ.

ಶ್ರೀ ರಾಜರಾಜೇಶ್ವರಿ ದೇವತಾ ಆಷಾಢ ಮಾಸ ಪೂಜಾ ಮಹೋತ್ಸವ

ಮೈಸೂರು, ಜೂ.21– ಮೈಸೂರಿನ ಶ್ರೀ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಶ್ರೀ ರಾಜರಾಜೇಶ್ವರಿ ದೇವತಾ ಆಷಾಢ ಮಾಸ ಪೂಜಾ ಮಹೋತ್ಸವ ಏರ್ಪಡಿಸಲಾಗಿದೆ.

ಜೂ. 23ರ ಬೆಳಗ್ಗೆ 7.30ರಿಂದ ಪಂಚಾಮೃತಾಭಿಷೇಕ, ಬೆಳಗ್ಗೆ 10ಕ್ಕೆ ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5.30 ರಿಂದ ಶ್ರೀ ರಾಜರಾಜೇಶ್ವರಿ ಭಜನಾ ಮಂಡಳಿ ಮತ್ತು ಬಡಾವಣೆಯ ಮಹಿಳೆಯರಿಂದ ಲಲಿತ ಸಹಸ್ರನಾಮ ಪಾರಾಯಣ, ಸಂಜೆ 6.30ರಿಂದ ಲತಾ ರಾಮರಾವ್ ಅವರಿಂದ ವೀಣಾವಾದನ, ಸಂಜೆ 8ಕ್ಕೆ ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ. ಜೂ.30ರ ಬೆಳಗ್ಗೆ 7.30ರಿಂದ ಪಂಚಾಮೃತಾಭಿಷೇಕ, ಬೆಳಗ್ಗೆ 10 ಗಂಟೆಗೆ ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5.30ರಿಂದ ಶ್ರೀ ರಾಜರಾಜೇಶ್ವರಿ ಭಜನಾ ಮಂಡಳಿಯಿಂದ ಸೌಂದರ್ಯ ಲಹರಿ ಪಾರಾಯಣ, ಸಂಜೆ 6.30ರಿಂದ ಬಿಇ ಎಂಎಲ್ ವೇದ ಬಳಗದ ಸದಸ್ಯರಿಂದ ವೇದ ಪಾರಾಯಣ, ಸಂಜೆ 8ಕ್ಕೆ ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ. ಜು.7ರ ಬೆಳಗ್ಗೆ 7.30ರಿಂದ ಪಂಚಾ ಮೃತಾಭಿಷೇಕ, ಬೆಳಗ್ಗೆ 10 ಗಂಟೆಗೆ ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5.30 ರಿಂದ ಶ್ರೀ ರಾಜರಾಜೇಶ್ವರಿ ಭಜನಾ ಮಂಡಳಿಯಿಂದ ಸ್ತೋತ್ರಗಳ ಪಾರಾಯಣ, ಸಂಜೆ 6.30 ರಿಂದ ಪದ್ಮ ಮತ್ತು ವೃಂದದವರಿಂದ ಭಜನೆ ಮತ್ತು ಭಕ್ತಿಗೀತೆಗಳು, ಸಂಜೆ 8ಕ್ಕೆ ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ.

ಜು.10ರ ಬೆಳಗ್ಗೆ 7.30ರಿಂದ ಪಂಚಾ ಮೃತಾಭಿಷೇಕ, ಮಹಾಮಂಗಳಾರತಿ, ಶ್ರೀ ದೇವಿಯವರ ವರ್ಧಂತ್ಯೋತ್ಸವ ಪ್ರಯುಕ್ತ ದುರ್ಗಾ ಹೋಮ, ಬೆಳಗ್ಗೆ 10ಕ್ಕೆ ಪೂರ್ಣಾ ಹುತಿ, ಸಂಜೆ 5.30ರಿಂದ ಶ್ರೀ ರಾಜ ರಾಜೇಶ್ವರಿ ಭಜನಾ ಮಂಡಳಿಯಿಂದ ಲಲಿತಾ ಸಹಸ್ರನಾಮ ಪಾರಾಯಣ, ಸಂಜೆ 6.30 ರಿಂದ ಶ್ರೀಮತಿ ಆಶಾ ವೆಂಕಟೇಶ್ ಮತ್ತು ವೃಂದ, ರಂಜನಿ ಗಾನ ಕಲಾ ಶಾಲೆಯವರಿಂದ ಸಂಗೀತ ಕಾರ್ಯಕ್ರಮ, ಸಂಜೆ 8ಕ್ಕೆ ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ.

ಜು. 14ರ ಬೆಳಗ್ಗೆ 7.30 ರಿಂದ ಪಂಚಾ ಮೃತಾಭಿಷೇಕ, ಬೆಳಗ್ಗೆ 10 ಗಂಟೆಗೆ ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6 ರಿಂದ ಶ್ರೀಮತಿ ವಿಜಯಲಕ್ಷ್ಮಿ ಸುದರ್ಶನ್ ಮತ್ತು ವೃಂದ, ಶ್ರೀ ರಾಜ ರಾಜೇಶ್ವರಿ ಭಜನಾ ಮಂಡಳಿಯಿಂದ ಭಕ್ತಿಗೀತೆಗಳು, ಸಂಜೆ 8ಕ್ಕೆ ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ.

ಮೈಸೂರು ಮಿತ್ರ ಗುರುವಾರ 22 ಜೂನ್ 2023



ಮುಖ್ಯಮಂತ್ರಿ ಸಿದ್ದರಾಮಯ್ಯ ನವದೆಹಲಿಯಲ್ಲಿ ಬುಧವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಸೌಹಾರ್ದಯುತ ಭೇಟಿಯಾಗಿ, ಮಾತುಕತೆ ನಡೆಸಿದರು.

ತಂದೆಯಿಂದ ಸಬ್‌ಇನ್ಸ್‌ಪೆಕ್ಟರ್ ಜವಾಬ್ದಾರಿ ವಹಿಸಿಕೊಂಡ ಪುತ್ರಿ!

ಮಂಡ್ಯ,ಜೂ.21–ಅದೊಂದು ಹೆಮ್ಮೆ ಹಾಗೂ ಭಾವುಕತೆಯ ಸಾಕ್ಷಿಯಾದ ಕ್ಷಣ. ಮಂಡ್ಯ ಸೆಂಟ್ರಲ್ ಪೊಲೀಸ್ ಠಾಣೆಯ ಅಧಿಕಾರಿ ಹಾಗೂ ಸಿಬ್ಬಂದಿ ಸಿಹಿ ಹಂಚಿ, ಸಂಭ್ರಮಿಸಿದರು. ಇದಕ್ಕೆ ಕಾರಣವಾಗಿದ್ದು ಮಾತ್ರ ಈ ಠಾಣೆಯಲ್ಲಿ ಸಬ್‌ಇನ್ಸ್‌ಪೆಕ್ಟರ್ ಆಗಿದ್ದು, ಎಸ್ಪಿ ಕಚೇರಿಗೆ ವರ್ಗಾವಣೆಗೊಂಡ ಬಿ.ಎಸ್.ವೆಂಕಟೇಶ್ ಅವರು ತನ್ನ ಜವಾಬ್ದಾರಿಯನ್ನು ಪುತ್ರಿಗೆ ಹಸ್ತಾಂತರಿಸಿದ್ದು, ವಿಶೇಷವೆಂದರೆ ವೆಂಕಟೇಶ್ ಅವರ ಪುತ್ರಿ ಬಿ.ವಿ.ವರ್ಷಾ ಅವರು ಸಬ್‌ಇನ್ಸ್‌ಪೆಕ್ಟರ್ ಆಗಿದ್ದು ಮೊದಲ ಪೋಸ್ಟಿಂಗ್ ಅವರ ತಂದೆ ಕರ್ತವ್ಯ ನಿರ್ವಹಿಸುತ್ತಿದ್ದ ಠಾಣೆಗೇ ದೊರೆತಿದೆ. ಈಕೆ ತನ್ನ ತಂದೆಯಿಂದಲೇ ಅಧಿಕಾರ ಸ್ವೀಕರಿಸುವಾಗ ಭಾವುಕರಾದರು.

ಮಗಳಿಗೆ ತಂದೆ ಅಧಿಕಾರ ಹಸ್ತಾಂತರಿಸಿದ ವಿಶೇಷ ಸನ್ನಿವೇಶವನ್ನು ಠಾಣೆಯ ಸಿಬ್ಬಂದಿ ಸಿಹಿ ಹಂಚಿ, ಸಂಭ್ರಮಿಸಿದ್ದಲ್ಲದೇ, ತಂದೆ ಮತ್ತು ಮಗಳಿಗೆ ಶುಭ ಹಾರೈಸಿದರು. ಸಬ್‌ಇನ್ಸ್‌ಪೆಕ್ಟರ್ ವೆಂಕಟೇಶ್ ತುಮಕೂರು ಜಿಲ್ಲೆ ಹುಲಿಯೂರುದುರ್ಗ ಮೂಲದವರು. 16 ವರ್ಷ ಸೇನೆಯಲ್ಲಿ ಸೇವೆ ಸಲ್ಲಿಸಿದ ನಂತರ ಸಬ್‌ಇನ್ಸ್‌ಪೆಕ್ಟರ್ ಆಗಿ 2010ರಲ್ಲಿ ಆಯ್ಕೆಯಾದರು. ಸೇನೆಯಲ್ಲಿದ್ದಾಗ ಕಾರ್ಗಿಲ್ ಯುದ್ಧದಲ್ಲೂ ಭಾಗವಹಿಸಿದ್ದ ಇವರು, ಪಾಕಿಸ್ತಾನ, ಚೀನಾ ಮತ್ತು ಬಾಂಗ್ಲಾ ಗಡಿಗಳಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ. ಶಿಸ್ತಿಗೆ ಹೆಸರುವಾಸಿಯಾದ ಇವರನ್ನು ಮಂಡ್ಯ ಪೊಲೀಸ್ ಇಲಾಖೆಯಲ್ಲಿ ಅಭಿಮಾನದಿಂದ ಮಿಲ್ಟ್ರಿಮ್ಯಾನ್ ಎಂದು ಕರೆಯುತ್ತಾರೆ. ಇವರು ಮೈಸೂರು, ಕೊಡಗು, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಯ ವಿವಿಧ ಠಾಣೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಕಳೆದ ಒಂದೂವರೆ ವರ್ಷದಿಂದ ಮಂಡ್ಯ ಸೆಂಟ್ರಲ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಆಗಿದ್ದ ಇವರು, ಮಂಗಳವಾರ ತಮ್ಮ ಪುತ್ರಿಗೆ ಅಧಿಕಾರ ಹಸ್ತಾಂತರಿಸಿ ಜಿಲ್ಲಾ ಎಸ್ಪಿ ಕಚೇರಿಗೆ ತೆರಳಿದರು.

ತಂದೆ ಸೇನೆಯಲ್ಲಿದ್ದಾಗ ತಾಯಿಯ ಆಶ್ರಯದಲ್ಲಿ ಬೆಳೆದ ವರ್ಷಾ ಸರ್ಕಾರಿ ಶಾಲೆ ಹಾಗೂ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದಾರೆ. ಎಂಎ ಪದವಿ ನಂತರ ಸಬ್‌ಇನ್ಸ್‌ಪೆಕ್ಟರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ 2022ನೇ ಬ್ಯಾಚ್‌ನ ಸಬ್‌ಇನ್ಸ್‌ಪೆಕ್ಟರ್ ಆಗಿ ಆಯ್ಕೆಯಾದ ಅವರು, ಕಲಬುರಗಿಯಲ್ಲಿ ತರಬೇತಿ ಮುಗಿಸಿ 1 ವರ್ಷ ಪ್ರೊಬೇಷನರಿ ಅಧಿಕಾರಿಯಾಗಿ ಮಂಡ್ಯ ಜಿಲ್ಲೆಯ ವಿವಿಧ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ.

ಮಂಡ್ಯ ಸೆಂಟ್ರಲ್ ಪೊಲೀಸ್ ಠಾಣೆಯಲ್ಲಿ ಸಂಭ್ರಮದ ಕ್ಷಣ



ಮಂಡ್ಯ ಸೆಂಟ್ರಲ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಆಗಿ ತಂದೆಯಿಂದಲೇ ಅಧಿಕಾರ ಸ್ವೀಕರಿಸಿದ ವರ್ಷಾ ಅವರಿಗೆ ಅಭಿನಂದನೆಗಳು. ಇದು ಕೆಲವೇ ಕೆಲವರಿಗೆ ಮಾತ್ರ ಸಿಗುವ ಅಪರೂಪದ ಅವಕಾಶ. ಇವರು ಪೊಲೀಸ್ ಇಲಾಖೆಯಲ್ಲಿ ನಿಷ್ಠೆ, ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿ, ಸಾಧನೆ ಮಾಡುವಂತಾಗಲಿ. 16 ವರ್ಷ ಸೇನೆಯಲ್ಲಿದ್ದು, ದೇಶ ರಕ್ಷಣೆಗಾಗಿ ಸೇವೆ ಸಲ್ಲಿಸಿ ನಂತರ ಪೊಲೀಸ್ ಇಲಾಖೆಗೆ ಬಂದು ಅತ್ಯಂತ ಪ್ರಾಮಾಣಿಕರೆಂದು ಹೆಸರು ಪಡೆದಿರುವ ವೆಂಕಟೇಶ್ ಅವರ ಮಾರ್ಗದರ್ಶನ ಮಗಳಿಗೆ ಹಾಗೂ ಸಮಾಜಕ್ಕೆ ದೊರೆಯಲಿ. **–ಚಲುವರಾಯಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ.**

ನನ್ನ ಮಗಳಿಗೆ ನಾನೇ ಅಧಿಕಾರ ಹಸ್ತಾಂತರ ಮಾಡುತ್ತೇನೆ ಎಂದು ನಿರೀಕ್ಷಿಸಿರಲಿಲ್ಲ. ಈ ದಿನ ನನಗೆ ಅತ್ಯಂತ ಸಂತೋಷವಾಗಿದೆ. ಜನರ ಸೇವೆ ಮಾಡಲು ಮಗಳು ಪೊಲೀಸ್ ಇಲಾಖೆಗೆ ಬಂದಿರುವುದು ಅತ್ಯಂತ ಖುಷಿಯಾಗಿದೆ. ನಾನು ಸೇನೆಯಿಂದ ನಿವೃತ್ತನಾದ ನಂತರ 13 ವರ್ಷದ ಹಿಂದೆ ಸಬ್‌ಇನ್ಸ್‌ಪೆಕ್ಟರ್ ಆಗಿ ಪೊಲೀಸ್ ವೃತ್ತಿ ಜೀವನ ಆರಂಭಿಸಿದೆ. ನನ್ನ ಮಗಳು ಮೊದಲ ಪ್ರಯತ್ನದಲ್ಲೇ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಸಬ್‌ಇನ್ಸ್‌ಪೆಕ್ಟರ್ ಆಗಿ ನಾನು ಕೆಲಸ ಮಾಡುತ್ತಿದ್ದ ಠಾಣೆಗೇ ಮೊದಲ ಪೋಸ್ಟಿಂಗ್ ಪಡೆದು ನನ್ನಿಂದಲೇ ಅಧಿಕಾರ ಸ್ವೀಕರಿಸಿದ್ದಾರೆ. ಇದು ನನ್ನ ಜೀವಮಾನದ ಅತ್ಯಂತ ಸಂತಸದ ಕ್ಷಣ.
– ಬಿ.ಎಸ್.ವೆಂಕಟೇಶ್.

ನನ್ನ ತಂದೆ ಸೈನ್ಯದಲ್ಲಿದ್ದ ಕಾರಣ ಅವರನ್ನು ತುಂಬಾ ಮಿಸ್ ಮಾಡಿಕೊಂಡಿದ್ದೇನೆ. ನನ್ನ ತಾಯಿ ನನ್ನನ್ನು ಸರ್ಕಾರಿ ಶಾಲೆ ಹಾಗೂ ಕಾಲೇಜಿನಲ್ಲೇ ಓದಿಸಿದರು. ಶಾಲೆಯ ಶಿಕ್ಷಕರು ಉತ್ತಮ ಮಾರ್ಗದರ್ಶನ ನೀಡಿದರು. ಸಬ್‌ಇನ್ಸ್‌ಪೆಕ್ಟರ್ ಆಗಿ ತಂದೆ ಕಾರ್ಯವೈಖರಿ ಹಾಗೂ ಶಿಸ್ತನ್ನು ನೋಡಿ ನನಗೂ ಪೊಲೀಸ್ ಇಲಾಖೆ ಸೇರುವ ಪ್ರೇರೇಪಣೆಯಾಯಿತು. ತಂದೆಯ ಜಾಗಕ್ಕೆ ಬಂದು ಕೂರುತ್ತೇನೆ. ಅವರಿಂದಲೇ ಅಧಿಕಾರ ಸ್ವೀಕರಿಸುತ್ತೇನೆ ಅಂದುಕೊಂಡಿರಲಿಲ್ಲ. ಈ ಕ್ಷಣವನ್ನು ನಾನು ಎಂದಿಗೂ ಮರೆಯುವುದಿಲ್ಲ. ಪೊಲೀಸ್ ಇಲಾಖೆಯಲ್ಲಿ ಹಿರಿಯ ಅಧಿಕಾರಿಗಳೂ ಕೂಡ ನನಗೆ ಪ್ರೋತ್ಸಾಹ ನೀಡಿದ್ದಾರೆ. ತಂದೆ–ತಾಯಂದಿರು ತಮ್ಮ ಹೆಣ್ಣು ಮಕ್ಕಳು ಪೊಲೀಸ್ ಇಲಾಖೆಗೆ ಬರುವುದನ್ನು ಬಯಸುವುದಿಲ್ಲ. ಆದರೆ ನನ್ನ ತಂದೆ–ತಾಯಿ ನನಗೆ ಅತ್ಯಂತ ಪ್ರೋತ್ಸಾಹ ನೀಡಿದ್ದಾರೆ. ನಾನು ವಿದ್ಯಾವಂತಳಾಗಲು ಅಪಾರವಾಗಿ ಶ್ರಮಿಸಿದ್ದಾರೆ.
– ಬಿ.ವಿ.ವರ್ಷಾ, ಸಬ್‌ಇನ್ಸ್‌ಪೆಕ್ಟರ್.

ಇಂದು ನಾಡಪ್ರಭು ಕೆಂಪೇಗೌಡರ ಬೆಳ್ಳಿರಥ ಯಾತ್ರೆಗೆ ಚಾಲನೆ



ಮೈಸೂರು, ಜೂ.21(ಪಿಎಂ)– ನಾಡಪ್ರಭು ಕೆಂಪೇಗೌಡ ಅವರ ಜಯಂತಿಯನ್ನು ಜೂ.27ರಂದು ಆಚರಿಸುತ್ತಿರುವ ಪ್ರಯುಕ್ತ ಜೂ.22ರಿಂದ ಕೆಂಪೇಗೌಡರ ಬೆಳ್ಳಿರಥ ಯಾತ್ರೆ ಹಮ್ಮಿಕೊಳ್ಳಲಾಗಿದೆ.

ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಅಂದು ಬೆಳಗ್ಗೆ 9.30ಕ್ಕೆ ಕೆಂಪೇಗೌಡರ ಬೆಳ್ಳಿರಥ ಯಾತ್ರೆಗೆ ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಚಾಲನೆ ನೀಡಲಿದ್ದಾರೆ.

ಜಿಲ್ಲಾಡಳಿತದ ವತಿಯಿಂದ ಜೂ.27ರಂದು ಮೈಸೂರಿನಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಆಯೋಜಿಸಿದ್ದು, ಇದಕ್ಕೆ ಪೂರಕವಾಗಿ ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ (ಚಾಮರಾಜನಗರ ಜಿಲ್ಲೆ ಒಳಗೊಂಡಂತೆ) ವತಿಯಿಂದ ಈ ರಥ ಯಾತ್ರೆ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಮೈಸೂರು ಮಹಾನಗರಪಾಲಿಕೆ ಸದಸ್ಯರು ಸೇರಿದಂತೆ ಇನ್ನಿತರ ಜನಪ್ರತಿನಿಧಿಗಳು ಹಾಗೂ ಮೈಸೂರು ನಗರದ ಎಲ್ಲಾ ಒಕ್ಕಲಿಗರ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.

ಬೆಳ್ಳಿರಥವು ಜೂ.26ರವರೆಗೆ ಜಿಲ್ಲೆಯಾದ್ಯಂತ ಸಂಚರಿಸಲಿದ್ದು, ಕೆಂಪೇಗೌಡರ ಕೊಡುಗೆಗಳನ್ನು ಪ್ರಚುರಪಡಿಸುವ ಜೊತೆಗೆ ಜಯಂತಿಯಲ್ಲಿ ಭಾಗವಹಿಸಲು ಆಹ್ವಾನ ನೀಡಲಿದೆ. ಚಾಲನೆ ಬಳಿಕ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರಿನಿಂದ ನಿರ್ಗಮಿಸುವ ಕೆಂಪೇಗೌಡರ ಕಂಚಿನ ಪ್ರತಿಮೆ ಒಳಗೊಂಡ ಬೆಳ್ಳಿರಥವು, ಬೆಳಗ್ಗೆ 11ಕ್ಕೆ ಹಿನಕಲ್ ಗ್ರಾಮಕ್ಕೆ ತಲುಪಲಿದೆ. ಬಳಿಕ ಬೆಳಗ್ಗೆ 11.30ಕ್ಕೆ ಹೂಟಗಳ್ಳಿ ಮತ್ತು ಕೂರ್ಗಳ್ಳಿ, ಮಧ್ಯಾಹ್ನ 12ಕ್ಕೆ ಬೆಳವಾಡಿ, 1ಕ್ಕೆ ಸಾಹುಕಾರ್ ಹುಂಡಿ, ಮಧ್ಯಾಹ್ನ 3ಕ್ಕೆ ಮರಟಿಕ್ಯಾತನಹಳ್ಳಿ, 4.30ಕ್ಕೆ ದಾಸನಕೊಪ್ಪಲು, ಸಂಜೆ 5.30ಕ್ಕೆ ಬೋಗಾದಿ ಮತ್ತು ಗೋಪಾಲಪುರದಲ್ಲಿ ಸಂಚರಿಸಲಿದೆ. ಜೂ.23ರಿಂದ ಇನ್ನಿತರ ಪ್ರದೇಶದಲ್ಲಿ ಸಂಚಾರ ಮುಂದುವರೆಸಲಿದೆ.

ಬೆಳ್ಳಿರಥವು ತಮ್ಮ ಗ್ರಾಮ ಪ್ರವೇಶಿಸಿದಾಗ, ಕುಲಬಾಂಧವರು ಸೇರಿದಂತೆ ಗ್ರಾಮಸ್ಥರು, ಸಾರ್ವಜನಿಕರು ಸ್ವಾಗತಿಸಿ, ಬೀಳ್ಕೊಡುವ ಜೊತೆಗೆ ಜೂ.27ರಂದು ಮೈಸೂರಿನಲ್ಲಿ ಜಿಲ್ಲಾಡಳಿತದಿಂದ ನಡೆಯುವ ನಾಡಪ್ರಭು ಕೆಂಪೇಗೌಡರ ಜಯಂತಿಯಲ್ಲಿ ಪಾಲ್ಗೊಳ್ಳಬೇಕೆಂದು ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ ಪ್ರಕಟಣೆಯಲ್ಲಿ ಕೋರಿದ್ದಾರೆ.

ವಿದ್ಯುತ್ ದರ ಏರಿಕೆ ವಿರೋಧಿಸಿ ಇಂದು ಕರ್ನಾಟಕ ಬಂದ್‌ಗೆ ಕರೆ

- ಮೈಸೂರಲ್ಲಿ ಎಂಎಸ್‌ಎಂಇ, ಹೋಟೆಲ್ ಮಾಲೀಕರ ಬೆಂಬಲವಿಲ್ಲ
- ತೀವ್ರವಾಗಿ ಕುತೂಹಲ ಮೂಡಿಸಿರುವ ಬಂದ್ ಸ್ಥಿತಿ–ಗತಿ



ಮೈಸೂರು: ವಿದ್ಯುತ್ ದರ ಹೆಚ್ಚಳ ವಿರೋಧಿಸಿ ಹುಬ್ಬಳ್ಳಿಯ ಕರ್ನಾಟಕ ಚೆಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಗುರುವಾರ ಕರೆ ನೀಡಿರುವ ಕರ್ನಾಟಕ ಬಂದ್‌ಗೆ ಮೈಸೂರಿನ ಕೆಲವು ಕೈಗಾರಿಕೋದ್ಯಮಿಗಳು ಹಾಗೂ ವ್ಯಾಪಾರಸ್ಥರು ಬೆಂಬಲ ಸೂಚಿಸಿದ್ದಾರೆ. ಕೈಗಾರಿಕೆಗಳು ಹಾಗೂ ವ್ಯಾಪಾರ ವಹಿವಾಟು ಬಂದ್ ಆಗಿ ಬಂದ್ ಯಶಸ್ವಿಯಾಗಲಿದೆ ಎಂದು ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳ ಒಕ್ಕೂಟ ವಿಶ್ವಾಸ ವ್ಯಕ್ತಪಡಿಸಿದೆ.

ಪೆಟ್ರೋಲ್, ಡೀಸೆಲ್ ಸೇರಿದಂತೆ ಕಚ್ಚಾ ವಸ್ತುಗಳ ಬೆಲೆ ಏರಿಕೆಯಾಗಿದೆ. ಇಂತಹ ಸಂಕಷ್ಟ ಸಮಯದಲ್ಲಿ ವಿದ್ಯುತ್ ದರವೂ ಹೆಚ್ಚಳವಾಗಿ ಕೈಗಾರಿಕೆಗಳಿಗೆ ದೊಡ್ಡ ಶಾಕ್ ನೀಡಿದೆ. ಈ ಹಿನ್ನೆಲೆಯಲ್ಲಿ ವಿದ್ಯುತ್ ದರ ಆದೇಶ ವಾಪಸ್ ಪಡೆಯುವಂತೆ ಕೈಗಾರಿಕೋದ್ಯಮಿಗಳು ಸರ್ಕಾರಕ್ಕೆ ಮನವಿ ಮಾಡಿದ್ದರು. ಆದರೆ ವಿದ್ಯುತ್ ದರ ಹೆಚ್ಚಳ ಆದೇಶ ವಾಪಸ್ ಪಡೆಯಲು ಸಾಧ್ಯವಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿತ್ತು. ಈ ಹಿನ್ನೆಲೆ ವಿದ್ಯುತ್ ದರ ಹೆಚ್ಚಳ ವಿರೋಧಿಸಿ ಹುಬ್ಬಳ್ಳಿಯ ಕರ್ನಾಟಕ ಚೆಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಗುರುವಾರ ಕರ್ನಾಟಕ ಬಂದ್‌ಗೆ ಕರೆ ನೀಡಿದೆ.

ಮೈಸೂರಿನಲ್ಲಿ ಗುರುವಾರ ಪೂರ್ಣ ಪ್ರಮಾಣದಲ್ಲಿ ಕೈಗಾರಿಕೆಗಳು ಬಂದ್ ಆಗಲಿದೆ. ಅಲ್ಲದೆ ದೇವರಾಜ ಅರಸ್ ರಸ್ತೆ, ಅಶೋಕ ರಸ್ತೆ ಸೇರಿದಂತೆ ಇತರೆಡೆಯ ವ್ಯಾಪಾರಸ್ಥರು ಗುರುವಾರ ಮಧ್ಯಾಹ್ನದ ತನಕ ಬಂದ್ ಮಾಡುವುದಾಗಿ ಭರವಸೆ ನೀಡಿದ್ದಾರೆ. ಈ ಮೂಲಕ ನಮ್ಮ ಹೋರಾಟಕ್ಕೆ ಬೆಂಬಲ ಸೂಚಿಸಿದ್ದಾರೆ ಎಂದು ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಲಿಂಗರಾಜು ತಿಳಿಸಿದ್ದಾರೆ. ಆದರೆ ಬಂದ್‌ಗೆ ಮೈಸೂರಿನ ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ಯಮಗಳ ಪರಿಷತ್ (ಎಂಎಸ್‌ಎಂಇ) ಹಾಗೂ ಹೋಟೆಲ್ ಮಾಲೀಕರು ಬೆಂಬಲ ಸೂಚಿಸಿಲ್ಲ.

ಬಂದ್ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸರು ಮುನ್ನೆಚ್ಚರಿಕಾ ಕ್ರಮ ಕೈಗೊಂಡಿದ್ದಾರೆ. ಮೈಸೂರಿನ ಆಯಾ ಪೊಲೀಸ್ ಠಾಣೆಯಲ್ಲಿ ಅಲರ್ಟ್ ಆಗಿರುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಮೈಸೂರಿನ ನಗರ ಹಾಗೂ ಗ್ರಾಮಾಂತರ ಬಸ್ ನಿಲ್ದಾಣ, ಕೆ.ಆರ್.ಸರ್ಕಲ್, ದೇವರಾಜ ಅರಸ್ ರಸ್ತೆ ಅಶೋಕ ರಸ್ತೆ ಹಾಗೂ ಕೈಗಾರಿಕಾ ಪ್ರದೇಶದಲ್ಲಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿದೆ. ಇದಕ್ಕೆ ಕೆಎಸ್‌ಆರ್‌ಪಿ, ಸಿಎಆರ್ ಬಳಸಿಕೊಳ್ಳಲಾಗಿದೆ ಎಂದು ಡಿಸಿಪಿ ಮುತ್ತುರಾಜ್ ತಿಳಿಸಿದ್ದಾರೆ. ಕೆಲವು ಸಂಘಟನೆಗಳು ಬಂದ್‌ಗೆ ಬೆಂಬಲ ನೀಡದೇ ಇರುವುದರಿಂದ ಕರ್ನಾಟಕ ಬಂದ್ ಎಷ್ಟರ ಮಟ್ಟಿಗೆ ಯಶಸ್ವಿ ಆಗುತ್ತದೆ ಎಂದು ಕಾದು ನೋಡಬೇಕಿದೆ.

ಲಕ್ಷ ರೂ. ಲಂಚ ಸ್ವೀಕಾರ: ರೆವಿನ್ಯೂ ಇನ್ಸ್‌ಪೆಕ್ಟರ್ ಲೋಕಾಯುಕ್ತ ಬಲೆಗೆ

ಮೈಸೂರು,ಜೂ.21(ಆರ್‌ಕೆ)– ವಾಣಿಜ್ಯ ಕಟ್ಟಡವನ್ನು ಕೈಗಾರಿಕಾ ಉದ್ದೇಶಿತ ಎಂದು ಪರಿಗಣಿಸಿ ಕಂದಾಯ ನಿಗದಿಪಡಿಸಲು ಅದರ ಮಾಲೀಕರಿಂದ ಲಕ್ಷ ರೂ. ಲಂಚ ಪಡೆಯುತ್ತಿದ್ದ ಹೂಟಗಳ್ಳಿ ನಗರಸಭೆ ರೆವಿನ್ಯೂ ಇನ್ಸ್‌ಪೆಕ್ಟರ್ ಮಂಜುನಾಥ ಎಂಬುವರು ಇಂದು ಮಧ್ಯಾಹ್ನ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಚಾಮರಾಜನಗರ ತಾಲೂಕು, ಹರದನಹಳ್ಳಿ ಗ್ರಾಮದ ಕುಮಾರ ಎಂಬುವರಿಗೆ ಸೇರಿದ ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿರುವ ಕಮರ್ಷಿಯಲ್ ಬಿಲ್ಡಿಂಗ್ ಅನ್ನು ಕೈಗಾರಿಕಾ ಉದ್ದೇಶಕ್ಕೆಂದು ಪರಿಗಣಿಸಿ ಕಂದಾಯ ನಿಗದಿ ಮಾಡಿ ನಮೂನೆ–3ರಲ್ಲಿ ಇ–ಸ್ವತ್ತು ರೀತ್ಯ ಖಾತಾ ಮಾಡಿಕೊಡುವಂತೆ ಅರ್ಜಿ ಸಲ್ಲಿಸಿದ್ದರು.

ಆ ಉದ್ದೇಶಕ್ಕೆ ಸ್ಥಳ ಪರಿಶೀಲಿಸಿ ಮಹಜರು ವರದಿಯಂತೆ ಇ–ಸ್ವತ್ತು ಖಾತಾ ಮಾಡಿಕೊಡಲು ರೆವಿನ್ಯೂ ಇನ್ಸ್‌ಪೆಕ್ಟರ್ ಮಂಜುನಾಥ ಅರ್ಜಿದಾರರಿಗೆ 3 ಲಕ್ಷ ರೂ. ಲಂಚ ಕೊಡುವಂತೆ ಬೇಡಿಕೆ ಇಟ್ಟಿದ್ದರು. ಇಂದು ಮಧ್ಯಾಹ್ನ 2.30 ಗಂಟೆ ವೇಳೆಗೆ ಹೂಟಗಳ್ಳಿ ನಗರಸಭೆ ಕಚೇರಿ ಸಮೀಪ ಕುಮಾರ ಅವರಿಂದ 1 ಲಕ್ಷ ರೂ. ಮುಂಗಡ ಲಂಚ ಸ್ವೀಕರಿಸುತ್ತಿದ್ದಾಗ ಲೋಕಾಯುಕ್ತ



ಪೊಲೀಸರು ಕಾರ್ಯಾಚರಣೆ ನಡೆಸಿ ಮಂಜುನಾಥನನ್ನು ಹಣದ ಸಮೇತ ಬಂಧಿಸಿದರು. ಮೈಸೂರಿನ ಲೋಕಾಯುಕ್ತ ಎಸ್ಪಿ ಕಚೇರಿಯಲ್ಲಿ ಬಂಧಿತ ಆರೋಪಿಯನ್ನು ವಿಚಾರಣೆಗೊಳಪಡಿಸಿದ ನಂತರ ರಾತ್ರಿ ನ್ಯಾಯಾಧೀಶರ ಮುಂದೆ ಅವರ ನಿವಾಸದಲ್ಲಿ ಹಾಜರುಪಡಿಸಲಾಗಿ ಮಂಜುನಾಥನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಲೋಕಾಯುಕ್ತ ಮೈಸೂರು ಎಸ್ಪಿ ಸುರೇಶ್‌ಬಾಬು ಅವರ ಮಾರ್ಗದರ್ಶನದಂತೆ, ಡಿವೈಎಸ್ಪಿ ಕೃಷ್ಣಯ್ಯ, ಇನ್ಸ್‌ಪೆಕ್ಟರ್‌ಗಳಾದ ರವಿಕುಮಾರ್, ಲೋಕೇಶ್, ಜಯರತ್ನ, ಸಿಬ್ಬಂದಿಗಳಾದ ಪ್ರಕಾಶ್, ಗೋಪಿ, ವೀರಭದ್ರ ಆಶಾ, ತ್ರಿವೇಣಿ, ವಾಹನ ಚಾಲಕರಾದ ಲೋಕೇಶ್ ಮತ್ತು ಶೇಖರ, ಲೋಕಾಯುಕ್ತ ಮಡಿಕೇರಿ ಕಚೇರಿ ಸಿಬ್ಬಂದಿಗಳಾದ ಮಂಜುನಾಥ, ಸಲಾಂ ಉದ್ದೀನ್, ಶಶಿಕುಮಾರ್, ಪ್ರವೀಣ್‌ಕುಮಾರ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಸಮಗ್ರ ದೇಹಕ್ಕೆ ಈಗ ಚಿಕಿತ್ಸೆ ನೀಡುವವರೇ ಇಲ್ಲ

- ವೈದ್ಯ ಸಾಹಿತಿ, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಯೋಗಣ್ಣ ಬೇಸರ
- 'ಡಾಕ್ಟರ್ ಡೈರೆಕ್ಟರಿ' ಬಿಡುಗಡೆ, ಪ್ರತಿ ಸಮಸ್ಯೆಗೊಬ್ಬರು ವೈದ್ಯರ ಹುಡುಕುವ ಪರಿಸ್ಥಿತಿ ವಿಷಾದ

ಮೈಸೂರು,ಜೂ.21(ಎಂಕೆ)– ದೇಹದ ಪ್ರತೀ ಅಂಗಾಂಗದ ಚಿಕಿತ್ಸೆಗೂ ಸ್ಪೆಷಲಿಸ್ಟ್‌ಗಳಿದ್ದು, ಸಮಗ್ರವಾಗಿ ದೇಹದ ಆರೋಗ್ಯ ಸ್ಥಿತಿ ಪರಿಶೀಲಿಸಿ ಚಿಕಿತ್ಸೆ ನೀಡುವವರು ಇಲ್ಲದಂತಾಗಿದ್ದಾರೆ. ಇದರಿಂದ ರೋಗಿಗಳು ಒಂದೊಂದು ಸಮಸ್ಯೆಗೂ ವೈದ್ಯರ ಹುಡುಕಾಟಕ್ಕೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸುಯೋಗ್ ಆಸ್ಪತ್ರೆ ಮುಖ್ಯಸ್ಥ, ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ ಬೇಸರ ವ್ಯಕ್ತಪಡಿಸಿದರು.

ಮೈಸೂರು ದಾಸಪ್ರಕಾಶ್ ಪ್ಯಾರಡೈಸ್ ಹೋಟೆಲ್‌ನಲ್ಲಿ ಬುಧವಾರ ಆಯೋಜಿಸಿದ್ದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ 'ಡಾಕ್ಟರ್ ಡೈರೆಕ್ಟರಿ' ಬಿಡುಗಡೆಗೊಳಿಸಿ ಮಾತನಾಡಿದ ಅವರು, ವೈದ್ಯಕೀಯ ಕ್ಷೇತ್ರದಲ್ಲಿ ಎಲ್ಲವೂ ತುಂಡು–ತುಂಡಾಗಿ ಹೋಗಿದೆ. ಮೊದಲು ಒಬ್ಬರೇ ಸರ್ಜನ್ ಕೆಮ್ಮು, ನೆಗಡಿ, ಜ್ವರ, ಸಕ್ಕರೆ ಕಾಯಿಲೆ ಇತ್ಯಾದಿ ಕಾಯಿಲೆಗಳಿಗೆ ಚಿಕಿತ್ಸೆ ನೀಡುತ್ತಿದ್ದರು. ಆದರೀಗ ಕೆಮ್ಮಿಗೆ ಒಬ್ಬರ ಬಳಿ, ಸಕ್ಕರೆ ಕಾಯಿಲೆಗೆ ಮತ್ತೊಬ್ಬರ ಬಳಿ ಹೋಗಬೇಕಾದ ಪರಿಸ್ಥಿತಿ ಬಂದಿದೆ. ಇದರಿಂದ ರೋಗಿಗಳಿಗೆ ಸಕಾಲಕ್ಕೆ ಚಿಕಿತ್ಸೆ ದೊರೆಯದಂತಾಗಿದೆ. ವೈದ್ಯಕೀಯ ಕ್ಷೇತ್ರ ಬಹಳ ವಿಶಾಲವಾಗಿ ಬೆಳೆದಿದ್ದು, ಸ್ಪೆಷಲಿಸ್ಟ್‌ಗಳಿಂದ ಬಹಳ ಅನಾಹುತಗಳು ಕಾದಿವೆ ಎಂದು ಎಚ್ಚರಿಸಿದರು.



ಇತ್ತೀಚೆಗಂತೂ ಸಾಮಾಜಿಕ ಜಾಲತಾಣಗಳಲ್ಲಿ ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸುಳ್ಳು ಸುದ್ದಿಗಳು ಹರಿದಾಡುವುದು ವಿಪರೀತವಾಗಿದೆ. ಗೂಗಲ್‌ನಲ್ಲಿ ಪುಟಗಟ್ಟಲೇ ತಪ್ಪು ಮಾಹಿತಿ ಇರುತ್ತದೆ. ಸಕ್ಕರೆ ಕಾಯಿಲೆಯನ್ನು ಸಂಪೂರ್ಣವಾಗಿ ವಾಸಿ ಮಾಡುತ್ತೇವೆ ಎಂದು ನಂಬಿಸುತ್ತಿದ್ದಾರೆ. ಆದರೆ ಅದು ಸಾಧ್ಯವೇ ಎಂದು ಪ್ರಶ್ನಿಸಿದ ಅವರು, ಇಂತಹ ಸುಳ್ಳು ಸುದ್ದಿ ಹಾಗೂ ಸುಳ್ಳು ಮಾಹಿತಿ ನೀಡುವವರಿಂದ ಮೋಸ ಹೋಗಬೇಡಿ ಎಂದರು.

ಮುದ್ರಣ ಮಾಧ್ಯಮವೇ ನಂಬಿಕೆಗೆ ಅರ್ಹ: ಸಾಮಾಜಿಕ ಜಾಲತಾಣಗಳು ಬದುಕಿಗೆ ಪೂರಕವಾಗಿರುವ ಬದಲು ಮಾರಕವಾಗಿವೆ. ದೃಶ್ಯ ಮಾಧ್ಯಮಗಳಂತೂ ಜನರ ನಿದ್ದೆಯನ್ನೇ ಹಾಳು ಮಾಡಿವೆ. ಕುಟುಂಬದಲ್ಲಿ ಬೆಂಕಿ ಹಚ್ಚುವ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿವೆ. ರಾತ್ರಿ ಮಲಗುವ ವೇಳೆ ಕ್ರೈಂ ತೋರಿಸಿ, ಕೆಟ್ಟ ಕನಸು ಕಾಣುವಂತೆ ಮಾಡಿ ನಿದ್ದೆಯಲ್ಲೂ ನೆಮ್ಮದಿ ಇಲ್ಲದಂತೆ ಮಾಡಿವೆ. ಇಂದಿಗೂ ಆಧಾರ ಇಟ್ಟುಕೊಂಡು ಬರೆಯುವ ಅಥವಾ ಸುದ್ದಿ ಪ್ರಕಟಿಸುವ ಮುದ್ರಣ ಮಾಧ್ಯಮಗಳು ನಂಬಿಕೆಗೆ ಅರ್ಹವಾಗಿವೆ. ಅವುಗಳಲ್ಲಿ ಪುಸ್ತಕಗಳು ಕೂಡ ಸೇರಿವೆ ಎಂದರು.

ನೆಮ್ಮದಿಯಿಲ್ಲ: ಸಂತೋಷದಿಂದ ಇರಬೇಕಾದ ನಾವುಗಳು ನೆಮ್ಮದಿ ಕಳೆದುಕೊಂಡಿದ್ದೇವೆ. ಸಂತೋಷ ಪಡೆಯುವುದಕ್ಕಾಗಿ ಮಾದಕ ವಸ್ತುಗಳಿಗೆ ದಾಸರಾಗುತ್ತಿದ್ದೇವೆ. ಧೂಮಪಾನ ಅತ್ಯಂತ ಅಪಾಯಕಾರಿಯಾಗಿದೆ. ಈಗಂತೂ ತಂದೆ–ತಾಯಂದಿರೇ ತಮ್ಮ ಮಕ್ಕಳನ್ನು ಆಸ್ಪತ್ರೆಗೆ ಕರೆದುಕೊಂಡು ಬರುವ ಸ್ಥಿತಿ ನಿರ್ಮಾಣವಾಗಿದೆ. ಹೆಣ್ಣು ಮಕ್ಕಳೂ ಕೂಡ ಮದ್ಯಪಾನ–ಧೂಮಪಾನ ಮಾಡುತ್ತಿದ್ದು, ಹೆಣ್ಣು ಮಕ್ಕಳಿಗಾಗಿಯೇ ಪ್ರತ್ಯೇಕ ಪಬ್‌ಗಳು ತೆರೆದುಕೊಳ್ಳುತ್ತಿವೆ. ಇದೆಲ್ಲವೂ ಆರೋಗ್ಯಕರ ಸಮಾಜಕ್ಕೆ ಒಳ್ಳೆಯದಲ್ಲ ಎಂದು ವಿಷಾದಿಸಿದರು.

ಡೈರೆಕ್ಟರಿ ಉಪಯುಕ್ತ: ಮೈಸೂರು, ಮಂಡ್ಯ, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿರುವ ಆಸ್ಪತ್ರೆಗಳು ಹಾಗೂ ನುರಿತ ವೈದ್ಯರ ಕುರಿತು ಮಾಹಿತಿಯನ್ನು 'ಡಾಕ್ಟರ್ ಡೈರೆಕ್ಟರಿ'ಯಲ್ಲಿ ಪಡೆಯಬಹುದಾಗಿದೆ. ಇದರಿಂದಾಗಿ ರೋಗಿಗಳು ತಮ್ಮ ಸಮಸ್ಯೆಗಳಿಗೆ ಅಲೆದಾಡದೆ ನೇರವಾಗಿ ವೈದ್ಯರನ್ನು ಭೇಟಿಯಾಗಲು ಸಹಕಾರಿಯಾಗುತ್ತದೆ. 'ಡಾಕ್ಟರ್ ಡೈರೆಕ್ಟರಿ' ಹೊರತಂದಿರುವ ಆರ್.ಪಿ.ಹರೀಶ್ ಅವರ ಕಾರ್ಯ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಮಣಿಪಾಲ್ ಆಸ್ಪತ್ರೆ ತುರ್ತು ಚಿಕಿತ್ಸಾ ವಿಭಾಗದ ಡಾ.ಪ್ರದೀಪ್ ರಾಜಣ್ಣ ಉಪಸ್ಥಿತರಿದ್ದರು.

ಮಾಜಿ ಶಾಸಕ ಭೀಮಾನಾಯ್ಕ್ ಕೆಎಂಎಫ್ ಅಧ್ಯಕ್ಷ

ಬೆಂಗಳೂರು, ಜೂ.21(ಕೆಎಂಶಿ)– ಕರ್ನಾಟಕ ಹಾಲು ಮಾರಾಟ ಮಹಾಮಂಡಳ ಅಧ್ಯಕ್ಷ ಸ್ಥಾನಕ್ಕೆ ಹಗರಿಬೊಮ್ಮನಹಳ್ಳಿಯ ಕಾಂಗ್ರೆಸ್ ಮಾಜಿ ಶಾಸಕ ಭೀಮಾನಾಯ್ಕ್ ಆಯ್ಕೆಯಾಗಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ



ಬಳಿಕ ಬಾಲಚಂದ್ರ ಜಾರಕಿಹೊಳಿ ಅವರ ಕೆಎಂಎಫ್ ಅಧ್ಯಕ್ಷ ಸ್ಥಾನ ತೆರವಾಗಿತ್ತು. ಹೀಗಾಗಿ ಚುನಾವಣೆ ಮೂಲಕ ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡಲು ತೀರ್ಮಾನಿಸಲಾಗಿತ್ತು. ಆದರೆ, ಕೆಎಂಎಫ್ ಅಧ್ಯಕ್ಷ ಸ್ಥಾನಕ್ಕಾಗಿ ಬೇರೆ ಯಾರೂ ನಾಮಪತ್ರ ಸಲ್ಲಿಸದಿರುವುದರಿಂದ ಭೀಮಾನಾಯ್ಕ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹೊಲಿಸ್ಟಿಕ್ ಕುಕ್ಕಿಂಗ್ ಪ್ರೋಗ್ರಾಮ್

ಮೈಸೂರು,ಜೂ.21–ಆರ್ಟ್ ಆಫ್ ಲಿವಿಂಗ್ ವತಿಯಿಂದ ಜೂ 23ರಿಂದ 25ರವರೆಗೆ ಬೆಳಗ್ಗೆ 10.30ರಿಂದ ಮಧ್ಯಾಹ್ನ 1ರವರೆಗೆ ಲಲಿತಾದ್ರಿಪುರ ರಸ್ತೆಯಲ್ಲಿರುವ ಮೈಸೂರು ಆಶ್ರಮದಲ್ಲಿ ಹೊಲಿಸ್ಟಿಕ್ ಕುಕ್ಕಿಂಗ್ ಪ್ರೋಗ್ರಾಮ್ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9845963387, 9845723350 ಸಂಪರ್ಕಿಸಬಹುದು.

ರಾತ್ರಿ 11.30ರ ತನಕ ಹೋಟೆಲ್‌ಗಳ ವಹಿವಾಟಿಗೆ ಅನುಮತಿ ಕೊಡಿ

ಪೊಲೀಸ್ ಆಯುಕ್ತರಿಗೆ ಹೋಟೆಲ್ ಮಾಲೀಕರ ಸಂಘದ ಮನವಿ

ಮೈಸೂರು,ಜೂ.21(ಬಿಎಲ್‌ಯು)–ದೇಶ–ವಿದೇಶಗಳ ಪ್ರವಾಸಿಗರು ಬರುವ ಮೈಸೂರಿನಲ್ಲಿ ರಾತ್ರಿ 10.30 ಗಂಟೆಗೆ ಹೋಟೆಲ್‌ಗಳ ಬಾಗಿಲು ಮುಚ್ಚಿಸುತ್ತಿರುವ ಪೊಲೀಸ್ ಇಲಾಖೆಯ ಕ್ರಮಕ್ಕೆ ಮೈಸೂರಿನ ಹೋಟೆಲ್ ಮಾಲೀಕರ ಸಂಘ ಆಕ್ಷೇಪಿಸಿದೆ.



ಈ ಬಗ್ಗೆ ಮೈಸೂರು ನಗರ ಪೊಲೀಸ್ ಆಯುಕ್ತರಿಗೆ ಪತ್ರ ಬರೆದು ಮನವಿ ಮಾಡಿರುವ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಅವರು, ಮೊದಲಿನಂತೆ ರಾತ್ರಿ 11.30 ಗಂಟೆ ತನಕ ಹೋಟೆಲ್‌ಗಳು ಬಾಗಿಲು ತೆರೆಯಲು ಅನುವು ಮಾಡಿಕೊಡುವಂತೆ ಮನವಿ ಮಾಡಿದ್ದಾರೆ.


ಮೈಸೂರಿಗೆ ಪ್ರತಿದಿನ ದೇಶ ವಿದೇಶದ ಸಾವಿರಾರು ಪ್ರವಾಸಿಗರು ಆಗಮಿಸುತ್ತಾರೆ. ಕೆಆರ್‌ಎಸ್ ಸೇರಿದಂತೆ ಸುತ್ತಮುತ್ತಲ ಪ್ರವಾಸಿ ತಾಣ ವೀಕ್ಷಣೆ ಮಾಡಿ ಮೈಸೂರು ನಗರಕ್ಕೆ ಬರುವ ಪ್ರವಾಸಿಗರಿಗೆ ರಾತ್ರಿ 10.30 ಗಂಟೆ ನಂತರ ಊಟ–ತಿಂಡಿ ಸಿಗುತ್ತಿಲ್ಲ. ಕಾರಣ ರಾತ್ರಿ 10.30 ಗಂಟೆಗೆ ಪೊಲೀಸರು ಹೋಟೆಲ್‌ಗಳ ಬಾಗಿಲು ಮುಚ್ಚಿಸುತ್ತಿದ್ದಾರೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮೈಸೂರು ನಗರದ ಬಾರ್ ಅಂಡ್ ರೆಸ್ಟೋರೆಂಟ್‌ಗಳು ರಾತ್ರಿ 11.30 ತನಕ ಬಾಗಿಲು ತೆರೆದಿರುತ್ತವೆ. ಪೊಲೀಸರು ಅವರಿಗೆ ಯಾವುದೇ ರೀತಿಯ ತೊಂದರೆ ಕೊಡುವುದಿಲ್ಲ. ಆದರೆ ಹೋಟೆಲ್ (ರೆಸ್ಟೋರೆಂಟ್)ಗಳಲ್ಲಿ ಗಲಾಟೆ ಆಗುತ್ತದೆ ಎಂಬ ಕಾರಣಕ್ಕೆ ರಾತ್ರಿ 10.30 ಗಂಟೆಗೆ ಪೊಲೀಸರು ಬಾಗಿಲು ಮುಚ್ಚಿಸುತ್ತಾರೆ. ಹಾಗಾದರೆ ಬಾರ್ ಅಂಡ್ ರೆಸ್ಟೋರೆಂಟ್‌ಗಳಲ್ಲಿ ಆಗದ ಗಲಾಟೆ ಜನ ಸಾಮಾನ್ಯರು ಸಸ್ಯಾಹಾರಿ ಊಟ–ತಿಂಡಿ ಮಾಡುವ ಹೋಟೆಲ್‌ಗಳಲ್ಲಿ ಆಗುತ್ತದೆಯೇ ಎಂದು ನಾರಾಯಣಗೌಡ ಪ್ರಶ್ನಿಸಿದ್ದಾರೆ.

ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ರಾತ್ರಿ 1 ಗಂಟೆ ತನಕ ರೆಸ್ಟೋರೆಂಟ್‌ಗಳು ಬಾಗಿಲು ತೆರೆಯಲು ಅನುಮತಿ ನೀಡಲಾಗಿದೆ. ಮೈಸೂರಿನಲ್ಲಿ ರಾತ್ರಿ 1 ಗಂಟೆ ಬೇಡ, 11.30 ಗಂಟೆ ತನಕ ಬಾಗಿಲು ತೆರೆಯಲು ಅವಕಾಶ ನೀಡುವಂತೆ ನಾರಾಯಣಗೌಡ ಪೊಲೀಸ್ ಆಯುಕ್ತರಲ್ಲಿ ಮನವಿ ಮಾಡಿದ್ದಾರೆ.

ನನಗೆ ಈಗ 91 ವರ್ಷ, ಯೋಗ ನನ್ನನ್ನು ಕಾಪಾಡಿದೆ

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ



ಬೆಂಗಳೂರು, ಜೂ.21– ಮಾಜಿ ಪ್ರಧಾನಮಂತ್ರಿ, ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡ ಅವರಿಗೆ ಈಗ 91ರ ಇಳಿವಯಸ್ಸು. ಶಾರೀರಿಕವಾಗಿ ಇತ್ತೀಚೆಗೆ ಕೊಂಚ ಕುಗ್ಗಿದಂತೆ ಕಂಡುಬಂದರೂ ಮಾನಸಿಕವಾಗಿ ಸದೃಢರಾಗಿದ್ದಾರೆ.

ಇಂದು 9ನೇ ಅಂತಾರಾಷ್ಟ್ರೀಯ ಯೋಗ ದಿನ ಆಚರಣೆ ಸಂದರ್ಭದಲ್ಲಿ ನಾಡಿನ ಜನತೆಗೆ ಅವರು ವಿಶೇಷ ಸಂದೇಶ ನೀಡಿದ್ದಾರೆ. ಅಂತಾರಾಷ್ಟ್ರೀಯ ಯೋಗ ದಿನದ ಶುಭಾಶಯಗಳು. ನಾನು 91ನೇ ವಯಸ್ಸಿನಲ್ಲಿದ್ದೇನೆ. ನಾನಿನ್ನೂ ಈ ಮಟ್ಟದಲ್ಲಿ ಉಳಿದುಕೊಳ್ಳಲು ನಿರಂತರ ಯೋಗ ಅಭ್ಯಾಸ ನನಗೆ ಸಹಾಯ ಮಾಡಿದೆ. ಎಲ್ಲರೂ ಯೋಗ ಮಾಡಿ, ಮಾನಸಿಕ ಮತ್ತು ದೈಹಿಕ ಫಿಟ್ನೆಸ್, ಕ್ಷೇಮ ಕಾಪಾಡಿಕೊಳ್ಳಿ ಎಂದು ಹೇಳಿದ್ದಾರೆ.

ಸಿಎಂ ಸಿದ್ದರಾಮಯ್ಯ ಪತ್ನಿ ಆಸ್ಪತ್ರೆಗೆ ದಾಖಲು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಶ್ರೀಮತಿ ಪಾರ್ವತಿ ಅವರು ತೀವ್ರ ಜ್ವರದಿಂದ ಬಳಲುತ್ತಿದ್ದು, ಮಂಗಳವಾರ ರಾತ್ರಿ ಅವರನ್ನು ಮಣಿಪಾಲ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಮುಖ್ಯಮಂತ್ರಿಗಳ ಕಚೇರಿಯ ಮೂಲಗಳು ತಿಳಿಸಿವೆ. ಪಾರ್ವತಿ ಅವರ ಆರೋಗ್ಯ ಸ್ಥಿತಿ ಸದ್ಯ ಸ್ಥಿರವಾಗಿದ್ದು, ಆಮ್ಲಜನಕದ ಸಹಾಯದೊಂದಿಗೆ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗಿದೆ ಎಂದು ವೈದ್ಯರು ಮಾಹಿತಿ ನೀಡಿದ್ದಾರೆ. ಸದ್ಯ ಪಾರ್ವತಿ ಅವರ ಜೊತೆ ಅವರ ಮಗ ಡಾ.ಯತೀಂದ್ರ ಆಸ್ಪತ್ರೆಯಲ್ಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನವದೆಹಲಿಗೆ ತೆರಳುವ ಮುನ್ನ ಪತ್ನಿಯ ಆರೋಗ್ಯ ವಿಚಾರಿಸಿಕೊಂಡು ನಂತರ ಪ್ರಯಾಣ ಬೆಳೆಸಿದರು.

ಜೂ.25, ರೈಲ್ವೆ ಪಿಂಚಣಿದಾರರ ಸಂಘದ ಮಹಾಸಭೆ

ಮೈಸೂರು, ಜೂ.21–ರೈಲ್ವೆ ಪಿಂಚಣಿದಾರರ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕ ಮಹಾಸಭೆಯನ್ನು ಜೂ.25ರಂದು ಬೆಳಗ್ಗೆ 10.30ಕ್ಕೆ ಸಿಎಫ್‌ಟಿಆರ್‌ಐನ ಶ್ರೀ ರಾಮ ಕಲ್ಯಾಣ ಮಂಟಪದಲ್ಲಿ ನಡೆಸಲು ಕಾರ್ಯಕಾರಿ ಸಮಿತಿಯು ತೀರ್ಮಾನಿಸಿದ್ದು, ಸಭೆಗೆ ಎಲ್ಲಾ ಪದಾಧಿಕಾರಿಗಳು ಆಗಮಿಸುವಂತೆ ಪ್ರಧಾನ ಕಾರ್ಯದರ್ಶಿ ಎಂ.ಡಿ. ಸುನೀಲ್ ಕುಮಾರ್ ಜೈನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಆಷಾಢ ಶುಕ್ರವಾರ: ಬಂದಂತಮ್ಮ, ಕಾಳಮ್ಮ ದೇಗುಲಗಳಲ್ಲಿ ವಿಶೇಷ ಅಲಂಕಾರ

ಮೈಸೂರು, ಜೂ.21– ಶ್ರೀ ಆದಿಶಕ್ತಿ ಬಂದಂತಮ್ಮ ಮತ್ತು ಶ್ರೀ ಕಾಳಮ್ಮ ದೇವಸ್ಥಾನದಲ್ಲಿ ಆಷಾಢ ಮಾಸದ 4 ಶುಕ್ರವಾರಗಳು ವಿವಿಧ ಅಲಂಕಾರಗಳ ಪೂಜೆಗಳನ್ನು ಏರ್ಪಡಿಸಲಾಗಿದೆ ಎಂದು ದೇವಸ್ಥಾನ ಸೇವಾ ಸಮಿತಿ ಪತ್ರಿಕಾ ಕಾರ್ಯದರ್ಶಿ ಆರ್.ರಾಜಕುಮಾರ್ ತಿಳಿಸಿದ್ದಾರೆ. ಜೂ.23 ಹರಿದ್ರಾಲಂಕಾರ, ಜೂ.30 ವೀಳ್ಯದೆಲೆ ಅಲಂಕಾರ, ಜು.7 ತೋಮಾಲೆ ಅಲಂಕಾರ, ಜು.14 ನವನೀತ (ಬೆಣ್ಣೆ) ಅಲಂಕಾರ ಮಾಡಲಾಗುವುದು. ಭಕ್ತಾದಿಗಳು ಭಾಗವಹಿಸಬೇಕೆಂದು ಆಡಳಿತ ಮಂಡಳಿ ಮನವಿ ಮಾಡಿದೆ.

ನೂತನ ಜಿಲ್ಲಾಧಿಕಾರಿಗಳ ಕಟ್ಟಡದಲ್ಲಿ ಶುಚಿತ್ವವೇ ಇಲ್ಲ

ಮಳೆ ನೀರು ನಿಂತು ಕಚೇರಿಯಲ್ಲಿ ಕಮಟು ವಾಸನೆ, ಭದ್ರತೆಗಿರುವ ಪೊಲೀಸರಿಗೆ ವಿಶ್ರಾಂತಿ ಕೊಠಡಿ ಇಲ್ಲ

ಮೈಸೂರು, ಜೂ.21(ಎಸ್‌ಪಿಎನ್)–ರಾಜ್ಯ, ದೇಶದಲ್ಲಿ ಸ್ವಚ್ಛತಾ ಅಭಿಯಾನಕ್ಕೆ ಆದ್ಯತೆ ನೀಡಲಾಗುತ್ತಿದೆ. ಆದರೆ ಮೈಸೂರು ಜಿಲ್ಲಾಧಿಕಾರಿಗಳ ಆವರಣ ಪ್ರವೇಶಿಸಿದರೆ ಅಶುಚಿತ್ವ ಎದ್ದು ಕಾಣಿಸುತ್ತಿದೆ. ಈ ಬಗ್ಗೆ ಯಾವ ಜನಪ್ರತಿನಿಧಿಗಳು ಕ್ರಮ ಕೈಗೊಳ್ಳುತ್ತಿಲ್ಲ ಎಂದು ಮೈಸೂರು ಕನ್ನಡ ವೇದಿಕೆ ಆಕ್ರೋಶ ವ್ಯಕ್ತಪಡಿಸಿದೆ.

ಮೈಸೂರು ನೂತನ ಜಿಲ್ಲಾಧಿಕಾರಿಗಳ ಆವರಣ 15 ಎಕರೆ ಪ್ರದೇಶದಲ್ಲಿದೆ. ಈ ಆವರಣದಲ್ಲಿ ಮಳೆ ಬಂದರೆ, ಇಲ್ಲಿನ ಕಚೇರಿ ಕೋಣೆಗಳ ಬಳಿ ನೀರು ನಿಂತು ವಾಸನೆ ಬರುತ್ತಿದೆ. ಈ ನೀರು ಎಲ್ಲಿಂದ ಬಂದು ಶೇಖರಣೆ ಆಗುತ್ತಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದರೆ ಯಾರೊಬ್ಬರು ಸರಿಯಾದ ಮಾಹಿತಿ ನೀಡುತ್ತಿಲ್ಲ ಎಂದು ವೇದಿಕೆ ಅಧ್ಯಕ್ಷ ಬಾಲಕೃಷ್ಣ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನೂತನ ಜಿಲ್ಲಾಧಿಕಾರಿಗಳ ಆವರಣದಲ್ಲಿ ನೆಲ ಮಹಡಿ 4,720 ಚದರ ಮೀಟರ್, ಮೊದಲನೇ ಮಹಡಿ 4,500 ಚ.ಮೀ, ಎರಡನೇ ಮಹಡಿ 4,550 ಚ.ಮೀ ಇದೆ. ಈ ಎಲ್ಲಾ ಮಹಡಿಗಳಲ್ಲೂ ಸ್ವಚ್ಛತೆ ಎಂಬುದೇ ಇಲ್ಲ. ಪ್ರತಿ ಮಹಡಿಯಲ್ಲಿರುವ ಶೌಚಾಲಯಗಳು ದುರ್ವಾಸನೆ ಬೀರುತ್ತಿವೆ. ವಾಹನಗಳ ಪಾರ್ಕಿಂಗ್ ಸ್ಥಳದಲ್ಲಿ ಸಣ್ಣ ಮಳೆ ಬಂದರೂ ನೀರು ತುಂಬಿಕೊಳ್ಳುತ್ತಿದ್ದು, ಇಲ್ಲಿ ನಿಲ್ಲುವ ನೀರು ಹೊರಹಾಕಲು ಮೋಟಾರ್ ಸಹಾಯ ಪಡೆಯಬೇಕಾಗಿದೆ ಎಂದು ಮಾಹಿತಿ ನೀಡಿದರು. 6,791.80 ಲಕ್ಷ ರೂ.ಗಳು ವೆಚ್ಚದಲ್ಲಿ ಮೈಸೂರು ನಗರದ ಜಿಲ್ಲಾಮಟ್ಟದ ಕಚೇರಿಗಳ ಸಂಕೀರ್ಣ ನಿರ್ಮಾಣ ಮಾಡಲಾಗಿದೆ. ಗುತ್ತಿಗೆ ಪಡೆದಿದ್ದ ಬಿ.ಜಿ.ಶಿರ್ಕೆ ಕನ್‌ಸ್ಟ್ರಕ್ಷನ್ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್ ಅವರು ಬೋರ್ಡ್ ಕೂಡ ಹಾಕಿದ್ದಾರೆ. ಆದರೆ, ನೂತನ ಆವರಣದಲ್ಲಿ ಮಳೆ ನೀರು ಹೊರಹೋಗಲು ಜಾಗ ಬಿಟ್ಟಿಲ್ಲ. ಬೇಕಾಬಿಟ್ಟಿ ಕೆಲಸ ಮಾಡಿದ್ದಾರೆಯೇ? ಇದರ ಬಗ್ಗೆ ಯಾವ ಅಧಿಕಾರಿಗಳು ಪರಿಶೀಲನೆ ಮಾಡಿಲ್ಲವೇ ಎಂದು ಪ್ರಶ್ನಿಸಿದರು.



ಕಳೆದೆರಡು ದಿನಗಳ ಹಿಂದೆ ತಳಮಹಡಿಯಲ್ಲಿ ನಿಂತಿರುವ ನೀರಿನಲ್ಲಿ ಬಿದ್ದು ಪಾರಿವಾಳವೊಂದು ಸತ್ತು ಹೋಗಿತ್ತು. ಇದು ಕೊಳೆತು ದುರ್ವಾಸನೆ ಬರುತ್ತಿತ್ತು. ಇಲ್ಲಿಗೆ ಭೇಟಿ ನೀಡಿದ್ದ ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ನೂತನ ಕಟ್ಟಡದಲ್ಲಿ ಮೂಲ ಸೌಕರ್ಯ ಕಲ್ಪಿಸಲು ಜಿಲ್ಲಾಡಳಿತ ಮುಂದಾಗಿಲ್ಲ. ಈ ಕಟ್ಟಡಕ್ಕೆ ಭದ್ರತೆ ಒದಗಿಸುವ ಪೊಲೀಸರಿಗೆ ವಿಶ್ರಾಂತಿ ಕೊಠಡಿ ಇಲ್ಲ, ಬುಧವಾರ ಸುರಿದ ಸಣ್ಣ ಮಳೆಗೆ ತಳಮಹಡಿಯಲ್ಲಿ ನೀರು ನಿಂತುಗೊಂಡು ಅವಾಂತರ ಸೃಷ್ಟಿಯಾಗಿದೆ ಎಂದು ಫೋಟೋ ಸಮೇತ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು. ನೂತನ ಡಿಸಿ ಕಚೇರಿ ಆವರಣದಲ್ಲಿ ಹೊರಗಡೆ ಸಾರ್ವಜನಿಕರ ವಿಶ್ರಾಂತಿ ಕೊಠಡಿ, ಶೌಚಾಲಯ ನಿರ್ಮಾಣ ಮಾಡುವಂತೆ ಮನವಿ ಮಾಡಲಾಗಿದೆ. ಕೋಟ್ಯಂತರ ರೂ.ಗಳ ಸಾರ್ವಜನಿಕರ ತೆರಿಗೆ ಹಣದಲ್ಲಿ ನಿರ್ಮಾಣಗೊಂಡಿರುವ ಡಿಸಿ ಕಟ್ಟಡದಲ್ಲಿ ಸ್ವಚ್ಛತೆಗೆ ಮೊದಲು ಆದ್ಯತೆ ನೀಡಲಿ ಎಂದು ಕನ್ನಡ ವೇದಿಕೆ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.

ಕೊಡಗು ಜಿಲ್ಲೆಯಾದ್ಯಂತ ಯೋಗಮಯ...



ಮಡಿಕೇರಿ, ಜೂ.21– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ ವತಿಯಿಂದ ಅಂತರಾಷ್ಟ್ರೀಯ 9ನೇ ಯೋಗ ದಿನಾಚರಣೆಯು ನಗರದ ಗೌಡ ಸಮಾಜದಲ್ಲಿ ಬುಧವಾರ ನಡೆಯಿತು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಕೊಡಗು ವೈದ್ಯಕೀಯ ಶಿಕ್ಷಣ, ಜಿಲ್ಲಾ ಪೊಲೀಸ್, ಯುವ ಸಬಲೀಕರಣ ಮತ್ತು ಕ್ರೀಡೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ, ಸಮಾಜ ಕಲ್ಯಾಣ, ಪದವಿ ಪೂರ್ವ ಶಿಕ್ಷಣ, ಎನ್‌ಎಸ್‌ಎಸ್ ಮತ್ತು ಎನ್‌ಸಿಸಿ ಘಟಕ, ನೆಹರು ಯುವ ಕೇಂದ್ರ, ಕೊಡಗು ಯುವ ಒಕ್ಕೂಟ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಯೋಗ ಭಾರತಿ, ಪ್ರಣವ ಯೋಗ ಕೇಂದ್ರ, ಪತಂಜಲಿ ಯೋಗ ಶಿಕ್ಷಣ, ಆರ್ಟ್ ಆಫ್ ಲಿವಿಂಗ್, ಸ್ಕೌಟ್ಸ್ ಮತ್ತು ಗೈಡ್ಸ್, ನೀಮಾ ಸಂಸ್ಥೆ ಹೀಗೆ ಸರ್ಕಾರಿ ಮತ್ತು ಸರ್ಕಾರೇತರ ವಿವಿಧ ಸಂಸ್ಥೆಗಳ ಸಹಕಾರದಲ್ಲಿ ಅಂತರರಾಷ್ಟ್ರೀಯ ಯೋಗ ದಿನವನ್ನು ಜಿಲ್ಲೆಯಾದ್ಯಂತ ಆಚರಿಸಲಾಯಿತು.

ವಸುದೈವ ಕುಟುಂಬಕಂ ಯೋಗ ಆ ಹೆಸರಿನಲ್ಲಿ ನಡೆದ ಅಂತರರಾಷ್ಟ್ರೀಯ 9ನೇ ಯೋಗ ದಿನಾಚರಣೆಯಲ್ಲಿ ನಗರ ಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಜಿ.ಪಂ ಸಿಇಓ ಡಾ.ಎಸ್.ಆಕಾಶ್, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಜಿಲ್ಲಾ ಆಯುಷ್ ಅಧಿಕಾರಿ ಡಾ.ರೇಣುಕಾ ದೇವಿ, ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಡಾ.ನಂಜುಂಡಯ್ಯ, ಯೋಗ ಶಿಕ್ಷಕರಾದ ಮಹೇಶ್ ಕುಮಾರ್, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಉಪ ನಿರ್ದೇಶಕ ಸಿ.ರಂಗಧಾಮಯ್ಯ, ಪೌರಾಯುಕ್ತ ವಿಜಯ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಿ.ಟಿ.ವಿಸ್ಮಯಿ, ಆರ್‌ಸಿಎಚ್ ಅಧಿಕಾರಿ ಡಾ.ಗೋಪಿನಾಥ್, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಸದಾಶಿವ ಪಲ್ಲೇದ್, ಕ್ಷೇತ್ರ ಶಿಕ್ಷಣಾಧಿಕಾರಿ ದೊಡ್ಡೇಗೌಡ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಪೊನ್ನಚ್ಚನ ಶ್ರೀನಿವಾಸ್, ವೈದ್ಯರಾದ ಡಾ.ರಾಜಾರಾಂ, ಕೊಡಗು ಜಿಲ್ಲಾ ಯುವ ಒಕ್ಕೂಟದ ಅಧ್ಯಕ್ಷ ಪಿ.ಪಿ.ಸುಕುಮಾರ್, ರೆಡ್‌ಕ್ರಾಸ್ ಸಂಸ್ಥೆಯ ಸಭಾಪತಿ ರವೀಂದ್ರ ರೈ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಮಾತನಾಡಿ, ಆರೋಗ್ಯವೇ ಭಾಗ್ಯವಾಗಿದೆ. ಆ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಯೋಗ ಸಹಕಾರಿಯಾಗಿದೆ ಎಂದು ಹೇಳಿದರು.

ಯೋಗ ಮತ್ತು ವ್ಯಾಯಾಮ ಮಾಡುವುದರಿಂದ ಪ್ರತಿನಿತ್ಯ ಚಟುವಟಿಕೆಯಿಂದ ಇರಲು ಸಾಧ್ಯ ಆ ನಿಟ್ಟಿನಲ್ಲಿ ಉತ್ತಮ ಆರೋಗ್ಯಕ್ಕೆ ಯೋಗ ಮತ್ತು ವ್ಯಾಯಾಮ ಮಾಡುವುದು ಅತ್ಯಗತ್ಯ ಎಂದರು. ಯೋಗ ಶಿಕ್ಷಕ ಮಹೇಶ್ ಕುಮಾರ್ ಮಾತನಾಡಿ, ಅಂತರರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಕಳೆದ 15 ದಿನಗಳಿಂದ ಯೋಗ ಪೂರ್ವಾಭ್ಯಾಸ ನಡೆಸಿ ಯೋಗ ದಿನಾಚರಣೆಯನ್ನು ಯಶಸ್ವಿಗೊಳಿಸಲಾಗಿದೆ ಎಂದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ.ರೇಣುಕಾ ದೇವಿ ಅವರು ಮಾತನಾಡಿದರು.

ಸೂರ್ಯ ನಮಸ್ಕಾರ, ವೃಕ್ಷಾಸನ, ಪಾದ ಹಸ್ತಾಸನ, ಊರ್ಧ್ವಾಸನ, ತಾಡಾಸನ, ಅರ್ಧ ಮತ್ಸ್ಯೇಂದ್ರಾಸನ, ಭುಜಂಗಾಸನ, ಪವನಮುಕ್ತಾಸನ, ಭದ್ರಾಸನ, ತ್ರಿಕೋನಾಸನ, ಉಷ್ಟ್ರಾಸನ, ವಜ್ರಾಸನ, ಶಲಭಾಸನ, ಶಶಾಂಕಾಸನ, ಮಂಡೂಕಾಸನ, ವಕ್ರಾಸನ, ಮಕರಾಸನ, ಸೇತುಬಂಧಾಸನ, ಉತ್ಥಾನ ಪಾದಾಸನ, ಅರ್ಧಹಲಾಸನ, ಶವಾಸನ, ಕಪಾಲಭಾತಿ, ಶೀತಲಿ ಪ್ರಾಣಾಯಾಮ, ಭ್ರಾಮರಿ ಪ್ರಾಣಾಯಾಮ, ಧ್ಯಾನ, ನಾಡಿ ಶೋಧ ಪ್ರಾಣಾಯಾಮ ಹೀಗೆ ಹಲವು ರೀತಿಯ ಯೋಗ ಮಾಡಲಾಯಿತು.

ಯೋಗದಿಂದ ಪರಿಪೂರ್ಣ, ಸಾರ್ಥಕ, ಸಿದ್ಧಿ ಪಡೆಯಲು ಸಾಧ್ಯ



ವಿರಾಜಪೇಟೆ, ಜೂ.21– ಭಾರತಿಯರು ಹಿಂದಿನ ಕಾಲದಲ್ಲಿ ಯೋಗ ಜೀವನ ನಡೆಸುತ್ತಿದ್ದರು. ಅವರ ಜೀವನವೇ ಯೋಗ ಜೀವನವಾಗಿತ್ತು. ಯೋಗವೇ ಜೀವನವಾದಾಗ ಬದುಕು ಪರಿಪೂರ್ಣ, ಸಾರ್ಥಕ ಹಾಗೂ ಸಿದ್ಧಿಯನ್ನು ಪಡೆಯಲು ಸಾಧ್ಯ ಎಂದು ಡಾ. ಮೇಜರ್ ಅಲ್ಲಮ ಪ್ರಭು ಅಭಿಪ್ರಾಯಪಟ್ಟರು.

ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ವಿರಾಜಪೇಟೆ ನಗರದ ಅಪ್ಪಯ್ಯ ಸ್ವಾಮಿ ರಸ್ತೆಯಲ್ಲಿನ ಕಾವೇರಿ ಯೋಗ ಕೇಂದ್ರದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿ, ಹಿಂದಿನ ಕಾಲದ ಯೋಗ ಜೀವನಕ್ಕಿಂತ ಇಂದು ಯೋಗ ಜೀವನದ ಭಾಗವಾಗಿದೆಯಷ್ಟೆ, ಯೋಗವೇ ಜೀವನವಾಗಬೇಕಿದೆ ಎಂದರು.

ಕಾವೇರಿ ಯೋಗ ಕೇಂದ್ರದ ಗುರುಗಳಾದ ಸೀತಾರಾಂ ರೈ ಮಾತನಾಡಿ, ಯೋಗದಿಂದ ಉತ್ತಮ ಆರೋಗ್ಯವನ್ನು ಪಡೆಯಲು ಸಾಧ್ಯ. ಮನುಷ್ಯ ಯಾವುದೇ ಕಾಯಿಲೆ ಬಾರದ ಹಾಗೆ ಜೀವನ ನಡೆಸಲು ಯೋಗ ಸಹಕಾರಿ. ಈ ಯೋಗ ಕೇಂದ್ರದಲ್ಲಿ ಸುಮಾರು 24 ವರ್ಷಗಳಿಂದ ದಿನ ನಿತ್ಯ ಬೆಳಗ್ಗೆ ಯೋಗ ಮಾಡುತ್ತೇವೆ. ಸುಮಾರು ಅಂದಾಜು 2 ಸಾವಿರ ಮಂದಿ ಉಚಿತ ಯೋಗ ಅಭ್ಯಾಸವನ್ನು ಪಡೆದುಕೊಂಡಿರುವುದಾಗಿ ತಿಳಿಸಿದ ಸೀತಾರಾಂ ರೈ ಯೋಗದಿಂದ ಬಿಪಿ, ಶುಗರ್ ಇತ್ಯಾದಿ ಕಾಯಿಲೆಗಳು ಔಷಧಿಗಳಿಲ್ಲದೆ ಯೋಗದಿಂದ ಉತ್ತಮ ಆರೋಗ್ಯ ನಡೆಸಲು ಸಾಧ್ಯ ಎಂದರು.

ವಿರಾಜಪೇಟೆಯ ಆಯುಷ್ ಆಸ್ಪತ್ರೆಯ ವೈದ್ಯರಾದ ಡಾ.ರವಿ ಮಾತನಾಡಿ, ಇಂದು ಯೋಗವು ತನ್ನ ಮೂಲದ ಮಹತ್ವ ಕಳೆದುಕೊಂಡಿದ್ದು, ಸಂಕುಚಿತ ಅರ್ಥವನ್ನು ಪಡೆದುಕೊಂಡಿದೆ. ಆರೋಗ್ಯವೆಂದರೆ ದೈಹಿಕ, ಮಾನಸಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಆರೋಗ್ಯವನ್ನು ಕಾಯ್ದುಕೊಳ್ಳುವುದೇ ಆಗಿದೆ ಎಂದರು. ಇಲ್ಲಿನ ಅಪ್ಪಯ್ಯ ಸ್ವಾಮಿ ರಸ್ತೆಯಲ್ಲಿರುವ ಪ್ರಜಾಪಿತ ಬ್ರಹ್ಮಕುಮಾರಿ ಕೇಂದ್ರದ ಕೋಮಲ ಅವರು ಮಾತನಾಡಿ, ಶರೀರ ನಶ್ವರ, ಆತ್ಮ ಶಾಶ್ವತ. ಶರೀರಕ್ಕಿಂತ ಆತ್ಮದ ಉನ್ನತಿಯೇ ಮುಖ್ಯ. ಆತ್ಮದ ಉನ್ನತಿಗಾಗಿ ಮಾನವ ಕಾರ್ಯಪ್ರವೃತ್ತನಾಗಬೇಕು ಎಂದರು.

ಶ್ರೀ ಕಾವೇರಿ ಆಶ್ರಮದ ವಿವೇಕಾನಂದ ಶರಣು ಸ್ವಾಮೀಜಿಯವರು ತಮ್ಮ ಸಂದೇಶದಲ್ಲಿ ಯೋಗ ಮಹತ್ವದ ಕುರಿತು ಮಾಹಿತಿ ನೀಡಿದರು. ವೇದಿಕೆಯಲ್ಲಿ ನೀಲು ಅಲ್ಲಮ ಪ್ರಭು, ಹಿರಿಯ ಯೋಗಪಟುವಾದ ಬಿದ್ದಂಡ ಗಣಪತಿ, ಯೋಗಕೇಂದ್ರದ ರತಿ ಉತ್ತಪ್ಪ, ವೈಟು ಕರುಂಬಯ್ಯ, ಜಪ್ಪು ತಿಮ್ಮಯ್ಯ, ಚಂದ್ರನ್, ಪ್ರಕಾಶ್, ಲಲಿತಾ, ನಿವೃತ್ತ ಶಿಕ್ಷಕಿ ಬೊಳ್ಳಮ್ಮ ಮತ್ತಿತರರು ಉಪಸ್ಥಿತರಿದ್ದರು. ಮೊದಲಿಗೆ ಯೋಗ ಪ್ರದರ್ಶಿಸಿದರು.

ಸಮಾಜದ ಅಭಿವೃದ್ಧಿಗೂ ಯೋಗ ಅವಶ್ಯ

ಗೋಣಿಕೊಪ್ಪ, ಜೂ.21– ಸಮಾಜದ ಅಭಿವೃದ್ಧಿಗೂ ಯೋಗ ಅವಶ್ಯ ಎಂದು ವಿರಾಜಪೇಟೆ ಶಾಸಕ ಅಜ್ಜಿಕುಟ್ಟೀರ ಎಸ್. ಪೊನ್ನಣ್ಣ ಅಭಿಪ್ರಾಯಪಟ್ಟಿದ್ದಾರೆ.

ಉಮಾ ಮಹೇಶ್ವರಿ ಪೆಟ್ರೋಲ್ ಬಂಕ್ ಆವರಣದಲ್ಲಿ ಆರ್ಟ್ ಆಫ್ ಲಿವಿಂಗ್, ಉಮಾ ಮಹೇಶ್ವರಿ ಪೆಟ್ರೋಲ್ ಬಂಕ್, ಪೊನ್ನಂಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಸಹಯೋಗದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ದೀಪೋಜ್ವಲನ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಸಮಾಜ ಸೇವೆ ಮಾಡಬೇಕೆಂಬ ಹಂಬಲದಲ್ಲಿರುವವರು ಆರೋಗ್ಯ ಕಾಪಾಡಿಕೊಳ್ಳುವುದು ಕೂಡ ಮುಖ್ಯವಾಗಲಿದೆ. ಈ ನಿಟ್ಟಿನಲ್ಲಿ ಯೋಗಾಭ್ಯಾಸದಿಂದ ಮತ್ತಷ್ಟು ಸೇವೆ ನೀಡಲು ಅವಕಾಶವಿದೆ. ನಮ್ಮ ದೇಶದ ಯೋಗ ವಿಶ್ವ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಇದರ ಅಭ್ಯಾಸ ಕೂಡ ಮುಖ್ಯವಾಗಿದೆ. ನನ್ನ ತಂದೆ (ದಿ. ಶಾಸಕ ಎ. ಕೆ. ಸುಬ್ಬಯ್ಯ) ತಮ್ಮ ಜೀವನದ ಕೊನೆಯ 85ನೇ ವಯಸ್ಸಿನವರೆಗೂ ಯೋಗ ಮಾಡುತ್ತಿದ್ದರು. ಅವರು ತುರ್ತು ಪರಿಸ್ಥಿತಿಯಲ್ಲಿ ಜೈಲು ಸೇರಿದ್ದಾಗ ಕಲಿತ ಅಭ್ಯಾಸದಿಂದ ಅವರ ಕೊನೆಯವರೆಗೂ ಚೈತನ್ಯದಿಂದ ಇದ್ದರು ಎಂದು ಸ್ಮರಿಸಿದರು.

ಆರ್ಟ್ ಆಫ್ ಲಿವಿಂಗ್ ಶಿಕ್ಷಕರ ಸಮಿತಿ ರಾಜ್ಯ ಸಂಚಾಲಕ ಅಳಮೇಂಗಡ ಡಾನ್ ರಾಜಪ್ಪ ಮಾತನಾಡಿ, ಒತ್ತಡದಿಂದ ಶೇ.90 ರಷ್ಟು ಮಾನವ ಸಾವು ನಡೆಯುತ್ತಿರುವುದು ವಿಪರ್ಯಾಸ. ಈ ನಿಟ್ಟಿನಲ್ಲಿ ಒತ್ತಡ ನಿಭಾಯಿಸಿಕೊಂಡು ತೃಪ್ತಿ ಪಡೆದುಕೊಳ್ಳಲು ಯೋಗಾಭ್ಯಾಸ ಒಳ್ಳೆಯದು ಎಂದರು.

ಉದ್ಯಮಿ ಕೊಲ್ಲೀರ ಉಮೇಶ್ ಮಾತನಾಡಿದರು.



ಯೋಗಾಸನ ಮಾಡಿದ ಶಾಸಕರು: ಶಾಸಕ ಅಜ್ಜಿಕುಟ್ಟೀರ ಎಸ್. ಪೊನ್ನಣ್ಣ ಯೋಗಾಸನ ಮಾಡುವ ಮೂಲಕ ಗಮನ ಸೆಳೆದರು. ಬಸ್ತ್ರಿಕಾ, ವ್ಯಾಂಯಾಮ, ಮಲಾಸನ, ವೀರಭದ್ರಾಸನ ಮಾಡಿದರು. 94ರ ಹಿರಿಯರಾದ ನಾಮೇರ ಜಾನಕ್ಕಿ ಕುಟ್ಟಪ್ಪ ಸೇರಿದಂತೆ 80ಕ್ಕೂ ಹೆಚ್ಚು ಜನರು ಪಾಲ್ಗೊಂಡು ಅಭ್ಯಾಸ ಮಾಡಿದರು.

ಮಾದಕ ವಸ್ತು ಮಾರಾಟ ಯತ್ನ: ಇಬ್ಬರ ಬಂಧನ



ಕುಶಾಲನಗರ, ಜೂ.21– ಅಕ್ರಮವಾಗಿ ಮಾದಕ ವಸ್ತುವನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ಮಂಗಳವಾರ ಬಂಧಿಸಿದ್ದಾರೆ. ಸೋಮವಾರಪೇಟೆ ನಿವಾಸಿ ಆಶ್ರಫ್ ಮತ್ತು ಕೊಟ್ಟಮುಡಿ ನಿವಾಸಿ ಇಸ್ಮಾಯಿಲ್ ಬಂಧಿತ ವ್ಯಕ್ತಿಗಳಾಗಿದ್ದಾರೆ.

ಕುಶಾಲನಗರ ಡಿವೈಎಸ್ಪಿ ಗಂಗಾಧರ್ ಮಾರ್ಗದರ್ಶನದಲ್ಲಿ ವೃತ್ತ ನಿರೀಕ್ಷಕ ಬಿ.ಜಿ. ಮಹೇಶ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿದ ವಿಶೇಷ ಪೊಲೀಸ್ ತಂಡ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಬಳಿ ಮಾದಕ ವಸ್ತು ಮಾರಾಟ ಮಾಡಲು ಯತ್ನಿಸುತ್ತಿದ್ದ ಆರೋಪಿಗಳನ್ನು ಬಂಧಿಸಿ 19 ಗ್ರಾಂ ಎಂಡಿಎಂಎ ನಿಷೇಧಿತ ಮಾದಕ ವಸ್ತು ಹಾಗೂ ಜೀಪನ್ನು ವಶಪಡಿಸಿಕೊಂಡಿದ್ದಾರೆ.

ಬಂಧಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕಾರ್ಯಾಚರಣೆಯಲ್ಲಿ ಟೌನ್ ಠಾಣೆಯ ಪಿಎಸ್‌ಐ ರವೀಂದ್ರ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು. ಮಾದಕ ವಸ್ತು ಸಾಗಾಟ ಪ್ರಕರಣ ಪತ್ತೆ ಹಚ್ಚಿದ ಪೊಲೀಸರ ಕಾರ್ಯವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್ ಶ್ಲಾಘಿಸಿದ್ದಾರೆ.

ಕಾಲೇಜು ವಿದ್ಯಾರ್ಥಿಗಳು, ಯುವಕ, ಯುವತಿಯರು ಮಾದಕ ವಸ್ತುಗಳನ್ನು ಉಪಯೋಗಿಸದಂತೆ ಇಲಾಖೆ ಮನವಿ ಮಾಡಿದೆ.

ನೂತನ ಡಿಸಿ ಅಧಿಕಾರ ಸ್ವೀಕಾರ



ಮಡಿಕೇರಿ, ಜೂ.21– ಕೊಡಗು ನೂತನ ಜಿಲ್ಲಾಧಿಕಾರಿಯಾಗಿ ಐಎಎಸ್ ಅಧಿಕಾರಿ ವೆಂಕಟ್ ರಾಜ ಅವರು ಅಧಿಕಾರ ಸ್ವೀಕರಿಸಿದರು. 20 13ರ ಬ್ಯಾಚ್‌ನ ಅಧಿಕಾರಿಯಾಗಿರುವ ವೆಂಕಟ್‌ರಾಜ ಅವರಿಗೆ ನಿರ್ಗಮಿತ ಜಿಲ್ಲಾಧಿಕಾರಿ ಡಾ.ಸತೀಶ ಬಿ.ಸಿ. ಅವರು ಅಧಿಕಾರ ಹಸ್ತಾಂತರಿಸಿ, ಶುಭಕೋರಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ವೆಂಕಟ್ ರಾಜ, ಜಿಲ್ಲೆಯ ಬಗ್ಗೆ ಹೆಮ್ಮೆ ಇದೆ ಎಂದು ಮೆಚ್ಚುಗೆಯ ನುಡಿಯಾಡಿದರು. ಕೊಡಗು ಜಿಲ್ಲೆಯಲ್ಲಿ ಮಳೆಗಾಲ ಸಂದರ್ಭ ಸಮಸ್ಯೆಗಳು ಎದುರಾಗುತ್ತವೆ. ಹೀಗಾಗಿ ಮಳೆಗಾಲ ಎದುರಿಸಲು ಮೊದಲ ಆದ್ಯತೆ ಎಂದರು.

ಕಾಡಾನೆ ದಾಳಿ: ಪ್ರಾಣಾಪಾಯದಿಂದ ಪಾರಾದ ಮಹಿಳೆ

ವಿರಾಜಪೇಟೆ/ಮಡಿಕೇರಿ/ನಾಪೋಕ್ಲು, ಜೂ.21– ಮಹಿಳೆ ಮೇಲೆ ಕಾಡಾನೆ ದಾಳಿ ನಡೆಸಿದ್ದು, ಪವಾಡ ಸದೃಶ ರೀತಿಯಲ್ಲಿ ಮಹಿಳೆ ಪ್ರಾಣಾಪಾಯದಿಂದ ಪಾರಾದ ಘಟನೆ ನಾಪೋಕ್ಲು ಸಮೀಪದ ಚೆಯ್ಯಂಡಾಣೆ ವ್ಯಾಪ್ತಿಯ ಚೇಲಾವರ ಗ್ರಾಮದಲ್ಲಿ ನಡೆದಿದೆ.

ಮುಂಡ್ಯೋಳಂಡ ಜಾನಕಿ ಅಪ್ಪಯ್ಯ ಎಂಬವರೇ ಕಾಡಾನೆ ದಾಳಿಗೆ ತುತ್ತಾದ ಮಹಿಳೆಯಾಗಿದ್ದು ಕೈ ಮುರಿಯಲ್ಪಟ್ಟಿದೆ. ಜಾನಕಿ ಅಪ್ಪಯ್ಯ ಅವರು ಕಾಫಿ ತೋಟಕ್ಕೆ ತೆರಳುತ್ತಿದ್ದ ಸಂದರ್ಭ ಏಕಾಏಕಿ ಕಾಡಾನೆ ದಾಳಿ ನಡೆಸಿದ್ದು, ಕೈ ಮುರಿತ ಹಾಗೂ ಸಣ್ಣಪುಟ್ಟ ಗಾಯಗಳಿಂದ ಪ್ರಾಣಾಪಾಯದಿಂದ ಪಾರಾಗಿ, ವಿರಾಜಪೇಟೆ ಸರಕಾರಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಶಾಸಕರ ಸಾಂತ್ವನ: ಕಾಡಾನೆ ದಾಳಿಯ ಮಾಹಿತಿ ಅರಿತ ವಿರಾಜಪೇಟೆ ಕ್ಷೇತ್ರ ಶಾಸಕ, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ಕೆಪಿಸಿಸಿ ರಾಜ್ಯ ವಕ್ತಾರ ಮೇರಿಯಂಡ ಸಂಕೇತ್ ಪೂವಯ್ಯ ಅವರುಗಳು ಆಸ್ಪತ್ರೆಗೆ ಭೇಟಿ ನೀಡಿ, ಗಾಯಾಳುವಿನ ಆರೋಗ್ಯ ವಿಚಾರಿಸಿದರು.



ವೈದ್ಯರಿಂದ ಮಾಹಿತಿ ಪಡೆದುಕೊಂಡ ಶಾಸಕ ಪೊನ್ನಣ್ಣ, ಜಾನಕಿ ಅಪ್ಪಯ್ಯ ಅವರಿಗೆ ಸಾಂತ್ವನ ಹೇಳಿದರು. ಕಾಡಾನೆ ಉಪಟಳ ಕಂಡು ಬಂದಿರುವ ಸ್ಥಳದಲ್ಲಿ ತಕ್ಷಣವೇ ಕಾರ್ಯಾಚರಣೆ ನಡೆಸುವಂತೆ ಡಿಸಿಎಫ್ ಶರಣ ಬಸಪ್ಪ ಅವರಿಗೆ ಶಾಸಕ ಪೊನ್ನಣ್ಣ ಇದೇ ಸಂದರ್ಭ ಸೂಚನೆ ನೀಡಿದರು. ಈ ಸಂದರ್ಭ ಕಾಂಗ್ರೆಸ್ ಜಿಲ್ಲಾಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ, ವಿರಾಜಪೇಟೆ ಬ್ಲಾಕ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ ಮತೀನ್, ಎಸಿಎಫ್ ನೆಹರು ಮತ್ತಿತರರು ಉಪಸ್ಥಿತರಿದ್ದರು.

ತಮಿಳುನಾಡು ಗಡಿ ತಾಳವಾಡಿಯಲ್ಲಿ ವೈಭವದ ಗಡಿನಾಡು ಸಾಂಸ್ಕೃತಿಕ ಉತ್ಸವ

ಕನ್ನಡ ಭಾಷೆ, ಸಂಸ್ಕೃತಿ ಉಳಿಸಿ, ಬೆಳೆಸಿ; ಸುತ್ತೂರು ಶ್ರೀಗಳು



ಚಾಮರಾಜನಗರ, ಜೂ.21– ಜಿಲ್ಲೆಯ ತಮಿಳುನಾಡಿನ ಗಡಿಯಲ್ಲಿರುವ ತಾಳವಾಡಿಯಲ್ಲಿ ಬುಧವಾರ ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ಗಡಿನಾಡು ಸಾಂಸ್ಕೃತಿಕ ಉತ್ಸವ ಸಂಭ್ರಮದಿಂದ ನಡೆಯಿತು.

ತಾಳವಾಡಿಯ ಶ್ರೀ ಬಸವೇಶ್ವರ ವೃತ್ತದಲ್ಲಿ ಜಾನಪದ ಕಲಾತಂಡಗಳ ಮೆರವಣಿಗೆಗೆ ಸಾಂಸ್ಕೃತಿಕ ಉತ್ಸವಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ವಿಶ್ವನಾಥ್ ಪಿ.ಹಿರೇಮಠ ಚಾಲನೆ ನೀಡಿದರು. ಅಲ್ಲಿಂದ ಹೊರಟ ಮೆರವಣಿಗೆ ಕ್ಲಾಸಿಕ್ ಫಂಕ್ಷನ್ ಹಾಲ್‌ನಲ್ಲಿ ಅಂತ್ಯವಾಯಿತು.

ಮೆರವಣಿಗೆಗೆ ವೀರಗಾಸೆ, ಮಂಗಳವಾದ್ಯ, ನಂದಿಕಂಬ ಜಾನಪದ ಕಲಾತಂಡಗಳು ಹಾಗೂ ಜೆಎಸ್‌ಎಸ್ ಸಂಸ್ಥೆಯ ವಿದ್ಯಾರ್ಥಿಗಳ ಪಥ ಸಂಚಲನ ಮೆರಗು ನೀಡಿತು. ನಂತರ ನಡೆದ ವೇದಿಕೆ ಕಾರ್ಯಕ್ರಮವನ್ನು ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಸಿ.ಸೋಮಶೇಖರ್, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹಾಗೂ ಗಣ್ಯರು ಜಾನಪದ ವಾದ್ಯಗಳನ್ನು ನುಡಿಸುವ ಮೂಲಕ ಉದ್ಘಾಟಿಸಿದರು.

ಕನ್ನಡ ಭಾಷೆ, ಸಂಸ್ಕೃತಿ ಉಳಿಸಿ: ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಕನ್ನಡ ಭಾಷೆ ಸಂಪದ್ಭರಿತವಾಗಿದ್ದು, ರಾಜ್ಯದ ಗಡಿಯಂಚಿನ ಪ್ರದೇಶಗಳಲ್ಲಿ ಕನ್ನಡ ಭಾಷೆ, ಸಂಸ್ಕೃತಿಯನ್ನು ಉಳಿಸಿ, ಬೆಳೆಸುವುದು ಎಲ್ಲರ ಕರ್ತವ್ಯವಾಗಿದೆ. ಈ ಮೂಲಕ ಗಡಿ ಪ್ರದೇಶದಲ್ಲಿಯೂ ಕನ್ನಡದ ಸಂರಕ್ಷಣೆ ಮಾಡುವುದು ಹಾಗೂ ಜಾನಪದ ಕಲೆಗಳನ್ನು ಸುಭದ್ರವಾಗಿಸುವ ಕೆಲಸವಾಗಬೇಕು ಎಂದರು.

ಕರ್ನಾಟಕ ಹಾಗೂ ತಮಿಳುನಾಡಿಗೆ ಸೇತುವೆಯಾಗಿ ತಾಳವಾಡಿ ಇದೆ. ಇಲ್ಲಿ ಗಡಿನಾಡು ಸಾಂಸ್ಕೃತಿಕ ಉತ್ಸವ ನಡೆಯುತ್ತಿರುವುದು ಅರ್ಥಪೂರ್ಣವಾಗಿದೆ. ಈ ಹಿಂದೆ ಇಲ್ಲಿ ಜಾನಪದ ಉತ್ಸವ ನಡೆಸಲಾಗಿತ್ತು. ಅದರ ಮುಂದುವರಿದ ಭಾಗವಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

'ಗಡಿನಾಡ ಚೇತನ ಪ್ರಶಸ್ತಿ': ನಾಡೋಜ ಡಾ. ಕಯ್ಯಾರ ಕಿಞ್ಞಣ್ಣ ರೈ, ಕನ್ನಡದ ಏಕೀಕರಣದ ಹೋರಾಟದ ವೀರಾಗ್ರಣಿ ಡಾ.ಜಯ ದೇವಿ ತಾಯಿ ಲಿಗಾಡೆ ಹಾಗೂ ಬೀದರ್‌ನ ಡಾ.ಚನ್ನಬಸವ ಪಟ್ಟದ್ದೇವರ ಸ್ವಾಮೀಜಿ ಹೆಸರಿನಲ್ಲಿ 'ಗಡಿನಾಡ ಚೇತನ ಪ್ರಶಸ್ತಿ'ಯನ್ನು ಸಾಧಕರಿಗೆ ನೀಡಲಾಗುತ್ತಿದೆ ಎಂದು ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಸಿ. ಸೋಮಶೇಖರ್ ತಿಳಿಸಿದರು.

ಕರ್ನಾಟಕ ರಾಜ್ಯ ತಮಿಳುನಾಡು, ಕೇರಳ, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಗೋವಾ ರಾಜ್ಯಗಳ ಗಡಿಯನ್ನು ಹೊಂದಿದ್ದು, ರಾಜ್ಯದ 19 ಜಿಲ್ಲೆಗಳು ಅಂತರ ರಾಜ್ಯದ ಗಡಿ ಹಂಚಿಕೊಂಡಿದ್ದು, ಈ ಗಡಿಯಂಚಿನ ಪ್ರದೇಶದಲ್ಲಿ ಕನ್ನಡವನ್ನು ಸಂರಕ್ಷಣೆ ಮಾಡುವುದು, ಜಾಗೃತಿಗೊಳಿಸುವ ಉದ್ದೇಶದಿಂದ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಸನ್ಮಾನ: ವೇದಿಕೆಯಲ್ಲಿ ಸಾಹಿತಿ ಕೆ. ಕೃಷ್ಣಮೂರ್ತಿ, ಸಮಾಜ ಸೇವಕ ವಿ. ಗೋಪಾಲ್, ರಂಗಕರ್ಮಿ ಜೈಮಲ್ ಜಯಶೇಖರ್, ಮುಖ್ಯಶಿಕ್ಷಕರಾದ ಎಸ್. ಶಂಭುಲಿಂಗಪ್ಪ, ಸಿ.ಜಡೇಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಮಾಜಿ ಉಪಮೇಯರ್ ಬಿ.ಎಸ್. ಪುಟ್ಟರಾಜು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್‌ಮತ್ತೀಹಳ್ಳಿ, ತಾಳವಾಡಿ ಪಂಚಾಯಿತಿ ಯೂನಿಯನ್ ಚೇರ್‌ಮನ್ ರತ್ನಮ್ಮ ಕಾಳನಾಯ್ಡು, ತಾಳವಾಡಿ ಗ್ರಾಪಂ ಅಧ್ಯಕ್ಷರಾದ ದಾಕ್ಷಾಯಣಿ ಕುಮಾರ್, ಡಿಎಂಕೆ ಜಿಲ್ಲಾಧ್ಯಕ್ಷ ಎನ್. ನಲ್ಲಶಿವಂ, ಬಿಇಒ ಎಂ. ಭಾಗೀರಥಿ, ಬಸವ ಸಮಿತಿ ಎಂ.ಜಿ. ವೀರಭದ್ರಸ್ವಾಮಿ, ಕನ್ನಡ ಸಂಘ ಅಧ್ಯಕ್ಷ ಎಸ್. ಚನ್ನಂಜಪ್ಪ, ತಹಸೀಲ್ದಾರ್ ಟಿ.ವಿ. ರವಿಶಂಕರ್, ಸರ್ಕಲ್ ಇನ್‌ಸ್ಪೆಕ್ಟರ್ ಕೆ.ಸೆಲ್ವನ್, ಅರಣ್ಯವಲಯಾಧಿಕಾರಿ ಡಾ.ಎಸ್. ಸತೀಶ್ ಇದ್ದರು.

ವೇದಿಕೆ ಕಾರ್ಯಕ್ರಮದ ನಂತರ ರಂಗಕರ್ಮಿ ಕೆ. ವೆಂಕಟರಾಜು ಅಧ್ಯಕ್ಷತೆಯಲ್ಲಿ ವಿಚಾರ ಸಂಕಿರಣ ಹಾಗೂ ಸಮಾರೋಪ ಸಮಾರಂಭ ನಡೆಯಿತು. ಬಳಿಕ ಸ್ಥಳೀಯ ಕಲಾವಿದರಿಂದ ಕಾವ್ಯ ಪ್ರಸ್ತುತಿ, ವಚನ ಗಾಯನ, ಭಜನೆ, ಜಾನಪದ ಗಾಯನ, ರಂಗಗೀತೆಗಳು ಹಾಗೂ ವಿದ್ಯಾರ್ಥಿಗಳಿಂದ ದೇಶಭಕ್ತಿ ಗೀತೆ ಗಾಯನ, ನೃತ್ಯ ಪ್ರದರ್ಶನ ನಡೆಯಿತು.

ಯಳಂದೂರು ತಾಲೂಕಿನಲ್ಲಿ ವಿಶ್ವ ಯೋಗ ದಿನಾಚರಣೆ



ಯಳಂದೂರು, ಜೂ.21– ಪಟ್ಟಣವೂ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳ ಶಾಲೆಗಳಲ್ಲಿ ಬುಧವಾರ ವಿಶ್ವ ಯೋಗ ದಿನವನ್ನು ಆಚರಿಸಲಾಯಿತು. ಇದಕ್ಕಾಗಿ ಒಂದು ವಾರದಿಂದಲೂ ಮಕ್ಕಳಿಗೆ ತಾಲೀಮು ನೀಡಲಾಗಿತ್ತು. ಸುಲಭ ಆಸನಗಳನ್ನು ಮಕ್ಕಳಿಂದ ಮಾಡಿಸುವ ಮೂಲಕ ಯೋಗದ ಮಹತ್ವದ ಬಗ್ಗೆ ಮಾಹಿತಿ ನೀಡಲಾಯಿತು.

ಆರೋಗ್ಯಕರ ಜೀವನಕ್ಕೆ ಯೋಗವೇ ಮದ್ದು: ಪಟ್ಟಣದ ಕರ್ನಾಟಕ ಪಬ್ಲಿಕ್ ಶಾಲೆಯ ಆವರಣದಲ್ಲಿ ಆಯೋಜಿಸಲಾಗಿದ್ದ ಯೋಗ ದಿನಾಚರಣೆಯಲ್ಲಿ ಉಪ ಪ್ರಾಂಶುಪಾಲ ನಂಜುಂಡಯ್ಯ ಮಾತನಾಡಿ, ಮನುಷ್ಯ ಇಂದು ಒತ್ತಡದ ಜೀವನ ನಡೆಸುತ್ತಿದ್ದಾನೆ. ಪ್ರತಿ ವಿಷಯದಲ್ಲೂ ನೆಮ್ಮದಿಯನ್ನು ಹುಡುಕುವ ಧಾವಂತದಲ್ಲಿದ್ದಾನೆ. ಇದರಿಂದ ಆರೋಗ್ಯ ಹಾಳಾಗುತ್ತಿದೆ. ಮನುಷ್ಯನ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಸ್ವಸ್ಥವಾಗಿಟ್ಟುಕೊಳ್ಳಲು ಯೋಗ ಪರಿಣಾಮಕಾರಿ ಚಿಕಿತ್ಸೆಯಾಗಿದೆ ಇದು ಸಂಪೂರ್ಣ ಉಚಿತವಾಗಿ ಲಭಿಸುವ ಔಷಧವಾಗಿದೆ. ಪ್ರತಿನಿತ್ಯ ಚಾಚೂತಪ್ಪದೆ ಯೋಗವನ್ನು ಮಾಡಿದ್ದೆ ಆದಲ್ಲಿ ಅನೇಕ ಕಾಯಿಲೆಗಳನ್ನು ವಾಸಿ ಮಾಡುವುದಲ್ಲದೆ, ಒತ್ತಡ ರಹಿತ ಜೀವನಕ್ಕೆ ಯೋಗ ಮಹತ್ವದ್ದಾಗಿದೆ ಎಂದರು.

ದೈಹಿಕ ಆರೋಗ್ಯ ಹಾಗೂ ಮನಸ್ಸಿನ ಪ್ರಫುಲ್ಲತೆಗೆ ಯೋಗವೇ ಮದ್ದಾಗಿದೆ. ಹಲವು ರಾಷ್ಟ್ರಗಳು ಇದನ್ನು ಸ್ವೀಕರಿಸುವ ಮೂಲಕ ಇದರ ಮಹತ್ವಕ್ಕೆ ಮತ್ತಷ್ಟು ಮೆರಗು ನೀಡಿವೆ. ಹಾಗಾಗಿ ಪ್ರತಿಯೊಬ್ಬರೂ ಇದರ ಉಪಯೋಗ ಪಡೆದುಕೊಳ್ಳಬೇಕೆಂದು ಸಲಹೆ ನೀಡಿದರು. ತಾಲೂಕಿನ ಗುಂಬಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ವೀರಭದ್ರ ಸ್ವಾಮಿ ಮಾತನಾಡಿ, ಯೋಗಕ್ಕೆ ಇಡೀ ವಿಶ್ವವೇ ಮನಸೋತಿದೆ. ಸಾವಿರಾರು ವರ್ಷಗಳ ಯೋಗದಿಂದ ಸ್ವಸ್ಥ ಜೀವನ ನಡೆಸಬಹುದು ಎಂಬುದು ಇಂದು ಇಡೀ ವಿಶ್ವವೇ ಮನಗಂಡಿದೆ. ಯೋಗ ಭಾರತ ವಿಶ್ವಕ್ಕೆ ನೀಡಿದ ಅತ್ಯಮೂಲ್ಯ ಕೊಡುಗೆಯಾಗಿದೆ. ಇದನ್ನು ಪ್ರತಿಯೊಬ್ಬರೂ ದಿನ ನಿತ್ಯ ಮಾಡುವ ಮೂಲಕ ಆರೋಗ್ಯಕರ ಜೀವನ ನಡೆಸಬೇಕು ಎಂದು ಸಲಹೆ ನೀಡಿದರು.

ಪಟ್ಟಣ ಹಾಗೂ ತಾಲೂಕಿನ ಸರ್ಕಾರಿ ಹಾಗೂ ಖಾಸಗಿ ಶಾಲೆಗಳೂ ಸೇರಿದಂತೆ ವಿವಿಧೆಡೆ ಯೋಗ ದಿನವನ್ನು ಆಚರಣೆ ಮಾಡಲಾಯಿತು. ಯೋಗ ದಿನದ ನಿಮಿತ್ತ ಸರ್ಕಾರಿ ಆದೇಶದಂತೆ ಶಾಲೆಗಳಲ್ಲಿ ಬೆಳಗಿನ ತರಗತಿಗಳನ್ನು ಮಾತ್ರ ನಡೆಸಲಾಯಿತು.

ಹುಡುಗಿಯರನ್ನು ಚುಡಾಯಿಸದಂತೆ ಬುದ್ಧಿ ಹೇಳಿದ ವ್ಯಕ್ತಿ ಮೇಲೆ ಬ್ಲೇಡಿನಿಂದ ಹಲ್ಲೆ

ಗುಂಡ್ಲುಪೇಟೆ,ಜೂ.21–ಹುಡುಗಿಯರನ್ನು ಚುಡಾಯಿಸದಂತೆ ಬುದ್ಧಿ ಹೇಳಿದ ವ್ಯಕ್ತಿ ಮೇಲೆ ಪುಂಡರ ಗುಂಪೊಂದು ಹಲ್ಲೆ ನಡೆಸಿ, ಬ್ಲೇಡಿನಿಂದ ಮುಖ–ಮೂತಿ ನೋಡದೆ ಕೊಯ್ದು ಗಾಯಗೊಳಿಸಿರುವ ಘಟನೆ ತಾಲೂಕಿನ ಹಂಗಲ ಗ್ರಾಮದಲ್ಲಿ ಸಂಭವಿಸಿದೆ.

ತೀವ್ರವಾಗಿ ಗಾಯಗೊಂಡಿರುವ ಮಂಗಲ ಗ್ರಾಮದ ನಾಗೇಶ್ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಹಂಗಲ ಗ್ರಾಮದ ಬಸ್‌ನಿಲ್ದಾಣದಲ್ಲಿ ಬಸ್ಸಿಗಾಗಿ ಕಾಯುತ್ತಾ ಹುಡುಗಿಯರು ನಿಂತಿದ್ದು, ಈ ವೇಳೆ ಅಲ್ಲಿಗೆ ಬಂದ ನಾಲ್ವರು ಯುವಕರ ಗುಂಪು ಹುಡುಗಿಯನ್ನು ಚುಡಾಯಿಸಲಾರಂಭಿಸಿತು. ಆಗ ಅಲ್ಲೆ ಇದ್ದ ಮಂಗಲದ ನಾಗೇಶ್ ಈ ನಾಲ್ವರಿಗೆ ಹುಡುಗಿಯರನ್ನು ಚುಡಾಯಿಸದಂತೆ ಬುದ್ಧಿ ಹೇಳಿದರಂತೆ.

ಇದರಿಂದ ಕುಪಿತಗೊಂಡ ಈ ಪುಂಡರ ಗುಂಪು ನಾಗೇಶ್ ಬಟ್ಟೆ ಹರಿದು, ಹಲ್ಲೆ ಮಾಡಿ, ಬ್ಲೇಡಿನಿಂದ ಮನ ಬಂದಂತೆ ಕೊಯ್ದು ಪರಾರಿಯಾಯಿತು ಎನ್ನಲಾಗಿದೆ. ಇದರಿಂದ ಗಾಯಗೊಂಡು ನರಳುತ್ತಾ ಬಿದ್ದಿದ್ದ ನಾಗೇಶ್ ಅವರನ್ನು ತಾಲೂಕಿನ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಈ ಸಂಬಂಧ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳ ಪತ್ತೆಗೆ ಬಲೆ ಬೀಸಲಾಗಿದೆ.

ಮಾನಸಿಕ ದೈಹಿಕ ಸದೃಢತೆಗೆ ಯೋಗ ಸಹಕಾರಿ

ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಯೋಗ ಪ್ರದರ್ಶನ

ಚಾಮರಾಜನಗರ, ಜೂ.21– ಮಾನಸಿಕವಾಗಿ ಮತ್ತು ದೈಹಿಕವಾಗಿ ಸದೃಢರಾಗಲು ಯೋಗವು ಅತ್ಯಂತ ಸಹಕಾರಿಯಾಗಿದೆ ಎಂದು ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ತಿಳಿಸಿದರು.

ನಗರದ ನಂದಿ ಭವನದಲ್ಲಿ ಆಯುಷ್ ಮಂತ್ರಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಪತಂಜಲಿ ಯೋಗ ಶಿಕ್ಷಣ ಸಮಿತಿ, ಯೋಗ ನಿರತ ಸಂಘ ಸಂಸ್ಥೆಗಳ ಸಹಯೋಗದಲ್ಲಿ 9ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಜೀವನದಲ್ಲಿ ಉತ್ತಮ ಚಟುವಟಿಕೆಯಾದ ಯೋಗ, ಧ್ಯಾನದಂತಹ ಅಭ್ಯಾಸವನ್ನು ಪ್ರತಿಯೊಬ್ಬರು ರೂಢಿಸಿಕೊಳ್ಳಬೇಕು. ಜೀವನದಲ್ಲಿ ನಾವು ಸಂತೋಷವಾಗಿದ್ದಾಗ ಮಾತ್ರ ಸುತ್ತಲಿನ ವಾತಾವರಣ ಸಂತೋಷದಿಂದ ಇರಲು ಸಾಧ್ಯವಾಗುತ್ತದೆ. 9ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯು ಎಲ್ಲರಿಗೂ ಆರೋಗ್ಯಯುತ ಉತ್ತಮ ಜೀವನಕ್ಕೆ ದಾರಿಯಾಗಲಿ ಎಂದು ಅವರು ಹಾರೈಸಿದರು.

ಸಮಸ್ಯೆಗಳ ಮೂಲವೇ ಮನುಷ್ಯನಾಗಿರುತ್ತಾನೆ. ಸಮಸ್ಯೆಗಳಿಗೆ ಪರಿಹಾರವನ್ನು ಬೇರೆ ಕಡೆ ಹುಡುಕದೇ ತಮ್ಮಲೇ ಹುಡುಕಿದರೆ ಪರಿಹಾರ ಸಿಗುತ್ತದೆ. ಮನಸ್ಸು ಹಾಗೂ ಪ್ರಕೃತಿಯ ಜೊತೆಯಲ್ಲಿ ಮಾತನಾಡುವ ಗುಣವನ್ನು ಎಲ್ಲರೂ ಬೆಳೆಸಿಕೊಳ್ಳಬೇಕು. ಪ್ರಕೃತಿ ಮತ್ತು ಮನುಷ್ಯರಿಗೆ ಒಂದು ರೀತಿಯ ಅವಿನಾಭಾವ ಸಂಬಂಧವಿದೆ ಎಂದು ಅವರು ಅಭಿಪ್ರಾಯಪಟ್ಟರು.



ಪ್ರಕೃತಿ ಮತ್ತು ಮನುಷ್ಯರ ಸಂಬಂಧಕ್ಕೆ ಪ್ರಮುಖ ಕಾರಣ ವಾಯು. ಗಾಳಿ ಇಲ್ಲದಿದ್ದರೆ ಪ್ರಕೃತಿ ಮತ್ತು ಮನುಷ್ಯನ ಸಂಬಂಧವೆ ಇರುವುದಿಲ್ಲ. ಆದರಿಂದ ಪ್ರಕೃತಿ ಮತ್ತು ಮನುಷ್ಯನ ಸಂಬಂಧವನ್ನು ಗಟ್ಟಿಯಾಗಿಸಿಕೊಳ್ಳಬೇಕು. ಪ್ರಕೃತಿ ದತ್ತವಾಗಿ ದೊರೆಯುವ ಗಾಳಿಯ ಬಗ್ಗೆ ಯಾರೂ ಯೋಚಿಸುವುದಿಲ್ಲ. ಪ್ರಕೃತಿಯಿಂದ ಯಾವುದೇ ಅಗತ್ಯ ಇಲ್ಲದಂತೆ ನಡೆದುಕೊಳ್ಳುತ್ತಿದ್ದೇವೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಎಸ್.ಕಾತ್ಯಾಯಿನಿ ದೇವಿ. ನಗರಸಭೆ ಪೌರಾಯುಕ್ತ ಎಸ್.ವಿ. ರಾಮದಾಸ್, ಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಹೆಚ್.ಜಿ. ಕುಮಾರಸ್ವಾಮಿ, ಜಿಲ್ಲಾ ಆಯುಷ್ ಅಧಿಕಾರಿ ಡಾ. ಸುಜಾತ ಇತರರು ಉಪಸ್ಥಿತರಿದ್ದರು.

ಉದ್ಘಾಟನೆ ಬಳಿಕ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಹೆಚ್ಚು ವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿ ದೇವಿ ಅವರು ಸಹ ಯೋಗ ಮಾಡುವ ಮೂಲಕ ಗಮನ ಸೆಳೆದರು.

ಅರಳಿದೆ ಐವತ್ತಕ್ಕೂ ಹೆಚ್ಚು ಬ್ರಹ್ಮ ಕಮಲ

ಗುಂಡ್ಲುಪೇಟೆ, ಜೂ.21– ಪಟ್ಟಣದ ಅಶ್ವಿನಿ ಬಡಾವಣೆಯಲ್ಲಿರುವ ಪತ್ರಕರ್ತ ಸೋಮಶೇಖರ್ ಅವರ ಮನೆಯಂಗಳದಲ್ಲಿ ಐವತ್ತಕ್ಕೂ ಹೆಚ್ಚು ಬ್ರಹ್ಮ ಕಮಲದ ಹೂಗಳು ಅರಳಿದ್ದು, ಘಮಘಮ ಪರಿಮಳವನ್ನು ಬೀರುತ್ತಿವೆ.

ರಾತ್ರಿ ವೇಳೆಯಲ್ಲಿ ಅರಳುವ ಈ ಅಪರೂಪದ ಬ್ರಹ್ಮ ಕಮಲ ನೋಡುಗರ ಮನಸ್ಸಿಗೆ ಸಂತೋಷವನ್ನು ತರುತ್ತದೆ. ಶ್ವೇತ ವರ್ಣದ ದಳಗಳನ್ನು ಹೊಂದಿರುವ ಈ ಹೂಗಳು ಜನರನ್ನು ಆಕರ್ಷಿಸುತ್ತಿವೆ.



ಮೈಸೂರು ಮಿತ್ರ

ಜುಲೈಗೆ 10 ಕೆಜಿ ಅಕ್ಕಿ ಸಿಗೋದು ಅನುಮಾನ?



ನವದೆಹಲಿ: ರಾಜ್ಯಕ್ಕೆ ಅಕ್ಕಿ ನೀಡುವ ವಿಚಾರದಲ್ಲಿ ಬಿಜೆಪಿ ರಾಜಕೀಯ ಮಾಡುತ್ತಿದೆ. ಆದರೂ ಜುಲೈ 1ಕ್ಕೆ ಅಕ್ಕಿ ನೀಡುವ ಪ್ರಕ್ರಿಯೆ ಆರಂಭಿಸಲು ತೀವ್ರಪ್ರಯತ್ನ ನಡೆಸುತ್ತಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ರಾಷ್ಟ್ರಪತಿಗಳ ಭೇಟಿಗಾಗಿ ರಾಷ್ಟ್ರಪತಿ ಭವನಕ್ಕೆ ತೆರಳುವ ಮುನ್ನ ಕರ್ನಾಟಕ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದರಾಮಯ್ಯ, ಕರ್ನಾಟಕಕ್ಕೆ ಹೆಚ್ಚುವರಿ ಅಕ್ಕಿ ಪೂರೈಸಲು ಮೊದಲು ಒಪ್ಪಿಕೊಂಡ ಕೇಂದ್ರ ಸರ್ಕಾರ ಈಗ ರಾಜಕೀಯ ದ್ವೇಷದಿಂದ ನಿರಾಕರಿಸಿದೆ. ಕೇಂದ್ರದ ಬಿಜೆಪಿ ಸರ್ಕಾರ ಡರ್ಟಿ ಪಾಲಿಟಿಕ್ಸ್ ಮಾಡುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಈಗಾಗಲೇ ತೆಲಂಗಾಣ, ಪಂಜಾಬ್ ಸೇರಿದಂತೆ ಎಲ್ಲಾ ಕಡೆ ಕೇಳಿದ್ದೇವೆ. ಪ್ರತಿ ಕೆಜಿಗೆ 42 ರೂ. ನೀಡಿ ಆಂಧ್ರಪ್ರದೇಶದಿಂದ ತರಬಹುದು. 1 ಲಕ್ಷ ಮೆಟ್ರಿಕ್ ಟನ್ ಅಕ್ಕಿಯನ್ನು ಒಂದು ತಿಂಗಳು ಕೊಡೋಕೆ ಮಾತ್ರ ಸಾಧ್ಯ ಎಂದು ಛತ್ತೀಸ್‌ಗಢ ಹೇಳಿದೆ. ತೆಲಂಗಾಣ ಗೋಧಿ ಕೊಡುತ್ತೇವೆ ಎಂದು ಹೇಳಿದೆ. ಕರ್ನಾಟಕದಲ್ಲಿ ಬಹಳ ಅಕ್ಕಿ ಸಿಗೋಲ್ಲ. ಓಪನ್ ಮಾರ್ಕೆಟ್‌ಗೆ ಹೋಗಬೇಕು. ಟೆಂಡರ್ ಕರೀಬೇಕು. ಇದಕ್ಕೆ 2 ತಿಂಗಳಿಗೂ ಹೆಚ್ಚು ಸಮಯ ಆಗುತ್ತೆ ಎಂದರು. ಗುರುವಾರ ಎಲ್ಲವೂ ಸ್ಪಷ್ಟವಾಗಬಹುದು. ಈ ಕಾರಣದಿಂದ ಅಕ್ಕಿ ಕೊಡೋದು ಸ್ವಲ್ಪ ವಿಳಂಬ ಆಗಬಹುದು. ಕೇಂದ್ರ ಸರ್ಕಾರ ದ್ವೇಷ ರಾಜಕಾರಣ ಮಾಡಿಲ್ಲ ಎಂದಿದ್ದರೆ ಹೀಗೆ ಆಗುತ್ತಿರಲಿಲ್ಲ ಎಂದರು.

ನಾನು ಶಾಸಕರಿಂದ ಆಯ್ಕೆಯಾದ ಸಿಎಂ

ಮುಖ್ಯಮಂತ್ರಿಯಾಗಿ ಐದು ವರ್ಷ ಪೂರ್ಣ ಇರುತ್ತಾರಾ ಎಂಬ ಪ್ರತಿಪಕ್ಷಗಳ ಪ್ರಶ್ನೆಗೆ ತಮ್ಮದೇ ಧಾಟಿಯಲ್ಲಿ ಉತ್ತರ ನೀಡಿದ ಸಿದ್ದರಾಮಯ್ಯ, ನಾನು ಪ್ರಜಾಪ್ರಭುತ್ವ ವ್ಯವಸ್ಥೆಯಡಿ, ಶಾಸಕರಿಂದ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದೇನೆ. 136 ಶಾಸಕರು ನನಗೆ ಬೆಂಬಲ ನೀಡಿದ್ದಾರೆ. ನಮ್ಮದು ಮೈತ್ರಿ ಸರ್ಕಾರವಲ್ಲ. ಬೇರೆ ಯಾವುದೇ ವಿಷಯಗಳು ಉದ್ಭವಿಸಲ್ಲ. ಈ ಕುರಿತು ಪ್ರತಿಪಕ್ಷಗಳು ತಲೆಕೆಡಿಸಿಕೊಳ್ಳಬೇಕಾದ ಅಗತ್ಯವಿಲ್ಲ ಎಂದು ತಿವಿದರು.

ಸ್ವಾಭಿಮಾನಿಗಳಾದರೆ ಸತ್ಯ ಹೇಳಬಹುದು; ಡಾ.ಅಂಬೇಡ್ಕರ್ ಬಲವಾದ ನಂಬಿಕೆ

- ರಾಜ್ಯಸಭಾ ಸದಸ್ಯ ಡಾ.ಎಲ್. ಹನುಮಂತಯ್ಯ ವಿವರಣೆ
- ಮೈಸೂರಲ್ಲಿ ಡಾ.ಅಂಬೇಡ್ಕರರ 132ನೇ ಜನ್ಮ ದಿನಾಚರಣೆ



ಮೈಸೂರು, ಜೂ.21(ಜಿಎ)– ಸ್ವಾಭಿಮಾನಿಯಾದರೆ ಸತ್ಯ ಹೇಳಬಹುದು. ಹಾಗಾಗಿ ದೇಶದ ಜನ ಸ್ವಾಭಿಮಾನಿಗಳಾಗಬೇಕು ಎಂದು ಡಾ.ಬಿ.ಆರ್.ಅಂಬೇಡ್ಕರ್ ಅವರು ಆಶಿಸಿದ್ದರು ಎಂದು ರಾಜ್ಯಸಭಾ ಸದಸ್ಯ ಡಾ.ಎಲ್.ಹನುಮಂತಯ್ಯ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಮಹಾರಾಜ ಕಾಲೇಜಿನ ವತಿಯಿಂದ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 132ನೇ ಜನ್ಮ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಬ್ರಿಟಿಷರ ಆಳ್ವಿಕೆಯಲ್ಲಿ ನಡೆದ ಮೊದಲ ಮತ್ತು ಎರಡನೇ ದುಂಡು ಮೇಜಿನ ಸಭೆಯಲ್ಲಿ ಅಂಬೇಡ್ಕರ್ ಅವರು ಬ್ರಿಟಿಷರನ್ನು ಧೈರ್ಯವಾಗಿ ಪ್ರಶ್ನಿಸಿ, ಸತ್ಯ ಹೇಳುವ ಮೂಲಕ ತಮ್ಮ ಸ್ವಾಭಿಮಾನವನ್ನು ಪ್ರದರ್ಶಿಸಿ, ಅದರಂತೆ ದೇಶದ ಪ್ರತಿಯೊಬ್ಬ ಪ್ರಜೆಯೂ ಸತ್ಯ ಹೇಳಲು ಸ್ವಾಭಿಮಾನಿಗಳಾಗಿ ಎಂದು ಕರೆ ನೀಡಿದರು ಎಂದು ಸ್ಮರಿಸಿದರು.

1920ರಿಂದ 2023ರವರೆಗೂ ನಡೆದ ಅನೇಕ ಹೋರಾಟದಿಂದ ಜಾತಿಯ ಕ್ರೂರತೆ ತಗ್ಗಿದೆಯೇ ಹೊರತು ನಾಶವಾಗಿಲ್ಲ. ನಾವೆಲ್ಲಾ ಒಂದು ಎಂಬ ಭಾವನೆ ಇನ್ನೂ ಬಂದಿಲ್ಲ. ಅಸ್ಪೃಶ್ಯತೆಯ ಗಾಯ ಇಂದಿಗೂ ಮಾಸಿಲ್ಲ. ಇತ್ತೀಚೆಗೆ ಆಂಧ್ರಪ್ರದೇಶದಲ್ಲಿ ದಲಿತರನ್ನು ಮರಕ್ಕೆ ಕಟ್ಟಿ ಹಾಕಿ ಹಲ್ಲೆ ಮಾಡಿದ ಘಟನೆ ಬಗ್ಗೆ ಉಲ್ಲೇಖಿಸಿ ವಿಷಾದಿಸಿದರು.

ದೇಶದ ಬಹುದೊಡ್ಡ ಸಮಸ್ಯೆಗಳಲ್ಲಿ ಒಂದಾಗಿದ್ದ ಹಸಿವು ಇಂದು ಕಡಿಮೆಯಾಗಿದೆ. ಕೆಲವು ರಾಜ್ಯಗಳು ಹಸಿವು ಮುಕ್ತ ರಾಜ್ಯವೆಂದು ಘೋಷಣೆಯಾಗಿವೆ. ಆದರೆ ಅಸ್ಪೃಶ್ಯತೆ ಮುಕ್ತ ರಾಜ್ಯಗಳು ಎಂದು ಘೋಷಣೆಯಾಗದೇ ಇರುವುದು ಬೇಸರದ ಸಂಗತಿಯಾಗಿದೆ. ಜಾತಿ ಪದದ ಚರ್ಚೆಗಳು ಸ್ವಾತಂತ್ರ್ಯ ಪೂರ್ವದಿಂದಲೂ ನಮ್ಮಲ್ಲಿದ್ದು, ಅವುಗಳ ಬಗ್ಗೆ ಅನೇಕ ಪುಸ್ತಕಗಳು ಪ್ರಕಟವಾಗಿವೆ, ಸಂಶೋಧನೆಗಳೂ ನಡೆದಿವೆ. ಹೀಗಾಗಿ ಜಾತಿಯೂ ದೇಶದ ಬಹುಮುಖ್ಯ ವಿಚಾರವಾಗಿ ಕಾಣಿಸುತ್ತಿದೆ ಎಂದರು.

ಸಂವಿಧಾನದಲ್ಲಿ ಸಮಾನತೆ ಅವಕಾಶ ದೊರೆತ ಮೇಲೆ ದಲಿತರು ಪ್ರಧಾನಿ ಸ್ಥಾನ ಬಿಟ್ಟು ದೇಶದ ಎಲ್ಲಾ ಪ್ರಮುಖ ಹುದ್ದೆಗಳನ್ನು ಅಲಂಕರಿಸಿ, ಛಲದಿಂದ ಮುಂದೆ ಬಂದಿದ್ದಾರೆ. ಇದರಿಂದ ಕೇವಲ ಆರ್ಥಿಕವಾಗಿ ಬೆಳೆದಿದ್ದಾರೆಯೇ ಹೊರತು ಸಾಮಾಜಿಕವಾಗಿ ಮುಂದೆ ಬರಲು ಸಾಧ್ಯವಾಗಿಲ್ಲ ವ್ಯವಸ್ಥೆಯಲ್ಲಿ ಇನ್ನಷ್ಟು ಬದಲಾವಣೆಯಾಗಬೇಕಿದೆ. ಈ ರೀತಿಯ ಬದಲಾವಣೆಯ ಬಗ್ಗೆ ಚಿಂತಿಸಲು ಕಾರಣವಾಗಿದ್ದು ಅಂಬೇಡ್ಕರ್ ಚಿಂತನೆಗಳು ಎಂದು ತಿಳಿಸಿದರು.

ಜಯಂತಿಗಳ ಆಚರಣೆಯ ಜೊತೆಗೆ ಅಂಬೇಡ್ಕರ್ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು. ಅವರು ಸತ್ಯವನ್ನು ಹೇಳುವಾಗ ಎಂದಿಗೂ ಹೆದರಿಲ್ಲ. ಸ್ವಾಭಿಮಾನ ಗುಣವಿದ್ದಾಗ ಇದು ಸಾಧ್ಯವಿದೆ. ಪರಾವಲಂಬಿಯಾದರೆ ಸತ್ಯದ ಬಗ್ಗೆ ಮಾತನಾಡಲು ಧೈರ್ಯ ಸಾಲುವುದಿಲ್ಲ. ಪದವಿ ವ್ಯಾಸಂಗದ ಜೊತೆಗೆ ದೇಶ ಕಟ್ಟುವ ವಿಚಾರದ ಬಗ್ಗೆ ಮಾತನಾಡಬೇಕು. ಪದವಿ ಪೂರ್ವ ಸಮಯದಲ್ಲಿ ದಾರಿ ತಪ್ಪಿದರೆ, ದೇಶಕ್ಕೆ ಒಳಿತಾಗದು. ಅಂಬೇಡ್ಕರ್ ಅವರ ಪುಸ್ತಕಗಳನ್ನು ಹೆಚ್ಚಾಗಿ ಓದಿ ಎಂದು ಕರೆ ನೀಡಿದರು.

ಮೈಸೂರು ವಿಶ್ವವಿದ್ಯಾಲಯದ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನ ಮತ್ತು ವಿಸ್ತರಣ ಕೇಂದ್ರದ ಪ್ರಾಧ್ಯಾಪಕ ಪ್ರೊ.ಜೆ.ಸೋಮಶೇಖರ್, ಪ್ರಾಂಶುಪಾಲ ಪ್ರೊ.ಸಿ.ಎ.ಶ್ರೀಧರ್, ಆಡಳಿತಾಧಿಕಾರಿ ಪ್ರೊ.ವಿ.ಷಣ್ಮುಗಂ, ಸಂಚಾಲಕ ಪ್ರೊ.ಸಿ.ಈ.ಲೋಕೇಶ್ ಇದ್ದರು.

ಚರಿತ್ರೆಯನ್ನು ತಿಳಿಯದವರು ಮಾತ್ರ 'ಭವ್ಯ ಭಾರತ' ಎಂದು ಹೇಳುತ್ತಿದ್ದಾರೆ...

ಭಾರತ ಭವ್ಯ ಪರಂಪರೆ ಇರುವ ರಾಷ್ಟ್ರ ಎಂದು ಹೇಳುತ್ತಾರೆ. ಆದರೆ, ನಾವೆಲ್ಲರೂ ಒಗ್ಗಟ್ಟಾಗಿದ್ದರೆ ನಮ್ಮ ಮೇಲೆ ಘಜನಿ ಮೊಹಮ್ಮದ್‌ನಂತ ಹಲವರಿಂದ ಯಾವುದೇ ದಾಳಿಗಳಾಗುತ್ತಿರಲಿಲ್ಲ. ಆ ಸಂದರ್ಭದಲ್ಲಿ 565 ಸಾಮಂತರು ನಮ್ಮ ದೇಶವನ್ನು ಆಳ್ವಿಕೆ ಮಾಡುತ್ತಿದ್ದರು. ಅವರು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳುವ ವಿಚಾರಕ್ಕೆ ಯುದ್ಧಗಳನ್ನು ಮಾಡುತ್ತಿದ್ದರೇ ಹೊರತು, ಯಾರು ನಾವೆಲ್ಲರೂ ಭಾರತೀಯರು ಎಂದು ಒಗ್ಗೂಡಲಿಲ್ಲ. ಈ ಚರಿತ್ರೆಯನ್ನು ತಿಳಿಯದವರು ಮಾತ್ರ ಭವ್ಯ ಭಾರತ ಎಂದು ಹೇಳಿಕೊಂಡು ತಿರುಗುತ್ತಿದ್ದಾರೆ. ಈ ಸುಳ್ಳಿನ ಚರಿತ್ರೆಯನ್ನು ಇದುವರೆಗೂ ಪಠ್ಯ ಪುಸ್ತಕಗಳಲ್ಲಿ ಓದಿಕೊಂಡು ಬರುತ್ತಿದ್ದೇವೆ.

ಬಡವರು ವಾಸ ಮತ್ತು ಆಹಾರಕ್ಕೆ ಏನು ಮಾಡುತ್ತಿದ್ದರು ಎಂಬುದನ್ನು ನಾವು ತಿಳಿಯುವುದು ನಿಜವಾದ ಚರಿತ್ರೆಯಾಗಿದೆ. ಬಡವರಿಗೆ ಆಹಾರ ಸಿಗದ ಸಂದರ್ಭದಲ್ಲಿ ಸತ್ತ ಹಸುವನ್ನು ತಿಂದು ಜೀವ ಉಳಿಸಿಕೊಂಡರು. ಮುಂದೆ ಅದೇ ಆಹಾರ ಪದ್ಧತಿಯೂ ಮುಂದುವರೆಯಿತು. ಆದರೆ, ಈ ಚರಿತ್ರೆಯನ್ನು ತಿಳಿಯದೆ ಇಂದು ಗೋಹತ್ಯೆ ನಿಷೇಧ ಕಾಯ್ದೆ ತರಲು ಮುಂದಾಗಿದ್ದರು. ಅಂಬೇಡ್ಕರ್ ಅವರು ರಾಮಾಯಣ, ಮಹಾಭಾರತ ಮತ್ತು ಮನುಸ್ಮೃತಿ ಸೇರಿದಂತೆ ವಿವಿಧ ಧರ್ಮಗಳ ಗ್ರಂಥಗಳನ್ನು ಅಧ್ಯಯನ ಮಾಡಿ ಬರೆದಿರುವ ಅನೇಕ ಪುಸ್ತಕಗಳಲ್ಲಿ ಭಾರತದ ನಿಜವಾದ ಚರಿತ್ರೆ ತಿಳಿಸುತ್ತಾರೆ. ಅದರಲ್ಲಿ ಪ್ರಮುಖವಾಗಿ Who Were the Shudras? ಪುಸ್ತಕವನ್ನು ಅನೇಕರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಅದು ಅತೀ ಹೆಚ್ಚು ಮುದ್ರಣವಾಗಿದೆ. ರಾಮಾಯಣ ಮತ್ತು ಮಹಾಭಾರತಕ್ಕಿಂತ ಅಂಬೇಡ್ಕರ್ ಅವರ ಪುಸ್ತಕಗಳು ಹೆಚ್ಚಿನ ಖ್ಯಾತಿ ಹೊಂದಿದ್ದು, ಅವುಗಳನ್ನು ಹೆಚ್ಚು ಓದಿ. ಈ ಪುಸ್ತಕವನ್ನು ಓದದಿದ್ದರೆ ಭಾರತದ ಚರಿತ್ರೆಯ ದರ್ಶನ ಆಗುವುದಿಲ್ಲ.

ಇಂಧೋರ್‌ನಲ್ಲಿ ಮೈಸೂರು ಪಾಲಿಕೆ ಸದಸ್ಯರ ಸ್ವಚ್ಛತಾ ಅಧ್ಯಯನ



ಮೈಸೂರು,ಜೂ.21(ಎಂಕೆ)– ಮೇಯರ್ ಶಿವಕುಮಾರ್ ನೇತೃತ್ವದಲ್ಲಿ ಇಂಧೋರ್‌ಗೆ ತೆರಳಿರುವ 45 ಮಂದಿ ಪಾಲಿಕೆ ಸದಸ್ಯರ ನಿಯೋಗ ಸ್ವಚ್ಛತೆ, ಕಸ ವಿಲೇವಾರಿ ಸಂಬಂಧ ಕೈಗೊಂಡಿರುವ ಕ್ರಮಗಳ ಕುರಿತು ಅಧ್ಯಯನ ನಡೆಸಿದ್ದಾರೆ. ಬುಧವಾರ ಇಂಧೋರ್‌ನಲ್ಲಿರುವ ಸಿಎಂಡಿ ಪ್ಲಾಂಟ್, ಸಿಎನ್‌ಜಿ ಪ್ಲಾಂಟ್, ಎಸ್‌ಟಿಪಿ ಪ್ಲಾಂಟ್ ಮತ್ತು ಪ್ರತ್ಯೇಕ ಘಟಕಕ್ಕೆ ಭೇಟಿ ನೀಡಿ ಅಧ್ಯಯನ ಮಾಡಿದ್ದಾರೆ. ತ್ಯಾಜ್ಯ ವಸ್ತುಗಳಿಂದ ನೈಸರ್ಗಿಕ ಅನಿಲ ತಯಾರಿಕೆ ಕುರಿತು ಮಾಹಿತಿ ಪಡೆದುಕೊಳ್ಳಲಾಗುತ್ತಿದೆ ಎಂದು ದೂರವಾಣಿ ಮೂಲಕ ಮೇಯರ್ ಶಿವಕುಮಾರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಒಂದನೇ ಪುಟದಿಂದ

ಯೋಗ ವೈಭೋಗ

ಬೆಳಗ್ಗೆ 6 ಗಂಟೆಯಿಂದಲೇ ಯೋಗಾಸಕ್ತರು ಅರಮನೆಗೆ ಪ್ರವೇಶಿಸಿ ತಮ್ಮ ತಮ್ಮ ಜಾಗದಲ್ಲಿ ಮ್ಯಾಟ್ ಹಾಕಿ ಸಿದ್ಧತೆ ಮಾಡಿಕೊಂಡರು. ಅರಮನೆ ಹೊರ ಆವರಣ, ಕಾಡಾ ಕಚೇರಿ ಆವರಣ ಹಾಗೂ ದೊಡ್ಡಕೆರೆ ಮೈದಾನದಲ್ಲಿ ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿತ್ತು. ಪ್ರಾರ್ಥನೆ ಮೂಲಕ ಆರಂಭವಾದ ಯೋಗ ಪ್ರದರ್ಶನದಲ್ಲಿ ತಾಡಾಸನ, ವೃಕ್ಷಾಸನ, ಪಾದಹಸ್ತಾಸನ, ಅರ್ಧ ಚಕ್ರಾಸನ, ತ್ರಿಕೋನಾಸನ, ಭದ್ರಾಸನ, ಅರ್ಧ ಉಷ್ಟ್ರಾಸನ, ವಕ್ರಾಸನ, ಭುಗಂಗಾಸನ, ಪವನ ಮುಕ್ತಾಸನ, ಕಪಾಲಬತ್ತಿ, ಪ್ರಾಣಾಯಾಮ ಅಭ್ಯಾಸ ನಡೆಯಿತು. ಸಂಸದ ಪ್ರತಾಪ್ ಸಿಂಹ, ಶಾಸಕ ಟಿ.ಎಸ್. ಶ್ರೀವತ್ಸ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ. ಗಾಯತ್ರಿ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಎಸ್ಪಿ ಸೀಮಾ ಲಾಟ್ಕರ್, ಜಿಲ್ಲಾ ಆಯುಷ್ ಅಧಿಕಾರಿ ಡಾ.ಪುಷ್ಪಾ, ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಗಜಾನನ ಹೆಗ್ಡೆ, ಜೆಎಸ್‌ಎಸ್‌ಎಸ್ ಸಂಸ್ಥೆಯ ಶ್ರೀಹರಿ, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ ಹಾಗೂ ಇತರರು ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಎಲ್ಲಾ ಇಲಾಖೆ, ನಿಗಮ ಮಂಡಳಿ, ಪ್ರಾಧಿಕಾರಗಳ ಅಧಿಕಾರಿ, ಸಿಬ್ಬಂದಿ ವಿವಿಧ ಕಾಲೇಜು ವಿದ್ಯಾರ್ಥಿಗಳು, ವಿವಿಧ ಯೋಗ ಶಿಕ್ಷಣ ಸಂಸ್ಥೆಗಳು, ಸಂಘ ಸಂಸ್ಥೆಗಳ ಸದಸ್ಯರು, ಯೋಗಾಸಕ್ತರು, ಸಾರ್ವಜನಿಕರು ಅಂತರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದರು. ಆಯುಷ್ ಇಲಾಖೆಯಿಂದ ಎಲ್ಲರಿಗೂ ಉಪಹಾರ ವ್ಯವಸ್ಥೆ ಮಾಡಲಾಗಿತ್ತು.

ಅರಮನೆ ಭದ್ರತಾ ವಿಭಾಗ, ದೇವರಾಜ ಮತ್ತು ಕೆ.ಆರ್. ಠಾಣೆ ಪೊಲೀಸರು ಅರಮನೆ ಆವರಣದಲ್ಲಿ ನಡೆದ ಯೋಗ ಪ್ರದರ್ಶನಕ್ಕೆ ಬಂದೋಬಸ್ತ್ ಒದಗಿಸಿದ್ದರು.

ಗಿನ್ನಿಸ್ ದಾಖಲೆಗೆ ಸೇರ್ಪಡೆ

ಸ್ವಯಂ ಸಾಂಗತ್ಯ, ಇತರರೊಂದಿಗೆ ಮತ್ತು ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಬದುಕಲು ಇರುವ ಮಾರ್ಗ ಯೋಗ ಎಂದು ಹೇಳಿದ ಮೋದಿ, ಯೋಗದ ಮೂಲಕ ಒಬ್ಬರು ಆರೋಗ್ಯ, ಚೈತನ್ಯ ಮತ್ತು ಶಕ್ತಿಯನ್ನು ಪಡೆದುಕೊಳ್ಳುತ್ತಾರೆ. ಹಲವು ವರ್ಷಗಳಿಂದ ಯೋಗಭ್ಯಾಸದಲ್ಲಿ ತೊಡಗಿರುವವರು ಅದರ ಶಕ್ತಿಯನ್ನು ಅನುಭವಿಸುತ್ತಾರೆ ಎಂದು ಗ್ರಂಥಗಳನ್ನು ಉಲ್ಲೇಖಿಸಿ ಹೇಳಿದರು. ವ್ಯಕ್ತಿಗಳು ಮತ್ತು ಕುಟುಂಬಗಳ ಹಂತದ ಉತ್ತಮ ಆರೋಗ್ಯದ ಮಹತ್ವವನ್ನು ಒತ್ತಿ ಹೇಳಿದ ಅವರು, ಯೋಗ ಆರೋಗ್ಯಪೂರ್ಣ ಮತ್ತು ಶಕ್ತಿಯುತ ಸಮಾಜವನ್ನು ನಿರ್ಮಿಸಲಿದ್ದು, ಯೋಗಾಭ್ಯಾಸದಲ್ಲಿ ಸಾಮೂಹಿಕ ಶಕ್ತಿ ಹೆಚ್ಚಾಗಿರುತ್ತದೆ ಎಂದು ಹೇಳಿದರು.

ಅರ್ಜಿ ಸಲ್ಲಿಕೆಗೆ ಅವಕಾಶ

ಮಾಹಿತಿ ಮತ್ತು ದಾಖಲೆ ನೈಜವಾಗಿದ್ದರೆ ಅಂಥವರಿಗೆ ಆಗಸ್ಟ್ ತಿಂಗಳಲ್ಲೇ ಎರಡು ಸಾವಿರ ದೊರೆಯಲು ಪ್ರಾರಂಭವಾಗುತ್ತದೆ. ಆದಾಯ ತೆರಿಗೆ ಮತ್ತು ಜಿಎಸ್‌ಟಿ ಪಾವತಿ ಮಾಡುವವರನ್ನು ಈ ಯೋಜನೆಯಿಂದ ಹೊರಗಿಟ್ಟಿರುವ ಸರ್ಕಾರ, ಉಳಿದಂತೆ ಎಪಿಎಲ್, ಬಿಪಿಎಲ್ ಎನ್ನದೆ, ಎಲ್ಲಾ ಮನೆ ಒಡತಿಯರು ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಬ್ಯಾಂಕ್ ಖಾತೆ ಹಾಗೂ ಆಧಾರ್ ಸಂಖ್ಯೆ ಹೊಂದಾಣಿಕೆ ಮಾಡಬೇಕು. ಜೊತೆಗೆ ಪಡಿತರ ಚೀಟಿಯನ್ನೂ ಹೊಂದಿರಬೇಕು.

ಪತಿಯ ಆಧಾರ್ ಸಂಖ್ಯೆಯನ್ನು ಅರ್ಜಿಯಲ್ಲಿ ನಮೂದಿಸಬೇಕು. ಅರ್ಜಿ ಸಲ್ಲಿಸಲು ಕೊನೆಯ ದಿನ ಇರುವುದಿಲ್ಲ. ಹಾಗಾಗಿ ಎಲ್ಲರೂ ಏಕಕಾಲಕ್ಕೆ ಅರ್ಜಿ ಸಲ್ಲಿಸಲು ಮುಗಿ ಬೀಳುವುದು ತಪ್ಪುತ್ತದೆ. ನಗರ ಪ್ರದೇಶ ಮತ್ತು ಅಕ್ಷರಸ್ಥರು ಫೋನ್ ಇಲ್ಲವೆ ಕಂಪ್ಯೂಟರ್ ಮೂಲಕ ಅರ್ಜಿ ಸಲ್ಲಿಸಬಹುದು. ಅನಕ್ಷರಸ್ಥರು ಮತ್ತು ಗ್ರಾಮೀಣ ಪ್ರದೇಶದವರಿಗೆ ಅರ್ಜಿ ಸಲ್ಲಿಸಲು ತೊಂದರೆಯಾಗುವುದನ್ನು ತಪ್ಪಿಸಲು 'ಜನಸೇವಕ'ರನ್ನು ಸರ್ಕಾರ ನೇಮಿಸುತ್ತಿದೆ.

ಪ್ರತಿ ಪಂಚಾಯ್ತಿಗೆ 5 ಜನ ಸೇವಕರಿದ್ದು, ಅವರು ಆ ಪ್ರದೇಶ ವ್ಯಾಪ್ತಿಯ ಗ್ರಾಮಗಳ ಪ್ರತಿ ಮನೆಗೆ ತೆರಳಿ ಮನೆಯೊಡತಿ ಗುರುತಿಸಿ ಅವರಿಂದ ದಾಖಲೆಗಳನ್ನು ಪಡೆದು ಅಲ್ಲಿಯೇ ಗೃಹಲಕ್ಷ್ಮಿ ಯೋಜನೆಗೆ ಅಪ್‌ಲೋಡ್ ಮಾಡಲಿದ್ದಾರೆ.

ಗ್ರಾಮೀಣ ಭಾಗದವರು ಆತಂಕಪಡುವ ಅಗತ್ಯವಿಲ್ಲ. ಮನೆಯ ಬಾಗಿಲಲ್ಲೇ ಈ ಸೇವೆ ಪಡೆದುಕೊಂಡು ಎರಡು ಸಾವಿರ ರೂ. ಮಾಸಿಕ ಹಣ ಪಡೆಯಬಹುದು.

ಕಳೆದ ಶುಕ್ರವಾರವೇ ಈ ಯೋಜನೆಗೆ ಚಾಲನೆ ನೀಡಬೇಕಿತ್ತು. ಆದರೆ, ಅರ್ಜಿ ಸಲ್ಲಿಸಲು ಏಕಕಾಲಕ್ಕೆ ಮುಂದಾಗುವುದರಿಂದ ತೊಂದರೆ ಉಂಟಾಗಿ ಸರ್ಕಾರದ ವಿರುದ್ಧ ಮುಗಿ ಬೀಳುತ್ತಾರೆ ಎಂಬುದನ್ನು ಗಮನದಲ್ಲಿರಿಸಿಕೊಂಡು, ಗುರುವಾರ ನಡೆದ ಸಂಪುಟ ಸಭೆಯು ಯೋಜನೆ ಅನುಷ್ಠಾನ ಎರಡು ದಿನ ವಿಳಂಬವಾದರೂ ಸರಿ, ಪ್ರತ್ಯೇಕ ಆ್ಯಪ್ ಅಭಿವೃದ್ಧಿಪಡಿಸಿ ಅದರ ಮೂಲಕ ಅರ್ಜಿ ಸಲ್ಲಿಸಲು ಸರ್ಕಾರ ತೀರ್ಮಾನಿಸಿತ್ತು. ಅದರಂತೆ ಹೊಸ ಆ್ಯಪ್ ಸಿದ್ಧಪಡಿಸುವುದು ಹಾಗೂ ಯೋಜನೆ ಅನುಷ್ಠಾನದ ಹೊಣೆಯನ್ನು ಹಿರಿಯ ಐಎಎಸ್ ಅಧಿಕಾರಿ ಪೊನ್ನುರಾಜ್ ಅವರಿಗೆ ವಹಿಸಲಾಗಿತ್ತು.

ಪ್ರತಿಯೊಬ್ಬರಲ್ಲೂ ಪರಿಸರ ಪ್ರಜ್ಞೆ ಇರಬೇಕು

ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯ



ಮೈಸೂರು, ಜೂ.21(ಜಿಎ)–ನಮ್ಮ ಸುತ್ತಲಿನ ಪರಿಸರ ಸರ್ವರೀತಿಯಲ್ಲೂ ಸ್ವಚ್ಛವಾಗಿದ್ದಲ್ಲಿ, ಪರಿಶುದ್ಧವಾಗಿದ್ದಲ್ಲಿ ಆರೋಗ್ಯಲಕ್ಷ್ಮಿ ಇರುತ್ತಾಳೆ. ಎಲ್ಲಾ ಭಾಗ್ಯಗಳಿಗಿಂತಲೂ ಆರೋಗ್ಯಭಾಗ್ಯ ದೊಡ್ಡದೆಂದು ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟರು.

ನಗರದ ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘವು ಆಷಾಢ ಮಾಸದ ಅಂಗವಾಗಿ ಬುಧವಾರ ಚಾಮುಂಡಿಬೆಟ್ಟದ ಪಾದದ ಬಳಿ ಆಯೋಜಿಸಿದ್ದ ಬೆಟ್ಟದ ಮೆಟ್ಟಿಲುಗಳ ಸ್ವಚ್ಛತಾ ಕಾರ್ಯ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ನಮ್ಮ ಪರಿಸರ, ಸೇವಿಸುವ ಆಹಾರ, ಕುಡಿಯುವ ನೀರು, ಹಾಗೂ ಉಸಿರಾಡುವ ಗಾಳಿ ಇದೆಲ್ಲವೂ ಶುದ್ಧವಾಗಿದ್ದು ನಾವೆಲ್ಲರೂ ಆರೋಗ್ಯವಾಗಿರಬೇಕೆಂದರೆ ಪ್ರತಿಯೊಬ್ಬರಲ್ಲೂ ಸ್ವಚ್ಛತೆಯ ಪರಿಸರ ಪ್ರಜ್ಞೆ ಇರಬೇಕು. ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ವಚ್ಛ ಪರಿಸರಕ್ಕೆ ಆದ್ಯತೆ ನೀಡಿದ್ದರು. ಇದು ಇವತ್ತಿಗೂ ಆದರ್ಶವಾಗಬೇಕಿದೆ ಎಂದರು.

ಸ್ವಚ್ಛತೆ ಎಂದರೆ ಕೇವಲ ಕಸ ತೆಗೆಯುವುದಷ್ಟೇ ಅಲ್ಲ ಜಲಮಾಲಿನ್ಯ, ಭೂ ಮಾಲಿನ್ಯ ವಾಯುಮಾಲಿನ್ಯ, ಹಾಗೂ ಶಬ್ದಮಾಲಿನ್ಯ ಸೇರಿದಂತೆ ಪ್ರತಿಯೊಂದು ಮಾಲಿನ್ಯವನ್ನೂ ತೊಡೆದು ಹಾಕುವುದರ ಜೊತೆಗೆ ಮನುಷ್ಯನ ಮನೋಮಾಲಿನ್ಯವನ್ನು ಸ್ವಇಚ್ಛೆಯಿಂದ ಅವರಿಗವರೇ ಶುದ್ಧೀಕರಿಸಿಕೊಳ್ಳಬೇಕು. ಏಕೆಂದರೆ ಇಂದು ರಾಜಕಾರಣ ಸೇರಿದಂತೆ ಪ್ರತಿಯೊಂದು ಸಾರ್ವಜನಿಕ ಕ್ಷೇತ್ರಗಳು ಕೂಡ ಬಹುಪಾಲು ಅಶುಚಿತ್ವದಿಂದ ಕೂಡಿ ರೋಗಗ್ರಸ್ತವಾಗುತ್ತಿವೆ. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಯೂ ಸ್ವಚ್ಛ ಪರಿಸರದ ಮಹತ್ವವನ್ನು ಅರಿತು ಮೊದಲು ತಮ್ಮನ್ನು ತಾವು ಶುದ್ಧೀಕರಿಸಿಕೊಂಡರೆ ಇಡೀ ಪರಿಸರ ಸ್ವಚ್ಛವಾಗುತ್ತದೆ ಎಂದು ತಿಳಿಸಿದರು.

ಇಂತಹ ಸ್ವಚ್ಛತೆಯ ಕೈಂಕರ್ಯಕ್ಕೆ ಕೈಜೋಡಿಸಿ ಪ್ರಾಮಾಣಿಕವಾಗಿ ಶ್ರಮಿಸುತ್ತಿರುವ ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘವು ಇತರೆ ಸಂಘಟನೆಗಳಿಗೆ ಮಾದರಿಯಾಗಿದೆಯೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನೂರಕ್ಕೂ ಹೆಚ್ಚು ಸದಸ್ಯರು ಚಾಮುಂಡಿ ಬೆಟ್ಟದಲ್ಲಿನ ಸಾವಿರ ಮೆಟ್ಟಿಲುಗಳನ್ನೂ ಸ್ವಚ್ಛಗೊಳಿಸಿ ಭಕ್ತಾದಿಗಳ ಹಾಗೂ ಸಾರ್ವಜನಿಕರ ಪ್ರಶಂಸೆಗೆ ಪಾತ್ರರಾದರು. ಇದೇ ಸಂದರ್ಭದಲ್ಲಿ ಸಾಹಿತಿ ಬನ್ನೂರು ಕೆ.ರಾಜು ಮತ್ತು ವಿಶ್ರಾಂತ ಇಂಜಿನಿಯರ್ ಕೆಂಪೇಗೌಡ ಹಾಗೂ ಕಾನೂನು ಸಲಹೆಗಾರ ಸುಂದರ್‌ರಾಜ್ ಅವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಜಯನಗರ ಎಸ್.ಮಹೇಶ್, ಪ್ರಧಾನ ಕಾರ್ಯದರ್ಶಿ ಎಂ.ರವಿಕುಮಾರ್, ಸಹ ಕಾರ್ಯದರ್ಶಿ ಎಸ್.ಪಳನಿಸ್ವಾಮಿ, ಖಜಾಂಚಿ ಎಂ.ಪ್ರಕಾಶ್, ನಿರ್ದೇಶಕರಾದ ಚಂದ್ರೇಗೌಡ, ರುದ್ರಸ್ವಾಮಿ, ಮೊಹಮದ್ ಜಾಕಿರ್ ಹುಸೇನ್, ಶಿವರಾಜ್, ಯೋಗೇಶ್ ಹೆಬ್ಬಾಳು, ಹಿರಿಯ ಸದಸ್ಯರಾದ ಬಸವರಾಜು, ಕುಮಾರ್, ಸಿದ್ದರಾಜು, ಕಾಳೇಗೌಡ, ಮುನಿರತ್ನ, ಮಹದೇವು, ಕೃಷ್ಣ ಹಾಗೂ ಛಾಯಾಗ್ರಾಹಕ ಅನಿಲ್ ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರಿಗೆ ಹುಟ್ಟುಹಬ್ಬದ ಪ್ರಯುಕ್ತ ಶುಭ ಕೋರಿ, ಜೂನ್ 27ರಂದು ನಡೆಯಲಿರುವ ನಾಡಪ್ರಭು ಕೆಂಪೇಗೌಡರ ಜಯಂತಿಗೆ ಮೈಸೂರು ಹಾಗೂ ಚಾಮರಾಜನಗರ ಒಕ್ಕಲಿಗರ ಸಂಘದ ವತಿಯಿಂದ ಆಹ್ವಾನ ನೀಡಲಾಯಿತು. ಈ ವೇಳೆ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ. ಮರಿಸ್ವಾಮಿ, ಪ್ರಧಾನ ಕಾರ್ಯದರ್ಶಿ ಚೇತನ್, ಸಹಕಾರ್ಯದರ್ಶಿ ಜಯರಾಮ್, ಖಜಾಂಚಿ ಲೋಕೇಶ್, ನಿರ್ದೇಶಕರಾದ ಎ ರವಿಗುರುರಾಜ್, ಕೆ ಪಿ ನಾಗಣ್ಣ ಉಮೇಶ್, ಗಿರೀಶ್ ಗೌಡ, ಮೈಮುಲ್ ನಿರ್ದೇಶಕ ಉಮಾಶಂಕರ್, ಮುಖಂಡರಾದ ರಾಜಕುಮಾರ್, ದೀಪಕ್ ಗೌಡ, ನೇಹಾ ನೈನಾ ಉಪಸ್ಥಿತರಿದ್ದರು.

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಆಹ್ವಾನ

ಮೈಸೂರು,ಜೂ.21– 2023–24 ನೇ ಸಾಲಿನ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ (ಪಿ.ಯು.ಸಿ ಮತ್ತು ಪಿ.ಯು.ಸಿ ಸಮಾನಾಂತರ ವಿದ್ಯಾರ್ಥಿಗಳಿಗೆ) ಹೊಸ ಪ್ರವೇಶಾತಿ ಪಡೆಯಲು ಬಯಸುವ ಪ.ಜಾತಿ/ ಪ.ವರ್ಗದ ಹಾಗೂ ಪ್ರವರ್ಗ–1 2ಎ, 2ಬಿ, 3ಎ, 3ಬಿ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆಗೆ ಅರ್ಜಿ ಆಹ್ವಾನಿಸಲಾಗಿದ್ದು https://shp.karnataka.gov.in ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಜುಲೈ 15 ಆಗಿರುತ್ತದೆ.

ಎಸ್.ಸಿ., ಎಸ್.ಟಿ ಮತ್ತು ಪ್ರವರ್ಗ–1 ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ಮಿತಿ 2.50 ಲಕ್ಷ ಆಗಿರಬೇಕು. ಪ್ರವರ್ಗ–2ಎ, 2ಬಿ, 3ಎ, 3ಬಿ ಹಾಗೂ ಹಿಂದುಳಿದ ವರ್ಗ ಇತರೆ ಜನಾಂಗದ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ 1 ಲಕ್ಷ ಮೀರರಬಾರದು. ಹೆಚ್ಚಿನ ಮಾಹಿತಿಗಾಗಿ ಒಂಟಿಕೊಪ್ಪಲಿನ ಪಡುವಾರಹಳ್ಳಿಯಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಕಚೇರಿ ಅಥವಾ ದೂ.ಸಂ.0821–2520910 ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ದರ ಏರಿಕೆ ವಿರುದ್ಧ ಕರ್ನಾಟಕ ಬಂದ್‌ಗೆ ಮೈಸೂರು ಹೋಟೆಲ್ ಮಾಲೀಕರ ಬೆಂಬಲ ಇಲ್ಲ

ಮೈಸೂರು, ಜೂ.21(ಬಿಎಲ್‌ಯು)– ವಿದ್ಯುತ್ ದರ ಹೆಚ್ಚಳ ವಿರೋಧಿಸಿ ಕೈಗಾರಿಕೋದ್ಯಮಿಗಳು ಕರೆ ನೀಡಿರುವ ಕರ್ನಾಟಕ್ ಬಂದ್‌ಗೆ ಬೆಂಬಲ ನೀಡದಿರಲು ಮೈಸೂರಿನ ಹೋಟೆಲ್ ಮಾಲೀಕರು ತೀರ್ಮಾನ ಮಾಡಿದ್ದಾರೆ.

ಈ ಕುರಿತು ಮಾಹಿತಿ ನೀಡಿದ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಅವರು, ವಿದ್ಯುತ್ ದರ ಹೆಚ್ಚಳ ಸೇರಿದಂತೆ ಹಲವು ವಸ್ತುಗಳ ಬೆಲೆ ಏರಿಕೆಯಿಂದ ಹೋಟೆಲ್ ಉದ್ಯಮ ಈಗಲೇ ಸಂಕಷ್ಟ ಎದುರಿಸುತ್ತಿದೆ. ಹೀಗಿರುವಾಗ ನಾವು ಬಂದ್ ಮಾಡುತ್ತಾ ಕೂತರೆ ಮತ್ತಷ್ಟು ನಷ್ಟವಾಗುತ್ತದೆ ಎಂದಿದ್ದಾರೆ.

ವಿದ್ಯುತ್ ದರ ಹೆಚ್ಚಳ ಆದೇಶವನ್ನು ವಾಪಸು ಪಡೆಯುವಂತೆ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದೇವೆ. ಮತ್ತೊಮ್ಮೆ ಭೇಟಿ ಮಾಡಿ ಮನವಿ ಸಲ್ಲಿಸುತ್ತೇವೆ. ಇದನ್ನು ಬಿಟ್ಟು ಬಂದ್ ಮಾಡಿದರೆ ನಮ್ಮ ಬೇಡಿಕೆ ಈಡೇರುವುದಿಲ್ಲ. ಈ ನಿಟ್ಟಿನಲ್ಲಿ ಕರ್ನಾಟಕ ಬಂದ್ ಮಾಡುವುದರಿಂದ ಯಾವುದೇ ಪ್ರಯೋಜನ ಆಗುವುದಿಲ್ಲ. ಈ ವಾಸ್ತವತೆ ಅರಿತು ಮೈಸೂರಿನ ಹೋಟೆಲ್ ಮಾಲೀಕರು ಕರ್ನಾಟಕ ಬಂದ್‌ಗೆ ಬೆಂಬಲ ನೀಡಬಾರದೆಂದು ತೀರ್ಮಾನ ಮಾಡಿದ್ದೇವೆ ಎಂದು ಸ್ಪಷ್ಟಪಡಿಸಿದ್ದಾರೆ.



ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರ ಹುಟ್ಟುಹಬ್ಬದ ಅಂಗವಾಗಿ ವಾರ್ಡ್ ನಂಬರ್ 23ರ ಸರ್ಕಾರಿ ಮಹಾರಾಣಿ ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ಬಿಜೆಪಿ ಮುಖಂಡರಾದ ಆರ್. ಪರಮೇಶ, ಜಿ.ಎಂ. ಪಂಚಾಕ್ಷರಿ ನೇತೃತ್ವದಲ್ಲಿ ನೋಟ್ ಪುಸ್ತಕ, ಲೇಖನಿ ಸಾಮಗ್ರಿಗಳು ಹಾಗೂ ಸಿಹಿ ವಿತರಿಸಲಾಯಿತು. ಈ ವೇಳೆ ಶಾಲೆಯ ಶಿಕ್ಷಕಿಯರು, ಬಿಜೆಪಿ ಮುಖಂಡರಾದ ಸುರೇಂದ್ರ, ಶ್ರೀನಿವಾಸ್, ಪ್ರಮೋದ್, ಶ್ರವಣ್, ನಾಗೇಶ್, ಮಂಜುನಾಥ್, ಕೆಂಪರಾಜು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಆಷಾಢ ಮಾಸದ ಮೊದಲ ಶುಕ್ರವಾರ: ಚಾಮುಂಡಿ ಭಕ್ತರಿಗೆ ಮ್ಯಾಂಗೋ ಬರ್ಫಿ, ಲಾಡು ಪ್ರಸಾದ



- ಚಾಮುಂಡಿಬೆಟ್ಟದಲ್ಲಿ ಜೂ.23ರಂದು ಮೊದಲ ಶುಕ್ರವಾರದ ಪೂಜಾ ಮಹೋತ್ಸವ
- ಚಾಮುಂಡೇಶ್ವರಿ ಸೇವಾ ಸಮಿತಿಯಿಂದ 25 ಸಾವಿರ ಮ್ಯಾಂಗೋ ಬರ್ಫಿ ತಯಾರಿ

ಮೈಸೂರು, ಜೂ.21(ಎಂಟಿವೈ)– ಆಷಾಢ ಮಾಸದ ಮೊದಲ ಶುಕ್ರವಾರದಂದು ಚಾಮುಂಡಿಬೆಟ್ಟದಲ್ಲಿ ಭಕ್ತರಿಗೆ ಮಾವಿನಹಣ್ಣಿನ ಬರ್ಫಿ ಹಾಗೂ ಲಾಡು ಪ್ರಸಾದ ಸಿದ್ಧವಾಗಿದೆ. ಜೂ.23ರಂದು ಬೆಟ್ಟಕ್ಕೆ ಬರುವ ಭಕ್ತರಿಗೆ ಚಾಮುಂಡೇಶ್ವರಿ ಸೇವಾ ಸಮಿತಿಯ ಸದಸ್ಯರು ಅನ್ನಸಂತರ್ಪಣೆಯೊಂದಿಗೆ ಈ ವಿಶೇಷ ಸಿಹಿ ವಿತರಿಸಲಿದ್ದಾರೆ.



ಕಳೆದ ಹಲವು ವರ್ಷಗಳಿಂದ ಚಾಮುಂಡೇಶ್ವರಿ ಸೇವಾ ಸಮಿತಿ ವತಿಯಿಂದ ಆಷಾಢ ಮಾಸದ ಮೊದಲ ಶುಕ್ರವಾರ ಚಾಮುಂಡಿ ಬೆಟ್ಟದ ದೇವಾಲಯದಲ್ಲಿ ಅಲಂಕಾರ, ಭಕ್ತರಿಗೆ ಅನ್ನಸಂತರ್ಪಣೆ ಮಾಡುತ್ತಾ ಬಂದಿದ್ದು, ಈ ಬಾರಿಯೂ ಸೇವೆ ಮುಂದುವರೆಸಿದೆ. ಸಮಿತಿ ಸದಸ್ಯರು ಹಾಗೂ ದಾನಿಗಳ ನೆರವಿನಿಂದ ಮೊದಲ ಶುಕ್ರವಾರದ ವಿಶೇಷ ಪೂಜೆಗೆ ದಾಸೋಹಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಈ ಬಾರಿ ಅನ್ನಸಂತರ್ಪಣೆಯೊಂದಿಗೆ ಈ ವಿಶೇಷ ಸಿಹಿ ತಿನಿಸು ನೀಡಲು ನಿರ್ಧರಿಸಲಾಗಿದೆ.

ಉಪಾಹಾರ: ಜೂ.23ರಂದು ಚಾಮುಂಡಿ ಬೆಟ್ಟದಲ್ಲಿ ಬೆಳಗ್ಗೆ 6 ರಿಂದ 9 ಗಂಟೆವರೆಗೆ ಉಪಾಹಾರ, ನಂತರ ಮಧ್ಯಾಹ್ನ 2.30ರವರೆಗೆ ಭೋಜನದ ವ್ಯವಸ್ಥೆ ಮಾಡಲಾಗಿದೆ. ಉಪಾಹಾರಕ್ಕೆ ಪೈನಾಪಲ್ ಕೇಸರಿಬಾತ್, ಪೊಂಗಲ್, ಗೊಜ್ಜು, ರವಾಬಾತ್ ನೀಡಲಾಗುತ್ತದೆ.

ಭೋಜನ: ಬೆಟ್ಟದಲ್ಲಿರುವ ಪಾರ್ಕಿಂಗ್ ಸ್ಥಳದಲ್ಲಿ ಭಕ್ತರಿಗೆ ಭೋಜನದ ವ್ಯವಸ್ಥೆ ಮಾಡಲಾಗಿದೆ. ಬೆಳಗ್ಗೆ 9.30ರಿಂದ ಭಕ್ತರಿಗೆ ಹಪ್ಪಳ, ಉಪ್ಪಿನಕಾಯಿ, ಕೋಸಂಬರಿ, ಪಲ್ಯ, ಬಿಸಿಬೇಳೆ ಬಾತ್, ಅನ್ನ–ಸಾಂಬರ್, ಮೊಸರು ಒಳಗೊಂಡ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ. ಅದರೊಂದಿಗೆ ಮ್ಯಾಂಗೋ ಬರ್ಫಿ ನೀಡಲಾಗುತ್ತದೆ.

ಸೇವೆಗೆ ಸಿದ್ಧತೆ: ಚಾಮುಂಡೇಶ್ವರಿ ಸೇವಾ ಸಮಿತಿ ಸದಸ್ಯ ಎಸ್.ವಿ.ನಾಗೇಶ್ ಮಾತನಾಡಿ, ಆಷಾಢ ಮಾಸದ ಮೊದಲ ಶುಕ್ರವಾರದ ಪೂಜಾ ಮಹೋತ್ಸವಕ್ಕೆ ನಮ್ಮ ಸೇವಾ ಸಮಿತಿ ಸದಸ್ಯರು ಹಾಗೂ ದಾನಿಗಳು ನೆರವು ನೀಡಿದ್ದಾರೆ. ಈಗಾಗಲೇ ಮ್ಯಾಂಗೋ ಬರ್ಫಿ ತಯಾರಿಸುವ ಕಾರ್ಯ ನಡೆಯುತ್ತಿದೆ. ಬರ್ಫಿ ತಯಾರಿಸಲು ಬೇಕಾದ ಸಾಮಗ್ರಿಗಳನ್ನು ಅರುಣ್‌ಕುಮಾರ್ ಜೈನ್ ನೀಡಿದ್ದರೆ, ಆತಿಥ್ಯ ಕೇಟರ್ಸ್ ರವೀಂದ್ರನಾಥ್ ಅವರ ತಂಡ ಬರ್ಫಿ ತಯಾರಿಸಿ ಕೊಡುತ್ತಿದ್ದಾರೆ ಎಂದು ತಿಳಿಸಿದರು.

ಮ್ಯಾಂಗೋ ಬರ್ಫಿ

ಮೈಸೂರಿನ ವಿಶ್ವೇಶ್ವರಯ್ಯ ನಗರದ ಬಳಿಯಿರುವ ಕಲ್ಯಾಣ ಮಂಟಪದಲ್ಲಿ 8 ಬಾಣಸಿಗರಿಂದ ಮ್ಯಾಂಗೋ ಬರ್ಫಿ ತಯಾರಿಸಲಾಗುತ್ತಿದೆ. 25 ಸಾವಿರ ಬರ್ಫಿ ತಯಾರಿಸಲು ಉದ್ದೇಶಿಸಲಾಗಿದ್ದು, ಇನ್ನೆರಡು ದಿನದಲ್ಲಿ ಮ್ಯಾಂಗೋ ಬರ್ಫಿ ತಯಾರಾಗಲಿದೆ. ಇದಕ್ಕಾಗಿ ಮೈದಾ 30 ಕೆಜಿ, ಖೋವಾ 200 ಕೆಜಿ, ಸಕ್ಕರೆ 400 ಕೆಜಿ, ಮಾವಿನಹಣ್ಣಿನ ಪಲ್ಪ್ 100 ಲೀಟರ್, ಪಿಸ್ತಾ 3 ಕೆಜಿ, ಬಾದಾಮಿ 5 ಕೆಜಿ, ನಂದಿನಿ ತುಪ್ಪ 2 ಟನ್ ಹಾಗೂ 300 ಕೆಜಿ ನಂದಿನಿ ಹಾಲಿನಪುಡಿಯನ್ನು ಬಳಸಲಾಗುತ್ತಿದೆ. ಇದರೊಂದಿಗೆ ಸಣ್ಣ ಗಾತ್ರದ ಸಾವಿರಾರು ಲಾಡು ತಯಾರಿಸಲಾಗುತ್ತಿದೆ.

ಮೈಸೂರು ಅರಮನೆ ಅಂಗಳದಲ್ಲಿ ಯೋಗ ವೈಭೋಗ





ಯೋಗ ಮಾನಸಿಕ, ದೈಹಿಕ ಆರೋಗ್ಯ ವೃದ್ಧಿಸುತ್ತದೆ

ಸಂಸದ ಪ್ರತಾಪ್‌ಸಿಂಹ ಅಭಿಮತ

ಮೈಸೂರು, ಜೂ. 21(ಆರ್‌ಕೆ)– ಯೋಗಾಭ್ಯಾಸ ಮಾಡುವುದರಿಂದ ಮನುಷ್ಯನ ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ಧಿಯಾಗುತ್ತದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಮೈಸೂರಿನ ಅರಮನೆ ಆವರಣದಲ್ಲಿ ಇಂದು ನಡೆದ 9ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 2015ರಲ್ಲಿ ಯೋಗವನ್ನು ವಿಶ್ವ ಮಟ್ಟಕ್ಕೆ ಪ್ರಸರಿಸಿದರು. ಅದಕ್ಕಾಗಿ ಜೂನ್ 21ನ್ನು ಅಂತರರಾಷ್ಟ್ರೀಯ ಯೋಗ ದಿನವನ್ನಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಈ ಹೊಸ ಪ್ರಯೋಗಕ್ಕೆ ಪ್ರಪಂಚದ ಬಹುತೇಕ ರಾಷ್ಟ್ರಗಳು ಒಪ್ಪಿಗೆ ನೀಡಿದವು. ಅಂದಿನಿಂದ ಪ್ರತೀ ವರ್ಷ ಜೂನ್ 21 ರಂದು ಭಾರತ ಸೇರಿದಂತೆ ಪ್ರಪಂಚದಾದ್ಯಂತ ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಗುತ್ತಿದೆ ಎಂದು ಪ್ರತಾಪ್ ಸಿಂಹ ನುಡಿದರು. ಈ ಸಂದರ್ಭ ಮಾತನಾಡಿದ ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಯೋಗಕ್ಕೆ ಇಷ್ಟೊಂದು ಮಹತ್ವ ಇದೆ ಎಂಬುದು ವರನಟ ಡಾ. ರಾಜ್‌ಕುಮಾರ್ ಅವರಿಂದ ತಿಳಿಯಿತು. ಹಲವರಿಗೆ ಯೋಗಾಭ್ಯಾಸ ಮಾಡಲೂ ಅವರೇ ಪ್ರೇರಣೆ. ಯೋಗದಿಂದ ಮಾನಸಿಕ ಒತ್ತಡ ಕಡಿಮೆಯಾಗುತ್ತದೆಯಲ್ಲದೆ, ದಿನವಿಡೀ ಉಲ್ಲಾಸದಿಂದಿರಲು ಸಾಧ್ಯವಾಗುತ್ತದೆ ಎಂದರು. ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಮಾತನಾಡಿ, ಸನಾತನ ಋಷಿಮುನಿಗಳು ಯೋಗ, ಧ್ಯಾನವನ್ನು ಜಗತ್ತಿಗೆ ಪರಿಚಯಿಸಿದರು. ಇದೀಗ ವಿಶ್ವದ 186 ರಾಷ್ಟ್ರಗಳಲ್ಲಿ ಯೋಗ ಪ್ರಮುಖ ಸ್ಥಾನ ಪಡೆದಿದೆ. ಭಾರತದಲ್ಲೂ ಯೋಗ ವನ್ನು ಪ್ರತಿಯೊಬ್ಬರೂ ಅಭ್ಯಾಸ ಮಾಡುವ ಮೂಲಕ ಆರೋಗ್ಯವನ್ನು ಸುಸ್ಥಿತಿಯಲ್ಲಿರಿಸಿಕೊಳ್ಳಲು ಮುಂದಾಗಿರುವುದು ಒಳ್ಳೆಯ ಬೆಳವಣಿಗೆ ಎಂದರು. ಡಿಸಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಮೈಸೂರು ಯೋಗಕ್ಕೆ ಖ್ಯಾತಿಯಾಗಿದ್ದು, ದೇಶ–ವಿದೇಶಗಳಿಂದ ಮೈಸೂರಿಗೆ ಬರುತ್ತಿದ್ದಾರೆ. ಯೋಗ ತರಬೇತಿ ಸಂಸ್ಥೆಗಳು, ಯೋಗಾಸಕ್ತರು, ಯೋಗ ಗುರುಗಳೆಲ್ಲರೂ ಸೇರಿ ಯೋಗದ ಮಹತ್ವವನ್ನು ಪ್ರಸರಿಸುವ ಮೂಲಕ ಪ್ರೇರಣೆ ನೀಡಬೇಕು ಎಂದರು.

ಸರ್ವರ್ ಹ್ಯಾಕ್ ಹೇಳಿಕೆ ಮೂಲಕ ಕರ್ನಾಟಕದ ಮರ್ಯಾದೆ ಕಳೆದಿದ್ದಾರೆ

- ಸಚಿವ ಸತೀಶ್ ಜಾರಕಿಹೊಳಿ ವಿರುದ್ಧ ಪ್ರತಾಪ್ ಸಿಂಹ ಕಿಡಿ
- ಸಚಿವರೂ ಆಗಿರುವ ಎಂ.ಬಿ.ಪಾಟೀಲ್ ಬಗ್ಗೆ ಗೌರವವಿದೆ

ಮೈಸೂರು, ಜೂ.21(ಬಿಎಲ್‌ಯು)–



ಗೃಹ ಜ್ಯೋತಿ ಯೋಜನೆಯ ಸರ್ವರ್ ಅನ್ನು ಕೇಂದ್ರದ ಬಿಜೆಪಿ ಸರ್ಕಾರ ಹ್ಯಾಕ್ ಮಾಡಿದೆ ಎಂಬ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿಕೆಯಿಂದ ಕರ್ನಾಟಕದ ಮರ್ಯಾದೆ ಹಾಳಾಗಿದೆ ಎಂದು ಸಂಸದ ಪ್ರತಾಪ್ ಸಿಂಹ ಕಿಡಿಕಾರಿದ್ದಾರೆ.

ಮೈಸೂರಿನಲ್ಲಿ ಇಂದು ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಸತೀಶ್ ಜಾರಕಿಹೊಳಿ ಅವರೇ ನೀವು ಸರ್ಕಾರದ ಜವಾಬ್ದಾರಿಯುತ ಸಚಿವರು. ರಾಜಕಾರಣಕ್ಕಾಗಿ ಏನೇನೋ ಹೇಳಿಕೆ ಕೊಡಬೇಡಿ. ನಿಮ್ಮ ಮಾತಿನಿಂದ ಕರ್ನಾಟಕದ ಮರ್ಯಾದೆ ಬೀದಿ ಪಾಲಾಗುತ್ತಿದೆ. ಇಂತಹ ಹೇಳಿಕೆ ಕೊಟ್ಟು ಮುಜುಗರಕ್ಕೊಳಗಾಗಬೇಡಿ. ಇನ್ನು ಮುಂದೆಯಾದರೂ ಹೇಳಿಕೆ ಕೊಡುವಾಗ ಜಾಗೃತೆಯಿಂದ ಇರಿ ಎಂದು ಪ್ರತಾಪ್ ಸಿಂಹ ಅವರು ಸತೀಶ್ ಜಾರಕಿಹೊಳಿಗೆ ಸಲಹೆ ನೀಡಿದ್ದಾರೆ.

ನಾವು ಮಾಡುವ ಕೆಲಸಗಳು ಮಾತನಾಡಬೇಕು. ಆದರೆ ನಮ್ಮ ಮಾತುಗಳೇ ಕೆಲಸವಾಗಬಾರದು ಎಂದು ಎಂ.ಬಿ. ಪಾಟೀಲ್‌ಗೆ ಪ್ರತಾಪ್ ಸಿಂಹ ತಿರುಗೇಟು ಕೊಟ್ಟರು. ಎಂ.ಬಿ.ಪಾಟೀಲರು ಸಚಿವರೂ ಆಗಿದ್ದು, ಅವರ ಬಗ್ಗೆ ಗೌರವ ಏದೆ. ಅವರು ನನ್ನ ವಿಚಾರವಾಗಿ ಮಾತನಾಡದೇ ಇದ್ದರೆ ನಾನು ಸಹ ಅವರ ವಿಚಾರವಾಗಿ ಮಾತನಾಡುವುದಿಲ್ಲ ಎಂದರು. ಅನ್ನಭಾಗ್ಯ ಯೋಜನೆಗೆ ಕೇಂದ್ರದ ಬಿಜೆಪಿ ಸರ್ಕಾರ ಅಡ್ಡಗಾಲು ಹಾಕುತ್ತಿದೆ ಎಂಬ ಕಾಂಗ್ರೆಸ್ ನಾಯಕರ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿದ ಪ್ರತಾಪ್ ಸಿಂಹ, ದೇಶದಲ್ಲಿ 29 ರಾಜ್ಯ, 7 ಕೇಂದ್ರಾಡಳಿತ ಪ್ರದೇಶಗಳಿವೆ. ಆದರೆ ಕರ್ನಾಟಕ ಬಿಟ್ಟು ಯಾವ ರಾಜ್ಯವೂ ಇವರಂತೆ ಬೊಬ್ಬೆ ಹೊಡೆಯುತ್ತಿಲ್ಲ ಎಂದು ಹೇಳಿದರು.

ಅಕ್ಕಿ ನೀಡುವ ವಿಚಾರದಲ್ಲಿ ಕೇಂದ್ರ ಸರ್ಕಾರದ ಕಡೆ ಬೊಟ್ಟು ಮಾಡಿ ತೋರಿಸುವ ಬದಲು, ಮುಕ್ತ ಮಾರುಕಟ್ಟೆ (ಓಪನ್ ಮಾರ್ಕೆಟ್)ಯಲ್ಲಿ ಅಕ್ಕಿ ಖರೀದಿ ಮಾಡಿ ಜನರಿಗೆ ಕೊಡಿ. ವಿನಾ ಕಾರಣ ಪ್ರಧಾನಿ ನರೇಂದ್ರ ಮೋದಿ ಅವರನ್ನು ಪ್ರತಿ ದಿನ ಬೈಯ್ಯುತ್ತಾ ಕೂರಬೇಡಿ. ಇನ್ನು ಮುಂದಾದರೂ ಈ ನಾಟಕ ಬಿಡಿ ಎಂದು ಸಲಹೆ ನೀಡಿದರು.


ಬೇರೆಲ್ಲೂ ಅಕ್ಕಿ ಸಿಗಲಿಲ್ಲ ಅಂದರೆ ರಾಜ್ಯದ ರೈತರು ಬೆಳೆದಿರುವ ಭತ್ತ ಖರೀದಿ ಮಾಡಿ, ಅಕ್ಕಿ ನೀಡಿ ಎಂದು ಸಲಹೆ ನೀಡಿದ ಪ್ರತಾಪ್‌ಸಿಂಹ, ನೀವು ಯಾರನ್ನು ಓಲೈಕೆ ಮಾಡಲು ಬಂದಿದ್ದೀರಾ ಅಂತ ನನಗೆ ಗೊತ್ತಿದೆ. ಜೊತೆಗೆ ನಿಮ್ಮ ಮನಸ್ಥಿತಿ ಹೇಗಿದೆ ಅಂತಲೂ ಗೊತ್ತು ಎಂದು ಪ್ರತಾಪ್ ಸಿಂಹ, ಸಿದ್ದರಾಮಯ್ಯ ವಿರುದ್ಧ ಕಿಡಿಕಾರಿದರು.



ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಪ್ರಾಯೋಗಿಕ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಶಾಲೆಯ 850ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಶಿಕ್ಷಕ ವೃಂದದವರು 9ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ವಿವಿಧ ಯೋಗಾಸನಗಳನ್ನು ಪ್ರದರ್ಶಿಸಿದರು.



ವಿಶ್ವ ಯೋಗ ದಿನಾಚರಣೆಯ ಅಂಗವಾಗಿ ಜೆಎಸ್‌ಎಸ್ ಎಹೆಚ್‌ಇಆರ್‌ನ ಯೋಗ ವಿಭಾಗ ಹಾಗೂ ವಿಸ್ತಾರ ಸುದ್ದಿವಾಹಿನಿಯ ಸಹಯೋಗದಲ್ಲಿ ಏರ್ಪಡಿಸಿದ್ದ ಯೋಗಾಭ್ಯಾಸದಲ್ಲಿ ಸುತ್ತೂರು ಜೆಎಸ್‌ಎಸ್ ಉಚಿತ ವಸತಿ ಶಾಲೆಯ ಸಹಸ್ರಾರು ವಿದ್ಯಾರ್ಥಿಗಳು ಪಾಲ್ಗೊಂಡಿರುವುದು.



ಇಂಧೋರ್ ಪ್ರವಾಸದಲ್ಲಿರುವ ಮೇಯರ್ ಶಿವಕುಮಾರ್, ತಾವು ಉಳಿದುಕೊಂಡಿರುವ ಖಾಸಗಿ ಹೋಟೆಲ್‌ನಲ್ಲಿ ಯೋಗಾಭ್ಯಾಸ ಮಾಡುವ ಮೂಲಕ ಅಂತರರಾಷ್ಟ್ರೀಯ ಯೋಗ ದಿನ ಆಚರಿಸಿದ್ದಾರೆ.



ಮೈಸೂರಿನ ಕುವೆಂಪುನಗರದಲ್ಲಿರುವ ಜಾನ್ ಲಿಯೋ ರೆಬೆಲ್ಲೋ ಯೋಗ ಕೇಂದ್ರದಲ್ಲಿ ಬುಧವಾರ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು.

ದೈಹಿಕ, ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಯೋಗ ಒಂದು ಸಮರ್ಥ ಸಾಧನ

ಮೈಸೂರು, ಜೂ. 21– ಆತ್ಮ ಮತ್ತು ಪರಮಾತ್ಮನನ್ನು ಒಂದುಗೂಡಿಸುವುದೇ ಯೋಗ. ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಯೋಗ ಒಂದು ಸಮರ್ಥ ಸಾಧನ ಎಂದು ಅಂತಾರಾಷ್ಟ್ರೀಯ ಯೋಗ ತೀರ್ಪುಗಾರರು ಮತ್ತು ತರಬೇತುದಾರ ಎಚ್.ಎಂ. ರವಣೀಕರ್ ಹೇಳಿದರು. ರಾಮಕೃಷ್ಣನಗರದ ರಾಮಕೃಷ್ಣ ವಿದ್ಯಾಕೇಂದ್ರ ಮತ್ತು ಆರ್‌ಕೆವಿಕೆ ಸಂಯುಕ್ತ ಪದವಿಪೂರ್ವ ಕಾಲೇಜಿನ ಶಾರದಾ ಸಭಾಂಗಣದಲ್ಲಿ ಆಯೋಜಿಸಿದ್ದ ವಿಶ್ವಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಯೋಗದ ಮಹತ್ವವನ್ನು ಕುರಿತು ತಿಳಿ ಹೇಳಿದರು. ವಿಶ್ವಯೋಗ ದಿನದ ಅಂಗವಾಗಿ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ಶಾಲೆಯ ಮತ್ತು ಕಾಲೇಜಿನ ನೂರು ವಿದ್ಯಾರ್ಥಿಗಳಿಗೆ ಯೋಗ ಪಟು ದರ್ಶನ್‌ಗೌಡ ಮತ್ತು ತಂಡದವರಿಂದ ಒಂದು ಗಂಟೆ ಕಾಲ ಯೋಗದ ವಿವಿಧ ಆಸನಗಳನ್ನು ಮತ್ತು ಆ ಆಸನಗಳ ಉಪಯುಕ್ತತೆಯನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಉಪಾಧ್ಯಕ್ಷ ಕೆ. ಕೆಂಪಲಿಂಗರಾಜು, ಸದಸ್ಯರಾದ ಪ್ರಕಾಶ್, ಕಾರ್ಯನಿರ್ವಾಹಕ ಅಧಿಕಾರಿ ಪ್ರೊ. ಜಿ. ಚಂದ್ರಶೇಖರ್, ಪ್ರಾಂಶುಪಾಲ ಸಿ. ಶಿವಪ್ಪ ಇನ್ನಿತರರು ಉಪಸ್ಥಿತರಿದ್ದರು.

ಬೃಂದಾವನದಲ್ಲಿ ಯೋಗ ದಿನಾಚರಣೆ; ಗಣ್ಯರ ಭಾಷಣದಿಂದ ಬೇಸತ್ತ ಯೋಗಾಸಕ್ತರು

ಶ್ರೀರಂಗಪಟ್ಟಣ, ಜೂ.21– ತಾಲೂಕಿನ ಕೆಆರ್‌ಎಸ್ ಬೃಂದಾವನ ಗಾರ್ಡನ್‌ನಲ್ಲಿ ಬುಧವಾರ ಆಯೋಜಿಸಿದ್ದ 9ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಯೋಗಾಸನಕ್ಕಿಂತ ಗಣ್ಯರ ಭಾಷಣಕ್ಕೆ ಹೆಚ್ಚು ಒತ್ತು ನೀಡಲಾಗಿತ್ತು.

ಬೆಳಗ್ಗೆ 6 ಗಂಟೆಗೆ ಆರಂಭವಾಗಬೇಕಾಗಿದ್ದ ಕಾರ್ಯಕ್ರಮ 7 ಗಂಟೆಗೆ ಪ್ರಾರಂಭವಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗಣ್ಯರ ಭಾಷಣದಿಂದ ವಿದ್ಯಾರ್ಥಿಗಳು ಬಸವಳಿಯುವಂತಾಯಿತು. ಭಾಷಣ ಕೇಳಿ ಬೇಸತ್ತ ವಿದ್ಯಾರ್ಥಿಗಳು ಹರಟೆ ಹೊಡೆಯಲಾರಂಭಿಸಿದರು. ಅಂತೂ–ಇಂತೂ ಒಂದೂಕಾಲು ಗಂಟೆ ಭಾಷಣದ ನಂತರ 45 ನಿಮಿಷ ಯೋಗಾಸನ ನಡೆದು, ಬೆಳಗ್ಗೆ 8 ಗಂಟೆಗೆ ಕಾರ್ಯಕ್ರಮ ಮುಕ್ತಾಯಗೊಂಡ ನಂತರ ವಿದ್ಯಾರ್ಥಿಗಳಿಗೆ ಉಪಹಾರ ನೀಡಿ ಕಳುಹಿಸಲಾಯಿತು.

ಯೋಗ ಕಾರ್ಯಕ್ರಮಕ್ಕೆ ಗೂಡ್ಸ್ ಟೆಂಪೋದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿಗಳನ್ನು ಶಿಕ್ಷಕರು ಕರೆತಂದಿದ್ದು, ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಯಿತು. ಕಾರ್ಯಕ್ರಮಕ್ಕೆ ಬಂದ ಮಕ್ಕಳಿಗೆ ಜಿಲ್ಲಾಡಳಿತ ಸರಿಯಾದ ವ್ಯವಸ್ಥೆಯನ್ನು ಮಾಡಿರಲಿಲ್ಲ. ತಂಡೋಪತಂಡವಾಗಿ ವಿದ್ಯಾರ್ಥಿಗಳನ್ನು ಒಂದೆಡೆ



ಕೂರಿಸಿದಾಗ ವಿದ್ಯಾರ್ಥಿಗಳು ಗಲಿಬಿಲಿಗೊಂಡರು. ಯೋಗ ಮಾಡಲು ಸೂಕ್ತ ವ್ಯವಸ್ಥೆಯೂ ಇಲ್ಲದೇ ನಾಮಕಾವಸ್ಥೆಯಾಗಿ ಕಾರ್ಯಕ್ರಮ ನಡೆಯಿತು.

ಈ ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ, ಪ್ರತೀದಿನ ಅರ್ಧ ಗಂಟೆ ಕಾಲ ಯೋಗಕ್ಕೆ ಮೀಸಲಿಡಬೇಕು. ಉತ್ತಮ ಆರೋಗ್ಯಕ್ಕೆ



ಗೂಡ್ಸ್ ಟೆಂಪೋದಲ್ಲಿ ವಿದ್ಯಾರ್ಥಿಗಳನ್ನು ಕರೆತಂದಿರುವುದು.

ಯೋಗ ಸಹಕಾರಿ. ಹಲವಾರು ಮಹಾನ್ ವ್ಯಕ್ತಿಗಳು ಯೋಗದಿಂದ ಆರೋಗ್ಯ ಹಾಗೂ ಮಾನಸಿಕ ನೆಮ್ಮದಿ ಪಡೆದಿದ್ದಾರೆ ಎಂದರು. ಜಿಲ್ಲಾಧಿಕಾರಿ ಡಾ. ಕುಮಾರ್ ಮಾತನಾಡಿ, ಯೋಗಕ್ಕೆ ದೇಹ, ಮನಸ್ಸು ಮತ್ತು ಆತ್ಮವನ್ನು ಒಗ್ಗೂಡಿಸುವ ಶಕ್ತಿ ಇದೆ. ಭಾರತವು ಯೋಗ ವಿದ್ಯೆಯನ್ನು ಇಡೀ ವಿಶ್ವಕ್ಕೆ ಪರಿಚಯಿಸಿದೆ. ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಸುಸ್ಥಿರ ಹಾಗೂ ಸದೃಢವಾಗಿಟ್ಟುಕೊಳ್ಳಲು ದಿನಕ್ಕೆ ಒಂದು ಗಂಟೆ ಕಾಲ ಯೋಗಕ್ಕೆ ಮೀಸಲಿಡಬೇಕು ಎಂದರು. ಜಿಲ್ಲಾ ಎಸಪಿ ಯತೀಶ್, ಚಂದ್ರವನ ಆಶ್ರಮದ ಪೀಠಾಧಿಪತಿ ಡಾ. ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಮಾತನಾಡಿದರು. ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಅಪರ ಜಿಲ್ಲಾಧಿಕಾರಿ ಡಾ. ಹೆಚ್.ಎಲ್. ನಾಗರಾಜು, ಪಾಂಡವಪುರ ಉಪವಿಭಾಗಾಧಿಕಾರಿ ನಂದೀಶ್, ತಹಸೀಲ್ದಾರ್ ಸೌಮ್ಯ, ಆಯುಷ್ ವೈದ್ಯಾಧಿಕಾರಿ ಡಾ.ಸೀತಾಲಕ್ಷ್ಮಿ ಮತ್ತಿತರರು ಉಪಸ್ಥಿತರಿದ್ದರು.

ವಿಶ್ವ ಯೋಗ ದಿನಾಚರಣೆ ಅಂಗವಾಗಿ

ನಂಜನಗೂಡಿನಲ್ಲಿ ನೂರಾರು ಯೋಗಾಸಕ್ತರಿಂದ ಯೋಗ ಪ್ರದರ್ಶನ





ನಂಜನಗೂಡು, ಜೂ.21– ವಿಶ್ವ ಯೋಗ ದಿನಾಚರಣೆ ಅಂಗವಾಗಿ ನಗರದ ತಾಲೂಕು ಕ್ರೀಡಾಂಗಣದಲ್ಲಿ ಬುಧವಾರ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ವತಿಯಿಂದ ಆಯೋಜಿಸಿದ್ದ ಸಾಮೂಹಿಕ ಯೋಗ ಪ್ರದರ್ಶನದಲ್ಲಿ ನೂರಾರು ಯೋಗಪಟುಗಳು ಭಾಗವಹಿಸಿದ್ದರು.

ಸಮಿತಿಯ ಪ್ರಧಾನ ಯೋಗ ಶಿಕ್ಷಕ ಪ್ರಕಾಶ್ ಜಿ.ಉಡಿಗಾಲ ನೇತೃತ್ವದಲ್ಲಿ ನಡೆದ ಯೋಗಾಭ್ಯಾಸದಲ್ಲಿ ಸಮಿತಿಯ ಯೋಗಪಟುಗಳು ಸಮವಸ್ತ್ರಧಾರಿಯಾಗಿ ಪಾಲ್ಗೊಂಡು ಗಮನ ಸೆಳೆದರೆ, ಕಸ್ತೂರಿ ಬಾ ಬಾಲಕಿಯರ ವಸತಿ ಶಾಲೆಯ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಇದಕ್ಕೂ ಮುನ್ನ ಸಾಮೂಹಿಕ ಯೋಗಾಭ್ಯಾಸಕ್ಕೆ ಚಾಲನೆ ನೀಡಿ ಮಾತನಾಡಿದ ಮೂಳೆ ತಜ್ಞ ಡಾ.ಎಸ್.ಶ್ರೀಕಾಂತ್, ದೈಹಿಕ ಹಾಗೂ ಮಾನಸಿಕ ಸದೃಢತೆಗಾಗಿ ದೈನಂದಿನ ಯೋಗ, ಧ್ಯಾನ, ಪ್ರಾಣಾಯಾಮ ಸಹಕಾರಿಯಾಗಿದೆ. ಇದರಿಂದ ಅನಾರೋಗ್ಯ ಸಮಸ್ಯೆಗಳು ಕೂಡ ನಿವಾರಣೆಯಾಗಲಿದೆ. ಈ ನಿಟ್ಟಿನಲ್ಲಿ ನಂಜನಗೂಡಿನಲ್ಲಿ ಯೋಗ ಜಾಗೃತಿಗೊಳಿಸುವ ಜತೆಗೆ ಉಚಿತ ಸೇವೆ ನೀಡುತ್ತಿರುವ ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿಯ ಸೇವಾಕಾರ್ಯ ಶ್ಲಾಘನೀಯ ಎಂದರು.

ಸಮಿತಿಯ ಪ್ರಧಾನ ಯೋಗ ಶಿಕ್ಷಕ ಪ್ರಕಾಶ್ ಜಿ.ಉಡಿಗಾಲ ಮಾತನಾಡಿ, ಬಾಹ್ಯವಾಗಿ ನಾವು ಸುಂದರ ಹಾಗೂ ಸದೃಢರಾಗಿದ್ದರೆ ಸಾಲದು. ಆಂತರ್ಯದಲ್ಲಿ ನಾವು ಸದೃಢರಾದರೆ ಮಾತ್ರ ಸುಜ್ಞಾನದೆಡೆಗೆ ಸಾಗಲು ಸಾಧ್ಯವಾಗುತ್ತದೆ ಎಂದರು.

ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ವಿ.ರೇವಣ್ಣ, ಕಾರ್ಯದರ್ಶಿ ಎನ್.ಆರ್.ಗಣೇಶ್‌ಮೂರ್ತಿ, ನಂಜನಗೂಡು ಯೋಗ ಫೌಂಡೇಶನ್ ಅಧ್ಯಕ್ಷ ಡಿಗ್ಗನೇಹಳ್ಳಿ ಪ್ರಕಾಶ್ ಉಪಸ್ಥಿತರಿದ್ದರು.

ಬಕ್ರೀದ್ ಹಿನ್ನೆಲೆಯಲ್ಲಿ ಪೊಲೀಸರಿಂದ ಶಾಂತಿಸಭೆ

ಶಾಂತಿಭಂಗ ಉಂಟು ಮಾಡುವವರ ವಿರುದ್ಧ ಕ್ರಮ

ಹುಣಸೂರು.ಜೂ.21(ಕೆಕೆ)– ಬಕ್ರೀದ್ ಹಿನ್ನೆಲೆಯಲ್ಲಿ ನಗರ ಠಾಣೆಯಲ್ಲಿ ಶಾಂತಿ ಸಭೆ ನಡೆಸಲಾಯಿತು. ಇನ್ಸ್‌ಪೆಕ್ಟರ್ ದೇವೇಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆದ ಶಾಂತಿಸಭೆಯಲ್ಲಿ ಮುಖಂಡರಿಂದ ಮಾಹಿತಿ ಪಡೆದು ಯಾವುದೇ ಸಮುದಾಯವಾಗಿರಲಿ ಹಬ್ಬಗಳ ಆಚರಣೆ ವೇಳೆ ಅನ್ಯ ಧರ್ಮದ ಬಗ್ಗೆ ತಾತ್ಸಾರ ಮಾಡದೆ, ಶಾಂತಿಯುತವಾಗಿ ಆಚರಿಸಿದಾಗ ಮಾತ್ರ ಸಹಬಾಳ್ವೆ ಸಾಧ್ಯ. ಹೀಗಾಗಿ ಶಾಂತಿಗೆ ಭಂಗ ತರುವ ಯಾವುದೇ ಹೇಳಿಕೆಗಳು, ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುವುದು, ಫಾರ್ವರ್ಡ್ ಮಾಡಿ ಮತ್ತೊಬ್ಬರಿಗೆ ನೋವುಂಟು ಮಾಡುವುದು ಕಾನೂನಿನಲ್ಲಿ ಅಪರಾಧವಾಗಿದೆ ಎಂದರು.

ಸಭೆಯಲ್ಲಿ ಮುಖಂಡರು ಯುವಕರಿಗೆ ತಿಳಿ ಹೇಳಬೇಕೆಂದು ಮನವಿ ಮಾಡಿದರು. ಕಾನೂನು ಉಲ್ಲಂಘಿಸುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಲಾಗುವುದು. ಇದರಿಂದ ಮುಂದೆ ಯುವಕರು ಉದ್ಯೋಗಕ್ಕೆ ಹೋಗುವ ವೇಳೆ ತೊಂದರೆಯಾಗಲಿದೆ. ಎಲ್ಲರೂ ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಬೇಕೆಂದು ಮನವಿ ಮಾಡಿದರು.


ಬಕ್ರೀದ್ ಸಂಭ್ರಮಾಚರಣೆ ವೇಳೆ ಪೊಲೀಸರು ನಿಗದಿಪಡಿಸಿದ ಸ್ಥಳಗಳಲ್ಲೇ ಮೆರವಣಿಗೆ ನಡೆಸುವುದು ಒಳಿತು. ಹಬ್ಬಗಳ ಸಂದರ್ಭಗಳಲ್ಲಿ ರಸ್ತೆಗಳಲ್ಲಿ ಯುವಕರು ವೀಲಿಂಗ್ ಮಾಡುವುದು, ಕರ್ಕಶವಾಗಿ ಶಬ್ದ ಹೊರಡಿಸುವ ಬೈಕ್‌ಗಳನ್ನು ಓಡಿಸುವವರಿಗೂ ಮುಖಂಡರು ತಿಳುವಳಿಕೆ ನೀಡಬೇಕೆಂದು ಮನವಿ ಮಾಡಿದರು.

ಸಭೆಯಲ್ಲಿ ಎಸ್‌ಐಗಳಾದ ಪಂಚಾಕ್ಷರಿ ಸ್ವಾಮಿ, ನಾಗಯ್ಯ ಹಾಗೂ ಸಿಬ್ಬಂದಿಗಳು, ನಗರಸಭೆ ಸದಸ್ಯ ಸೈಯದ್ ಯೂನಸ್, ಮಾಜಿ ಸದಸ್ಯ ಮಜಾಜ್ ಅಹಮದ್, ಎಸ್‌ಡಿಪಿಐ ಮುಖ್ಯಸ್ಥ ತಬ್ರೈಜ್, ಫಜಲ್, ಡಿಎಸ್‌ಎಸ್ ಮುಖಂಡ ಕಾಂತರಾಜು, ಮಂಜು, ರವಿಗೌಡ, ರಮೇಶ್ ಸೇರಿದಂತೆ ಅನೇಕ ಮುಖಂಡರಿದ್ದರು.



ಜೂ.20ರಿಂದ ಕೆ.ಆರ್. ನಗರ ತಾಲೂಕಿನ ನಾಲೆಗಳಿಗೆ ನೀರು

ಕೊನೆ ಭಾಗದ ಜಮೀನಿಗೂ ನೀರು ಹರಿಸಲು ಕ್ರಮ ಕೈಗೊಳ್ಳುವಂತೆ ಶಾಸಕರ ಸೂಚನೆ



ಕೆ.ಆರ್.ನಗರ, ಜೂ.21– ನಾಲೆಗಳಿಗೆ ಜು.20ರಿಂದ ನೀರು ಹರಿಸಲು ನಿರ್ಧರಿಸಲಾಗಿದ್ದು, ನಾಲೆಯ ಕೊನೆಯ ಹಂತದ ಕೊಪ್ಪ 1 ಎಕರೆ ಜಮೀನಿಗೂ ನೀರಿನ ತೊಂದರೆಯಾಗದಂತೆ ಸರಾಗವಾಗಿ ನೀರು ಹರಿಯಲು ಆಗಬೇಕಾಗಿರುವ ಕಾಮಗಾರಿಗಳನ್ನು ಮಾಡಿಸಬೇಕು ಎಂದು ಅಧಿಕಾರಿಗಳಿಗೆ ಶಾಸಕ ಡಿ.ರವಿಶಂಕರ್ ಸೂಚಿಸಿದರು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ರೈತ ಮುಖಂಡರು ಮತ್ತು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರೈತರಿಗೆ ಕಿಂಚಿತ್ತು ತೊಂದರೆಯಾಗದಂತೆ ಕೆಲಸ ಮಾಡಬೇಕಾದದ್ದು ಚುನಾಯಿತ ಸದಸ್ಯರು ಮತ್ತು ಅಧಿಕಾರಿಗಳ ಜವಾಬ್ದಾರಿ. ಇದನ್ನು ಇಲಾಖಾ ಅಧಿಕಾರಿಗಳು ಅರ್ಥಮಾಡಿಕೊಳ್ಳಬೇಕು ಎಂದರು.

ಮಿರ್ಲೆ ಗ್ರಾಮದ ಐದು ನಾಲೆಗಳಲ್ಲಿ ಹೂಳು ತೆಗೆಯುವ ನೆಪದಲ್ಲಿ ಗುತ್ತಿಗೆದಾರರು ಮತ್ತು ಅಧಿಕಾರಿಗಳು ಪ್ರತಿ ವರ್ಷ ಹಣ ಮಾಡುವ ಪ್ರವೃತ್ತಿಯಲ್ಲಿ ತೊಡಗಿದ್ದಾರೆ ಎಂದು ಗ್ರಾಮಸ್ಥರು ಮತ್ತು ರೈತ ಮುಖಂಡರು ದೂರಿದ್ದಾರೆ. ಈ ರೀತಿಯ ವರ್ತನೆ ಮರುಕಳಿಸದಂತೆ ಎಚ್ಚರವಹಿಸಬೇಕು ಎಂದು ಎಇಇ ಅವರಿಗೆ ತಾಕೀತು ಮಾಡಿದ ಶಾಸಕ ಡಿ.ರವಿಶಂಕರ್, ಈ ಐದು ನಾಲೆಗಳ ಜತೆಗೆ ಹಾಡ್ಯ ಮತ್ತು ಹೊಸೂರು ಕಲ್ಲಹಳ್ಳಿ ಗ್ರಾಮಗಳಲ್ಲಿರುವ ಸಮಸ್ಯೆಯನ್ನು ಪರಿಹರಿಸಬೇಕು ಎಂದು ಆದೇಶಿಸಿದರು.

ರೈತರಿಗೆ ಬೇಕಾಗಿರುವ ಬಿತ್ತನೆ ಬೀಜಗಳು ಮತ್ತು ರಸಗೊಬ್ಬರ ದಾಸ್ತಾನು ಮಾಡುವ ಸಂಬಂಧ ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ರೈತ ಮುಖಂಡರ ಸಭೆ ನಡೆಸಿ ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕಾಗಿದ್ದ ಕೃಷಿ ಇಲಾಖೆಯವರ ತಪ್ಪಿನಿಂದ ರೈತರಿಗೆ ಅನಾನುಕೂಲವಾಗುತ್ತಿರುವುದು ಸಾಮಾನ್ಯವಾಗಿದ್ದು ಇನ್ನು ಮುಂದೆ ಇದಕ್ಕೆ ಅವಕಾಶ ಕೊಡದೆ ರೈತರು ಕೇಳಿದ ಬಿತ್ತನೆ ಬೀಜಗಳನ್ನು ಸಕಾಲದಲ್ಲಿ ವಿತರಿಸಬೇಕು ಎಂದು ಕೃಷಿ ಸಹಾಯಕ ನಿರ್ದೇಶಕರಿಗೆ ಸೂಚಿಸಿದರು.

ತಹಶೀಲ್ದಾರ್‌ಗಳಾದ ಸಂತೋಷ್ ಕುಮಾರ್, ತಿಮ್ಮಪ್ಪ, ಇಒ ಸತೀಶ್, ರೈತ ಮುಖಂಡರಾದ ಸರಗೂರು ನಟರಾಜು, ನೇತ್ರಾವತಿ, ಗರುಡಗಂಭಸ್ವಾಮಿ, ಅಂಕನಹಳ್ಳಿತಿಮ್ಮಪ್ಪ, ಎಂ.ಜೆ.ಮಲ್ಲೇಶ್, ವಿಶ್ವಾಸ್, ಚೆಲುವರಾಜು, ನಟರಾಜು, ಪ್ರಸನ್ನ, ಶಕುಂತಲಮ್ಮ, ಎಂ.ಬಿ. ಲೋಕನಾಥ್, ಸಂಪತ್‌ಕುಮಾರ್, ಸೀತಾರಾಮು, ನೂತನ್‌ಕುಮಾರ್ ಮುಂತಾದವರು ಹಾಜರಿದ್ದರು.

ಶ್ರೀಕಂಠೇಶ್ವರನ ದರ್ಶನ ಪಡೆದ ಯಶ್ ಕುಟುಂಬ

ನಂಜುಂಡೇಶ್ವರ ನಮ್ಮ ಮನೆ ದೇವರು: ಯಶ್



ನಂಜನಗೂಡು, ಜೂ. 21– ಚಲನಚಿತ್ರ ನಟ ಯಶ್ ಮತ್ತು ನಟಿ ರಾಧಿಕಾ ಪಂಡಿತ್ ತಮ್ಮ ಕುಟುಂಬ ಸಮೇತರಾಗಿ ಶ್ರೀಕಂಠೇಶ್ವರನ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು.

ಕಳೆದ 3 ದಿನಗಳಿಂದ ಬಂಡೀಪುರ ಅಭಯಾರಣ್ಯದಲ್ಲಿ ಸಫಾರಿ ನಡೆಸಿದ ದಂಪತಿ, ಬುಧವಾರ ತಮ್ಮ ಇಬ್ಬರು ಮಕ್ಕಳೊಂದಿಗೆ ಶ್ರೀಕಂಠೇಶ್ವರನ ದೇವಾಲಯಕ್ಕೆ ಆಗಮಿಸಿ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ದೇವಾಲಯದ ವತಿಯಿಂದ ಅವರಿಗೆ ಶೇಷವಸ್ತ್ರ, ಫಲ ತಾಂಬೂಲಗಳನ್ನು ನೀಡಿ ಗೌರವಿಸಲಾಯಿತು.

ನಂತರ ಸುದ್ದಿಗಾರರೊಂದಿಗೆ ನಟ ಯಶ್ ಮಾತನಾಡಿ, ಶ್ರೀಕಂಠೇಶ್ವರ ನಮ್ಮ ಮನೆ ದೇವರು. ಆಗಾಗ ಈ ದೇವಾಲಯಕ್ಕೆ ಬರುತ್ತೇವೆ. ಕಳೆದ 2 ವರ್ಷಗಳಿಂದ ಕೊರೊನಾ ಕಾರಣದಿಂದಾಗಿ ದೇವಾಲಯಕ್ಕೆ ಬರಲು ಸಾಧ್ಯವಾಗಿರಲಿಲ್ಲ, ಈಗ ಕಳೆದ 3 ದಿನಗಳಿಂದ ಮೈಸೂರಿನ ಭಾಗದಲ್ಲೇ ಪ್ರವಾಸದಲ್ಲಿದ್ದ ಕಾರಣ ದೇವಾಲಯಕ್ಕೆ ಬಂದಿದ್ದೇನೆ. ಯಾವುದೇ ವಿಶೇಷ ಹರಕೆ ಇರಲಿಲ್ಲ ಎಂದರು.

ಮೈಸೂರು ಭಾಗದ ಪ್ರವಾಸ ತುಂಬಾ ಚೆನ್ನಾಗಿತ್ತು ನನ್ನ ಮಕ್ಕಳಿಗೆ ಮೊದಲ ಕಾಡಿನ ಪ್ರವಾಸದ ಅನುಭವ. ಮಕ್ಕಳು ಸಫಾರಿಯನ್ನು ತುಂಬಾ ಎಂಜಾಯ್ ಮಾಡಿದರು. ಕಾಡಿನಲ್ಲಿ ಜಿಂಕೆ, ಕರಡಿ, ಆನೆ ಎಲ್ಲಾ ಕಂಡವು. ಆದರೆ ಹುಲಿ ಕಾಣಸಿಗಲಿಲ್ಲ. ತುಂಬಾ ಬೇಜಾರ್ ಆಯ್ತು ಇಂದೂ ಕೂಡ ಸಫಾರಿ ಮಾಡಬೇಕಿತ್ತು. ಆದರೆ ಮಳೆ ಕಾರಣದಿಂದ ಸಫಾರಿಗೆ ಹೋಗದೆ ಮತ್ತೆ ಸಫಾರಿಗೆ ಬಂದರಾಯ್ತು ಎಂದು ದೇವರ ದರ್ಶನಕ್ಕೆ ಬಂದಿದ್ದೇವೆ ಎಂದರು.

ಶೀಘ್ರದಲ್ಲೇ ನನ್ನ ಮುಂದಿನ ಚಿತ್ರ ಅನೌನ್ಸ್ ಮಾಡುವೆ: ದೇವರ ಸನ್ನಿಧಿಯಲ್ಲಿದ್ದೇನೆ ಸುಖಾಸುಮ್ಮನೆ ತೇಲಿಸುವ ಮಾತುಗಳನ್ನು ಆಡುವುದಿಲ್ಲ, ಜನರು ದುಡ್ಡು ಕೊಟ್ಟು ಸಿನಿಮಾ ನೋಡುತ್ತಾರೆ. ಅವರು ಕೊಡುವ ದುಡ್ಡಿಗೆ ನ್ಯಾಯ ಒದಗಿಸುವಂತೆ ಚಿತ್ರ ಮಾಡಬೇಕು. ನಾನು ಒಂದು ಕ್ಷಣವನ್ನೂ ವ್ಯರ್ಥ ಮಾಡುತ್ತಿಲ್ಲ, ನಿರಂತರವಾಗಿ ಸಿನಿಮಾಗಾಗಿ ಕೆಲಸ ಮಾಡುತ್ತಿದ್ದೇನೆ. ಸಿನಿಮಾದ ಸ್ಕ್ರಿಪ್ಟ್ ಕೂಡ ಸಿದ್ಧವಾಗಿದೆ. ಆದಷ್ಟು ಬೇಗ ಹೊಸ ಸಿನಿಮಾದ ಬಗ್ಗೆ ಮಾಹಿತಿ ನೀಡುತ್ತೇನೆ ಎಂದರು.

ಬಾಲಿವುಡ್‌ಗೆ ಹೋಗಿಲ್ಲ: ನಾನು ಬಾಲಿವುಡ್‌ಗೆ ಹೋಗಿದ್ದೇನೆಂದು ಹೇಳಿಕೆಗಳು ಬರುತ್ತಿದ್ದು ನಾನು ಬಾಲಿವುಡ್‌ಗೆ ಹೋಗಿಲ್ಲ. ಡೋಂಟ್‌ವರಿ, ಬದಲಾಗಿ ನಾನು ಇರುವ ಕಡೆಗೆ ಅವರನ್ನು ಕರೆಸಿಕೊಂಡಿದ್ದೇನೆ ಎಂದು ಸ್ಪಷ್ಟನೆ ನೀಡಿದರು.

ಹುಣಸೂರು ಪಿಯು ಕಾಲೇಜಿಗೆ ಶ್ರೀನಿವಾಸ್ ಸಿಡಿಸಿ ಉಪಾಧ್ಯಕ್ಷ



ಹುಣಸೂರು, ಜೂ.21– ನಗರದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ 2023–28ನೇ ಸಾಲಿನ ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷರಾಗಿ ಉದ್ಯಮಿ ಶ್ರೀನಿವಾಸ್ ಆಯ್ಕೆಯಾಗಿದ್ದಾರೆ.

ಸದಸ್ಯರಾಗಿ ನಗರಸಭಾ ಸದಸ್ಯ ಹರೀಶ್, ಶಿಕ್ಷಣ ತಜ್ಞ ವೀರಭದ್ರಪ್ಪ, ಪೋಷಕರ ವರ್ಗದಿಂದ ಪತ್ರಕರ್ತರಾದ ಕೆ.ಕೃಷ್ಣ(ಕೆಕೆ), ಕೆ.ಪ್ರತಾಪ್, ಮಹಿಳಾ ಪ್ರತಿನಿಧಿಯಾಗಿ ಮಮತ ಗಜೇಂದ್ರ ಹಾಗೂ ಸದಸ್ಯ ಕಾರ್ಯದರ್ಶಿಯಾಗಿ ಪ್ರಾಂಶುಪಾಲ ರಾಮೇಗೌಡ ಕಾರ್ಯ ನಿರ್ವಹಿಸಲಿದ್ದಾರೆ ಎಂದು ಶಾಸಕರ ಕಚೇರಿ ಪ್ರಕಟಣೆ ತಿಳಿಸಿದೆ.

ನಾಳೆ ಸಾ.ರಾ. ಮಹೇಶ್‌ರಿಂದ ಕೃತಜ್ಞತಾ ಸಭೆ



ಭೇರ್ಯ, ಜೂ, 21– ಮಾಜಿ ಸಚಿವ ಹಾಗೂ ಮಾಜಿ ಶಾಸಕರಾದ ಸಾ.ರಾ.ಮಹೇಶ್ ಅವರು ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಮತದಾರರಿಗೆ ಹಾಗೂ ಜೆಡಿಎಸ್ ಪಕ್ಷದ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸಲು ಜೂ.23 ಸಂಜೆ 4 ಗಂಟೆಗೆ ಕೆ.ಆರ್.ನಗರ ಪಟ್ಟಣದ ರೇಡಿಯೋ ಮೈದಾನದಲ್ಲಿ ಕೃತಜ್ಞತೆ ಸಭೆಯನ್ನು ಏರ್ಪಡಿಸಿದ್ದಾರೆ ಎಂದು ಜೆಡಿಎಸ್ ಗ್ರಾಮಾಂತರ ಉಪಾಧ್ಯಕ್ಷ ಕಗ್ಗರೆ ಕುಚೇಲ ತಿಳಿಸಿದರು.

ಭೇರ್ಯ, ಹೊಸ ಅಗ್ರಹಾರ, ಅರ್ಜುನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಜೆಡಿಎಸ್ ಪಕ್ಷದ ಕಾರ್ಯಕರ್ತರಿಗೆ ಕೃತಜ್ಞತೆ ಸಮಾರಂಭದ ಕರಪತ್ರ ವಿತರಿಸಿ ಮಾತನಾಡಿದರು. ಕೃತಜ್ಞತೆ ಸಮಾರಂಭದಲ್ಲಿ ರಾಜ್ಯ ಜೆಡಿಎಸ್ ಘಟಕದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ತಾಲೂಕು ಜಾ.ದಳ ಅಧ್ಯಕ್ಷ ಹಂಪಾಪುರ ಕುಮಾರ್, ಮೆಡಿಕಲ್ ರಾಜಣ್ಣ ಸೇರಿದಂತೆ ಪಕ್ಷದ ಅನೇಕ ಪದಾಧಿಕಾರಿಗಳು, ಮುಖಂಡರು, ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಭಗೀರಥ ಜಯಂತ್ಯುತ್ಸವ ಆಚರಣೆ



ಬೆಟ್ಟದಪುರ, ಜೂ.21– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಗ್ರಾಮದ ಬಸವೇಶ್ವರ ಕಾಲೋನಿಯ ಗ್ರಾಮಸ್ಥರು ಅತ್ಯಂತ ಶ್ರದ್ಧಾಭಕ್ತಿಯಿಂದ ಭಗೀರಥ ಜಯಂತ್ಯುತ್ಸವ ಆಚರಿಸಿದರು.

ಗ್ರಾಮದ ಯಜಮಾನ ಬಿ. ಮಲ್ಲಯ್ಯ ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಅತ್ಯಂತ ಶ್ರದ್ಧಾಭಕ್ತಿಯಿಂದ ಶ್ರೀ ಭಗೀರಥ ಜಯಂತ್ಯುತ್ಸವವನ್ನು ಗ್ರಾಮಸ್ಥರ ಸಮಕ್ಷಮದಲ್ಲಿ ಆಚರಿಸಲಾಗಿದ್ದು ನಾಡಿನಲ್ಲಿ ಉತ್ತಮ ಮಳೆ ಬೆಳೆಯಾಗಿ ರೈತರು ಹಾಗೂ ನಾಡಿನ ಜನರು ಸುಭಿಕ್ಷೆಯಿಂದ ಜೀವನ ಸಾಗಿಸುವಂತಾಗಲಿ. ದೇವರು ಪ್ರತಿಯೊಬ್ಬರಿಗೂ ಆಯುರಾರೋಗ್ಯವನ್ನು ಕೊಟ್ಟು ಕಾಪಾಡಲಿ ಎಂದು ಈ ಸಂದರ್ಭ ಬೇಡಿಕೊಳ್ಳಲಾಗಿದೆ ಎಂದರು.

ಈ ಸಂದರ್ಭ ಗ್ರಾಮದ ಪ್ರಮುಖರಾದ ಬಿ.ಕೆ. ಮಹಾದೇವ, ಯೋಗೇಶ್, ಶಿಕ್ಷಕರಾದ ಶ್ರೀನಿವಾಸ್, ಕುಮಾರ್, ಮಹದೇವ್, ರವಿ, ಅಭಿಷೇಕ್, ಬಸವರಾಜು, ಹೋಟೆಲ್ ಮೈಲಾರಿ, ರಮೇಶ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ಸಾರಿಗೆ ಬಸ್–ಐಷರ್ ವಾಹನ ನಡುವೆ ಡಿಕ್ಕಿ: ಮೂವರಿಗೆ ಗಾಯ

ನಂಜನಗೂಡು, ಜೂ.21– ಕೆಎಸ್ ಆರ್‌ಟಿಸಿ ಬಸ್ ಮತ್ತು ಐಷರ್ ವಾಹನ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಮೂವರಿಗೆ ಗಂಭೀರ ಗಾಯಗಳಾಗಿರುವ ಘಟನೆ ನಂಜನಗೂಡು ತಾಲೂಕಿನ ಬಸವನಪುರ ಗ್ರಾಮದ ಸೇತುವೆ ಬಳಿ ನಡೆದಿದೆ. ನಂಜನಗೂಡು ನಗರದಿಂದ ತಿ.ನರಸೀಪುರ ಕಡೆಗೆ ಹೋಗುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ಸಿಗೆ ಎದುರುಗಡೆಯಿಂದ ಬಂದ ಐಷರ್ ವಾಹನ ಡಿಕ್ಕಿ ಹೊಡೆದಾಗ ಈ ಘಟನೆ ಸಂಭವಿಸಿದೆ.

ಡಿಕ್ಕಿ ಹೊಡೆದ ಪರಿಣಾಮ ಬಸ್ಸಿನ ಮುಂಭಾಗದಲ್ಲಿ ಕುಳಿತಿದ್ದ ಮೂವರಿಗೆ ಗಂಭೀರ ಗಾಯಗಳಾಗಿವೆ. ಗುಂಡ್ಲುಪೇಟೆ ತಾಲೂಕಿನ ತೊಂಡವಾಡಿ ಗ್ರಾಮದ 60 ವರ್ಷದ ರಾಜಮ್ಮ, 52 ವರ್ಷದ ಶಾಂತ ಕುಮಾರಿ, ಮಹದೇಶ್ವರ ಬೆಟ್ಟಕ್ಕೆ ತೆರಳುತ್ತಿದ್ದರು ಎನ್ನಲಾಗಿದ್ದು ಇಬ್ಬರು ಮಹಿಳೆಯರ ಕೈಗಳಿಗೆ ಗಾಯಗಳಾಗಿವೆ. ಸರಗೂರು ಗ್ರಾಮದ ಮಿಣ್ಣನಾಯಕ(50) ಎಂಬುವರಿಗೆ ಗಂಭೀರ ಗಾಯವಾಗಿದೆ.

ಸ್ಥಳಕ್ಕೆ ನಂಜನಗೂಡು ಡಿವೈಎಸ್‌ಪಿ ಗೋವಿಂದರಾಜು, ಸರ್ಕಲ್ ಇನ್ಸ್‌ಪೆಕ್ಟರ್ ಚಂದ್ರಶೇಖರ್ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಗಾಯಗೊಂಡ ಮೂವರನ್ನು ಆಂಬುಲೆನ್ಸ್ ಸಹಾಯದಿಂದ ಆಸ್ಪತ್ರೆಗೆ ಸೇರಿಸಲಾಗಿದೆ. ಸಾರಿಗೆ ಬಸ್ ಮತ್ತು ಐಷರ್ ವಾಹನವನ್ನು ಪೊಲೀಸರು ವಶಕ್ಕೆ ಪಡೆದುಕೊಂಡು ತನಿಖೆ ಕೈಗೊಂಡಿದ್ದಾರೆ. ಈ ಸಂಬಂಧ ಬಿಳಿಗೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಪ್ರಕರಣದ ಆರೋಪಿಗಳಾದ ಬಸ್ ಮತ್ತು ಐಷರ್ ವಾಹನದ ಚಾಲಕನ ಪತ್ತೆಗೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ತಿ. ನರಸೀಪುರ: 36 ಗ್ರಾಪಂಗಳ ಎರಡನೇ ಅವಧಿಯ ಮೀಸಲಾತಿ ಪ್ರಕಟ

ತಿ. ನರಸೀಪುರ, ಜೂ 21– ಪಟ್ಟಣದ ಶ್ರೀನಿವಾಸ ಕನ್ವೆನ್ಷನ್ ಹಾಲ್‌ನಲ್ಲಿ ಬುಧವಾರ ತಿ. ನರಸೀಪುರ ತಾಲೂಕಿನ 36 ಗ್ರಾ.ಪಂಗಳ ಎರಡನೇ ಅವಧಿಯ ಮೀಸಲಾತಿ 30 ತಿಂಗಳ ಅಧಿಕಾರ ಅವಧಿಗಾಗಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರ ಅಧ್ಯಕ್ಷತೆಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳ ಮೀಸಲಾತಿ ಆಯ್ಕೆ ಪ್ರಕ್ರಿಯೆ ನಡೆಯಿತು. ತಾಲೂಕಿನ ಎಲ್ಲಾ ಗ್ರಾಪಂಗಳ ಸದಸ್ಯರು ಆಯ್ಕೆ ಪ್ರಕ್ರಿಯೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅವರು ಯಾವುದೇ ಗೊಂದಲಕ್ಕೆ ಅವಕಾಶ ನೀಡದೆ ಮೀಸಲಾತಿ ಪ್ರಕ್ರಿಯೆ ನಡೆಸಿಕೊಟ್ಟರು. ಬಳಿಕ ಮಾತನಾಡಿದ ಜಿಲ್ಲಾಧಿಕಾರಿಗಳು, ಯಾವುದೇ ಒತ್ತಡಕ್ಕೆ ಮಣಿದು ಮೀಸಲಾತಿ ಪ್ರಕಟಿಸಲು ಸಾಧ್ಯವಿಲ್ಲ. 1993ರಿಂದ ಇಲ್ಲಿಯವರೆಗೆ ಪರಿಶಿಷ್ಟ ಜಾತಿ, ವರ್ಗ ಹಾಗೂ ಸಾಮಾನ್ಯ ವರ್ಗಕ್ಕೆ ಅನ್ಯಾಯವಾಗದಂತೆ ಮೀಸಲಾತಿ ಪ್ರಕಟಿಸಲಾಗಿದೆ. ಮಹಿಳೆಯರಿಗೆ ಶೇ. 50 ರಷ್ಟು ಮೀಸಲಾತಿ ನೀಡಲಾಗಿದೆ ಎಂದರು.

ಗ್ರಾಪಂ ಸದಸ್ಯರಾಗುವುದು ಕಷ್ಟ ನಮ್ಮವರೇ ಅಧ್ಯಕ್ಷನಾಗಬೇಕು ಎಂಬುದು ಎಲ್ಲರಿಗೂ ಇದ್ದೇ ಇರುತ್ತದೆ. ಪಾರದರ್ಶಕವಾಗಿ ಮೀಸಲಾತಿ ಮಾಡದಿದ್ದರೆ ನಮಗೆ ತೊಂದರೆ. ಸ್ವಯಂ ನಾವು ಏನನ್ನೂ ಮಾಡಲು ಸಾಧ್ಯವಿಲ್ಲ, ಎಲ್ಲವೂ ರೋಸ್ಟರ್ ನಿಯಮದ ಪ್ರಕಾರ ಮಾಡಲಾಗಿದೆ ಎಂದು ಅವರು ತಿಳಿಸಿದರು.

ಅಧ್ಯಕ್ಷರಲ್ಲಿ 18 ಸಾಮಾನ್ಯ, ಅದರಲ್ಲಿ 8 ಮಹಿಳೆಯರಿಗೆ 11 ಪರಿಶಿಷ್ಟ ಜಾತಿ ಅದರಲ್ಲಿ 6 ಮಹಿಳೆಯರು, 5 ಪರಿಶಿಷ್ಟ ಪಂಗಡ 3 ಮಹಿಳೆಯರು ಹಿಂದುಳಿದ ವರ್ಗ ಎ ಗೆ ಎರಡು ಅದರಲ್ಲಿ ಒಂದು ಸ್ಥಾನ ಮಹಿಳೆಗೆ ದೊರಕಿದೆ. ಈ ವೇಳೆ ಮೈಸೂರು ಮುಡಾ ಹೆಚ್ಚುವರಿ ಆಯುಕ್ತರಾದ ರೂಪ, ತಹಸೀಲ್ದಾರ್ ಸಿ.ಜಿ. ಗೀತಾ, ಇಒ ಸಿ.ಕೃಷ್ಣಾ ಹಾಜರಿದ್ದರು

ಕೊಡಗಹಳ್ಳಿ : ಅಧ್ಯಕ್ಷ : ಹಿಂದುಳಿದ ವರ್ಗ ಎ ಮಹಿಳೆ, ಉಪಾಧ್ಯಕ್ಷ : ಪರಿಶಿಷ್ಟ ಪಂಗಡ, **ಬಿ ಸಿ ಹಳ್ಳಿ :**ಅಧ್ಯಕ್ಷ –ಸಾಮಾನ್ಯ, ಉಪಾಧ್ಯಕ್ಷ–ಪರಿಶಿಷ್ಟ ಜಾತಿ ಮಹಿಳೆ, **ಅಂಕನಹಳ್ಳಿ:** ಅಧ್ಯಕ್ಷ–ಸಾಮಾನ್ಯ, ಉಪಾಧ್ಯಕ್ಷ– ಪರಿಶಿಷ್ಟ ಪಂಗಡ ಮಹಿಳೆ, **ಹೆಗ್ಗೂರು:** ಅಧ್ಯಕ್ಷ–ಪರಿಶಿಷ್ಟ ಜಾತಿ, ಉಪಾಧ್ಯಕ್ಷ–ಸಾಮಾನ್ಯ ಮಹಿಳೆ, **ತುರುಗನೂರು:** ಅಧ್ಯಕ್ಷ–ಸಾಮಾನ್ಯ ಮಹಿಳೆ, ಉಪಾಧ್ಯಕ್ಷ – ಸಾಮಾನ್ಯ, **ಯಾಚೇನಹಳ್ಳಿ:** ಅಧ್ಯಕ್ಷ– ಹಿಂದುಳಿದ ವರ್ಗ ಎ, ಉಪಾಧ್ಯಕ್ಷ–ಪರಿಶಿಷ್ಟ ಜಾತಿ, **ಹನುಮನಾಳು:** ಅಧ್ಯಕ್ಷ–ಸಾಮಾನ್ಯ, ಉಪಾಧ್ಯಕ್ಷ–ಪರಿಶಿಷ್ಟ ಜಾತಿ ಮಹಿಳೆ, **ಬೀಡನಹಳ್ಳಿ :** ಅಧ್ಯಕ್ಷ–ಸಾಮಾನ್ಯ ಮಹಿಳೆ, ಉಪಾಧ್ಯಕ್ಷ –ಪರಿಶಿಷ್ಟ ಪಂಗಡ, **ಮಲಿಯೂರು :** ಅಧ್ಯಕ್ಷ – ಸಾಮಾನ್ಯ ಮಹಿಳೆ, ಉಪಾಧ್ಯಕ್ಷ–ಸಾಮಾನ್ಯ, **ಅತ್ತಹಳ್ಳಿ:** ಅಧ್ಯಕ್ಷ–ಸಾಮಾನ್ಯ, ಉಪಾಧ್ಯಕ್ಷ –ಪರಿಶಿಷ್ಟ ಜಾತಿ ಮಹಿಳೆ, **ಕೇತುಪುರ:** ಅಧ್ಯಕ್ಷ–ಸಾಮಾನ್ಯ, ಉಪಾಧ್ಯಕ್ಷ–ಪರಿಶಿಷ್ಟ ಜಾತಿ, **ಸೋಮನಾಥಪುರ:** ಅಧ್ಯಕ್ಷ–ಸಾಮಾನ್ಯ, ಉಪಾಧ್ಯಕ್ಷ–ಹಿ.ವರ್ಗ ಎ ಮಹಿಳೆ, **ಉಕ್ಕಲಗೆರೆ:** ಅಧ್ಯಕ್ಷ–ಸಾಮಾನ್ಯ, ಉಪಾಧ್ಯಕ್ಷ–ಪರಿಶಿಷ್ಟ ಜಾತಿ ಮಹಿಳೆ, **ಚಿದರವಳ್ಳಿ:** ಅಧ್ಯಕ್ಷ–ಎಸ್‌ಸಿ ಮಹಿಳೆ, ಉಪಾಧ್ಯಕ್ಷ–ಸಾಮಾನ್ಯ, **ಕೊಳತ್ತೂರು:** ಅಧ್ಯಕ್ಷ–ಎಸ್‌ಸಿ, ಉಪಾಧ್ಯಕ್ಷ–ಸಾಮಾನ್ಯ ಮಹಿಳೆ, **ದೊಡ್ಡೇಬಾಗಿಲು:** ಅಧ್ಯಕ್ಷ –ಸಾಮಾನ್ಯ ಮಹಿಳೆ, ಉಪಾಧ್ಯಕ್ಷ–ಪರಿಶಿಷ್ಟ ಜಾತಿ, **ಮುತ್ತಲವಾಡಿ:** ಅಧ್ಯಕ್ಷ–ಎಸ್‌ಸಿ ಮಹಿಳೆ, ಉಪಾಧ್ಯಕ್ಷ–ಸಾಮಾನ್ಯ, **ಸೋಸಲೆ:** ಅಧ್ಯಕ್ಷ–ಸಾಮಾನ್ಯ ಮಹಿಳೆ, ಉಪಾಧ್ಯಕ್ಷ–ಪರಿಶಿಷ್ಟ ಪಂಗಡ ಮಹಿಳೆ, **ಬೆನಕನಹಳ್ಳಿ:** ಅಧ್ಯಕ್ಷ–ಪರಿಶಿಷ್ಟ ಜಾತಿ, ಉಪಾಧ್ಯಕ್ಷ– ಸಾಮಾನ್ಯ ಮಹಿಳೆ, **ಶೆಟ್ಟಹಳ್ಳಿ:** ಅಧ್ಯಕ್ಷ–ಪರಿಶಿಷ್ಟ ಪಂಗಡ ಮಹಿಳೆ, ಉಪಾಧ್ಯಕ್ಷ – ಸಾಮಾನ್ಯ, **ತಲಕಾಡು :** ಅಧ್ಯಕ್ಷ–ಪರಿಶಿಷ್ಟ ಪಂಗಡ ಮಹಿಳೆ, ಉಪಾಧ್ಯಕ್ಷ–ಸಾಮಾನ್ಯ, **ಹೊಳೆಸಾಲು:** ಅಧ್ಯಕ್ಷ–ಪರಿಶಿಷ್ಟ ಪಂಗಡ ಮಹಿಳೆ, ಉಪಾಧ್ಯಕ್ಷ–ಸಾಮಾನ್ಯ, **ಕಲಿಯೂರು:** ಅಧ್ಯಕ್ಷ–ಪರಿಶಿಷ್ಟ ಜಾತಿ ಮಹಿಳೆ, ಉಪಾಧ್ಯಕ್ಷ–ಸಾಮಾನ್ಯ, **ಟಿ.ದೊಡ್ಡಪುರ:** ಅಧ್ಯಕ್ಷ–ಪರಿಶಿಷ್ಟ ಜಾತಿ, ಉಪಾಧ್ಯಕ್ಷ–ಸಾಮಾನ್ಯ ಮಹಿಳೆ, **ಹೆಮ್ಮಿಗೆ:** ಅಧ್ಯಕ್ಷ ಪರಿಶಿಷ್ಟ ಜಾತಿ ಮಹಿಳೆ, ಉಪಾಧ್ಯಕ್ಷ –ಸಾಮಾನ್ಯ **ಮಾದಾಪುರ:** ಅಧ್ಯಕ್ಷ–ಸಾಮಾನ್ಯ, ಉಪಾಧ್ಯಕ್ಷ–ಎಸ್‌ಸಿ ಮಹಿಳೆ, **ಕೊತ್ತೆಗಾಲ:** ಅಧ್ಯಕ್ಷ–ಸಾಮಾನ್ಯ ಮಹಿಳೆ, ಉಪಾಧ್ಯಕ್ಷ–ಎಸ್.ಸಿ, **ಮೂಗೂರು:** ಅಧ್ಯಕ್ಷ –ಪರಿಶಿಷ್ಟ ಪಂಗಡ, ಉಪಾಧ್ಯಕ್ಷ–ಸಾಮಾನ್ಯ ಮಹಿಳೆ, **ವಾಟಾಳು :** ಅಧ್ಯಕ್ಷ–ಸಾಮಾನ್ಯ, ಉಪಾಧ್ಯಕ್ಷ–ಸಾಮಾನ್ಯ ಮಹಿಳೆ, **ಕರೋಹಟ್ಟಿ :** ಅಧ್ಯಕ್ಷ–ಪರಿಶಿಷ್ಟ ಜಾತಿ ಮಹಿಳೆ, ಉಪಾಧ್ಯಕ್ಷ–ಸಾಮಾನ್ಯ **ಕಿರಗಸೂರು:** ಅಧ್ಯಕ್ಷ ಪರಿಶಿಷ್ಟ ಜಾತಿ, ಉಪಾಧ್ಯಕ್ಷ–ಸಾಮಾನ್ಯ ಮಹಿಳೆ, **ಗರ್ಗೇಶ್ವರಿ:** ಅಧ್ಯಕ್ಷ–ಸಾಮಾನ್ಯ ಮಹಿಳೆ, ಉಪಾಧ್ಯಕ್ಷ –ಪರಿಶಿಷ್ಟ ಜಾತಿ, **ಹೊಸಕೋಟೆ (ಕೆಂಪಯ್ಯನ ಹುಂಡಿ):** ಅಧ್ಯಕ್ಷ– ಸಾಮಾನ್ಯ ಮಹಿಳೆ, ಉಪಾಧ್ಯಕ್ಷ –ಎಸ್ ಟಿ ಮಹಿಳೆ, **ತುಂಬಲ:** ಅಧ್ಯಕ್ಷ–ಸಾಮಾನ್ಯ, ಉಪಾಧ್ಯಕ್ಷ –ಎಸ್‌ಸಿ ಮಹಿಳೆ, **ಕುಪ್ಯಾ:** ಅಧ್ಯಕ್ಷ–ಪರಿಶಿಷ್ಟ ಪಂಗಡ, ಉಪಾಧ್ಯಕ್ಷ–ಸಾಮಾನ್ಯ ಮಹಿಳೆ **ರಂಗಸಮುದ್ರ :** ಅಧ್ಯಕ್ಷ–ಪರಿಶಿಷ್ಟ ಜಾತಿ ಮಹಿಳೆ, ಉಪಾಧ್ಯಕ್ಷ–ಹಿಂದುಳಿದ ವರ್ಗ ಎ.

ಗೋವಿಂದಯ್ಯ ನಿಧನ



ಹುಣಸೂರು, ಜೂ.21(ಕೆಕೆ)– ತಾಲೂಕಿನ ಹನಗೂಡು ಹೋಬಳಿ ಬೀರನಹಳ್ಳಿ ಗ್ರಾಮದ ದಲಿತ ಸಂಘರ್ಷ ಸಮಿತಿಯ ಮಾರ್ಗದರ್ಶಕರು ಹಾಗೂ ಹೋರಾಟಗಾರರಾದ ಗೋವಿಂದಯ್ಯ(60) ಅನಾರೋಗ್ಯದಿಂದ ನಿನ್ನೆ ನಿಧನರಾಗಿದ್ದು ಇಂದು ಅಂತ್ಯಕ್ರಿಯೆ ನಡೆಯಿತು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಪತ್ನಿ, ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದ ಮೃತರ ತೋಟದಲ್ಲಿ ಇಂದು ನೆರವೇರಿತು.



ಮೈಸೂರು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಲೋಕನಾಥ್ ನೇಮಕಕ್ಕೆ 'ಹೈ' ತಡೆ



ಮೈಸೂರು, ಜೂ.21(ಬಿಎಲ್‌ಯು)– ಮಹತ್ವದ ಬೆಳವಣಿಗೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಅವರ ನೇಮಕಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ.

ಪ್ರೊ.ಲೋಕನಾಥ್ ಅವರ ವಿರುದ್ಧ ಕ್ರಿಮಿನಲ್ ಪ್ರಕರಣಗಳಿವೆ. ಆದರೂ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಪ್ರೊ.ಲೋಕನಾಥ್ ಅವರನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ನೇಮಕ ಮಾಡಲಾಗಿದೆ. ಅವರ ಈ ನೇಮಕ ಸೂಕ್ತವಲ್ಲ ಎಂದು ಕುಲಪತಿ ರೇಸ್‌ನಲ್ಲಿದ್ದ ಪ್ರೊ.ಶರತ್ ಅವರು ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರು. ಪ್ರೊ. ಶರತ್ ಅವರು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ, ದಿವಂಗತ ಪ್ರೊ. ಯು.ಆರ್.ಅನಂತಮೂರ್ತಿ ಅವರ ಪುತ್ರ. ಪ್ರೊ.ಶರತ್ ಅವರು ದಾಖಲಿಸಿದ್ದ ದಾವೆಯ ವಿಚಾರಣೆ ನಡೆಸಿದ ಹೈಕೋರ್ಟ್‌ನ ಏಕ ಸದಸ್ಯ ಪೀಠ ಪ್ರೊ.ಲೋಕನಾಥ್ ಅವರನ್ನು ಕುಲಪತಿ ಯಾಗಿ ನೇಮಕ ಮಾಡಿದ ಆದೇಶಕ್ಕೆ ತಡೆ ಯಾಜ್ಞೆ ನೀಡಿದೆ. ಈ ಮಧ್ಯೆ ತಾತ್ಕಾಲಿಕ ವ್ಯವಸ್ಥೆ ಯಾಗಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯನ್ನಾಗಿ ಹಿರಿಯ ಡೀನ್ ಒಬ್ಬರನ್ನು ನೇಮಕ ಮಾಡುವ ಸಂಬಂಧ ರಾಜ್ಯಪಾಲರು ನಾಳೆಯೇ ತೀರ್ಮಾನಿಸಲಿದ್ದಾರೆ ಎಂದು ಬಲ್ಲ ಮೂಲಗಳು ತಿಳಿಸಿವೆ. ಮಾ.24 ರಂದು ಹಂಗಾಮಿ ಕುಲಪತಿ ಮುಜಾಫರ್ ಹೆಚ್. ಅಸ್ಸಾದಿ ಅವರಿಂದ ಅಧಿಕಾರ ಸ್ವೀಕರಿಸಿದ್ದ ಪ್ರೊ.ಎನ್.ಕೆ.ಲೋಕನಾಥ್, ಇದುವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಯಾಗಿ ಕಾರ್ಯನಿರ್ವಹಿಸಿದ್ದಾರೆ.



ನಂಜನಗೂಡು ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ, ನಂಜನಗೂಡು

ಸಂಖ್ಯೆ: ಟಿ.ಎ.ಪಿ.ಸಿ.ಎಂ.ಎಸ್.ಲಿ/ನಂ.ಗೂಡು/2023–24 ದಿನಾಂಕ: 20–06–2023


ಬಹಿರಂಗ ಹರಾಜು ಪ್ರಕಟಣೆ

ನಂಜನಗೂಡು ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ, ನಂಜನಗೂಡು ವತಿಯಿಂದ ನಂಜನಗೂಡು ಟೌನ್‌ನ ಟಿ.ಎ.ಪಿ.ಸಿ.ಎಂ.ಎಸ್.ಲಿ, ಗೋದಾಮು ಹಿಂಭಾಗದಲ್ಲಿ ರಚಿಸಿರುವ ಬಡಾವಣೆಯಲ್ಲಿ ನಿವೇಶನಗಳನ್ನು ದಿನಾಂಕ:04–07–2023ರಂದು ಬೆಳಗ್ಗೆ 11.30 ಘಂಟೆಗೆ ಸಂಘದ ಆವರಣದಲ್ಲಿ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ಈ ಹರಾಜನ್ನು ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರುರವರ ಅನುಮತಿ ಆದೇಶ ಕ್ರಮಾಂಕ:ಎಂ.ಕೆ.ಟಿ.1/86/ಎಂ.ಸಿ.ಎಸ್/2003–04: ದಿನಾಂಕ:08–11–2005 ಮತ್ತು ಸಹಕಾರ ಸಂಘಗಳ ಉಪನಿಬಂಧಕರು, ಮೈಸೂರು ಜಿಲ್ಲೆ ಮೈಸೂರುರವರ ಅನುಮತಿ ಪತ್ರ ಸಂಖ್ಯೆ:ಉನಿಮೈ/ಸಿ–8/ ಟಿ.ಎ.ಪಿ.ಸಿ.ಎಂ.ಎಸ್.ಲಿ/ಸಿ–ಆರ್/2023–24, ದಿನಾಂಕ:15–06–2023 ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಮೈಸೂರು, ಮೈಸೂರುರವರ ಬಿಡುಗಡೆ ಆದೇಶ ಸಂಖ್ಯೆ: ಮೈ.ನ.ಪ್ರಾ/ಪಿ.ಬಿ./ಖಾ.ಬ/254/2009–10: ದಿನಾಂಕ:21–11–2009ರ ರೀತ್ಯಾ ನಡೆಸಲಾಗುವುದು. ಸದರಿ ಹರಾಜಿ ನಲ್ಲಿ ಭಾಗವಹಿಸಲು ಇಚ್ಛಿಸುವವರು ರೂ.15,000/– (ರೂಪಾಯಿ ಹದಿನೈದು ಸಾವಿರಗಳು ಮಾತ್ರ)ಗಳನ್ನು ಹರಾಜು ಠೇವಣಿಯಾಗಿ ನಗದು ರೂಪದಲ್ಲಿ ಸಂಘಕ್ಕೆ ಹರಾಜು ನಡೆಯುವ ದಿನದಂದು ಬೆಳಗ್ಗೆ 11.30 ಗಂಟೆಯೊಳಗೆ ಮುಂಗಡವಾಗಿ ಪಾವತಿ ಮಾಡಬೇಕು. ಅತ್ಯಂತ ಹೆಚ್ಚಿಗೆ ಬಿಡ್ಡು ಮಾಡಿದವರು ಸ್ಥಳದಲ್ಲಿಯೇ ಬಿಡ್ ಮಾಡಿದ ಮೊಬಲಗಿನ ಪೈಕಿ ಶೇ.25%ರಷ್ಟು ಹಣವನ್ನು ಸಂಘಕ್ಕೆ ನಗದಾಗಿ/RTGS ಮೂಲಕ ಪಾವತಿ ಮಾಡಬೇಕು. ಆಸಕ್ತಿಯುಳ್ಳವರು ಹರಾಜಿಗೆ ಸೂಚಿಸಿರುವ ನಿವೇಶನಗಳನ್ನು ಮುಂಚಿತವಾಗಿಯೇ ಸಂಘದ ಕಛೇರಿಯ ಸಿಬ್ಬಂದಿಯ ಸಹಾಯದೊಡನೆ ನೋಡಬಹುದಾಗಿರುತ್ತದೆ. ಹರಾಜಿಗೆ ನಿಗಧಿಗೊಳಪಡಿಸಿರುವ ನಿವೇಶನಗಳ ವಿವರ ಈ ಕೆಳಕಂಡಂತಿದೆ.

ಹರಾಜು ದಿನಾಂಕ : 04–07–2023, ಸಮಯ ಬೆಳಗ್ಗೆ 11.30 ಗಂಟೆಗೆ, ಸಂಘದ ಆವರಣದಲ್ಲಿ

ನಿವೇಶನಗಳ ವಿವರ


ಕ್ರ.ಸಂ.	ನಿವೇಶನದ ಸಂಖ್ಯೆ	ಅಳತೆ		ಚೌತರ್ಫು				ವಿಸ್ತೀರ್ಣ ಚ.ಮೀ.
		ಉ–ದ	ಪೂ–ಪ	ಉತ್ತರ	ದಕ್ಷಿಣ	ಪೂರ್ವ	ಪಶ್ಚಿಮ	
1	22	9	12	23	21	27	ರಸ್ತೆ	108
2	23	9	12	24	22	26	ರಸ್ತೆ	108
3	26	9	12	25	27	ರಸ್ತೆ	23	108
4	27	9	12	26	28	ರಸ್ತೆ	22	108
5	28	9	12	27	29	ರಸ್ತೆ	21	108
6	29	9	12	28	30	ರಸ್ತೆ	20	108
7	30	9	12	29	31	ರಸ್ತೆ	19	108
8	31	9	12	30	32	ರಸ್ತೆ	18	108
9	32	9	12	31	33	ರಸ್ತೆ	17	108
10	33	9	12	32	34	ರಸ್ತೆ	16	108
11	34	9	12	33	35	ರಸ್ತೆ	15	108
12	35	9	12	34	36	ರಸ್ತೆ	14	108
13	73	12	16.67	72	74	ರಸ್ತೆ	66	200.04




ಷರತ್ತುಗಳು

1. ಹರಾಜನ್ನು ಸಂಘದ ಆವರಣದಲ್ಲಿ ದಿನಾಂಕ:04–07–2023ರಂದು ಬೆಳಗ್ಗೆ 11.30 ಗಂಟೆಗೆ ನಡೆಸಲಾಗುವುದು.
2. ಹರಾಜಿನಲ್ಲಿ ಭಾಗವಹಿಸುವವರು ಸಂಘದಿಂದ ಒದಗಿಸುವ ನಿಗಧಿತ ನಮೂನೆಯಲ್ಲಿ ಅರ್ಜಿ ಭರ್ತಿ ಮಾಡಿ ಹರಾಜಿಗೆ ನಿಗಧಿಗೊಳಿಸಿರುವ ನಿಗಧಿತ ಸಮಯಕ್ಕೆ ಕನಿಷ್ಠ ಅರ್ಧ ಗಂಟೆ ಮುಂಚಿತವಾಗಿ ಸಂಘಕ್ಕೆ ಸಲ್ಲಿಸಬೇಕು. ಯಾವುದೇ ರೀತಿಯ ಜಿ.ಪಿ.ಎ.ದಾರರು ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಹರಾಜಿನಲ್ಲಿ ಭಾಗವಹಿಸುವವರು ತಮ್ಮ ಇತ್ತೀಚಿನ ಎರಡು (2) ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ತಮ್ಮ ವಾಸದ ಬಗ್ಗೆ ದೃಢೀಕರಣ ಅಂದರೆ, (ಚುನಾವಣಾ ಗುರುತಿನ ಚೀಟಿ ಆಧಾರ್ ಕಾರ್ಡ್) ನೋಟರಿ ಅಥವಾ ಪತ್ರಾಂಕಿತ ಅಧಿಕಾರಿಯಿಂದ ದೃಢೀಕರಿಸಿದ ದಾಖಲೆಗಳನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು. ಸದರಿ ಅರ್ಜಿಯೊಡನೆ ನಿಗಧಿತ ಹರಾಜು ಠೇವಣಿ ಪಾವತಿಸಿ ಸಲ್ಲಿಸಬೇಕು.
3. ಸಂಘದ ನಿವೇಶನಗಳ ಹರಾಜಿನಲ್ಲಿ ಭಾಗವಹಿಸುವವರು ಒಂದು ಬಾರಿ ಟೋಕನ್ ಪಡೆದು, ಹರಾಜಿನಲ್ಲಿ ಭಾಗವಹಿಸಿ, ನಿವೇಶನಕ್ಕೆ ನಿಗಧಿಪಡಿಸಿದ ಹೆಚ್ಚಿನ ಬಿಡ್ಡುದಾರರಾಗಿ ಅರ್ಹರಾದಲ್ಲಿ ಅಂತಹವರು ಮತ್ತೊಂದು ನಿವೇಶನದ ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.
4. ಸಂಘದ ನಿವೇಶನಗಳ ಹರಾಜಿನಲ್ಲಿ ಭಾಗವಹಿಸಲು ಇಚ್ಛಿಪಡುವವರು ಸಂಘದಲ್ಲಿ ಬೆಳಗ್ಗೆ 10.00 ರಿಂದ 11.30 ಗಂಟೆಯೊಳಗೆ ಟೋಕನ್‌ಗಳನ್ನು ಪಡೆದುಕೊಳ್ಳತಕ್ಕದ್ದು, ನಿಗಧಿಪಡಿಸಿದ ಅವಧಿಯ ನಂತರ ಬಂದ ಹರಾಜುದಾರರ ಭಾಗವಹಿಸುವಿಕೆಯನ್ನು ತಿರಸ್ಕರಿಸುವ ಅಧಿಕಾರವನ್ನು ಸಂಘವು ಹೊಂದಿರುತ್ತದೆ.
5. ಅತ್ಯಧಿಕ ಮೊತ್ತದ ಬಿಡ್‌ದಾರರು ಬಿಡ್‌ನ ಮೊತ್ತದ ಶೇ.25% ಹಣವನ್ನು ಸ್ಥಳದಲ್ಲಿಯೇ ನಗದು/RTGS ಮೂಲಕ ಬಿಡ್ ನಡೆದ ದಿನದಂದು ಪಾವತಿ ಮಾಡಬೇಕು. ಪಾವತಿ ಮಾಡಲು ವಿಫಲರಾದಲ್ಲಿ ಹರಾಜು ಠೇವಣಿಯಾಗಿ ಪಾವತಿಸಲಾಗಿರುವ ರೂ.15,000/– ಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
6, ಅತ್ಯಧಿಕ ಮೊತ್ತದ ಬಿಡ್‌ದಾರರು ಹರಾಜು ನಡೆದ ಏಳು(7) ದಿನದೊಳಗೆ 2ನೇ ಕಂತಿನ ಶೇ.25%ರಷ್ಟು ಹಣವನ್ನು ಸಂಘಕ್ಕೆ ಪಾವತಿ ಮಾಡಬೇಕು. ಮಾರಾಟದ ದೃಢೀಕರಣವನ್ನು ನೀಡಿದ ದಿನದಿಂದ 30 ದಿನಗಳೊಳಗೆ ಉಳಿದ ಶೇ.50%ರಷ್ಟು ಪೂರ್ತಿ ಹಣವನ್ನು ಪಾವತಿಸತಕ್ಕದ್ದು.
7. ಈ ಹರಾಜು ಮಾರಾಟವು ಟಿ.ಎ.ಪಿ.ಸಿ.ಎಂ.ಎಸ್.ಲಿ., ನಂಜನಗೂಡು ಷರತ್ತಿಗೆ ಒಳಪಟ್ಟಿರುತ್ತದೆ. ಬಿಡ್‌ನ್ನು ಒಪ್ಪುವ, ಯಾವುದೇ ಕಾರಣವನ್ನು ನೀಡದೇ ತಿರಸ್ಕರಿಸುವ ಹಕ್ಕನ್ನು ಆಡಳಿತ ಮಂಡಳಿಯು ಕಾಯ್ದಿರಿಸಿ ಕೊಂಡಿರುತ್ತದೆ.
8. ಹರಾಜಿಗಾಗಿ ಇಡಲಾಗಿರುವ ನಿವೇಶನಗಳನ್ನು ಹರಾಜಿಗಿಂತ ಮುಂಚಿತವಾಗಿ ಸಾರ್ವಜನಿಕರು ವೀಕ್ಷಿಸಬಹುದು. ಹೆಚ್ಚಿನ ಮಾಹಿತಿ ಪಡೆಯಲು ಸಂಘದ ಕಛೇರಿ ವೇಳೆಯಲ್ಲಿ ಸಂಘದ ಕಾರ್ಯದರ್ಶಿರವರನ್ನು ಸಂಘದ ದೂರವಾಣಿ ಸಂಖ್ಯೆ: 08221–226214ರಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/– ಅಧ್ಯಕ್ಷರು, ಟಿ.ಎ.ಪಿ.ಸಿ.ಎಂ.ಎಸ್.ಲಿ., ನಂಜನಗೂಡು
ಸಹಿ/– ಉಪಾಧ್ಯಕ್ಷರು, ಟಿ.ಎ.ಪಿ.ಸಿ.ಎಂ.ಎಸ್.ಲಿ., ನಂಜನಗೂಡು
ಸಹಿ/– ಪ್ರಭಾರ ಕಾರ್ಯದರ್ಶಿ, ಟಿ.ಎ.ಪಿ.ಸಿ.ಎಂ.ಎಸ್.ಲಿ., ನಂಜನಗೂಡು







ಆಯುಕ್ತರ ಕಾರ್ಯಾಲಯ, ಮೈಸೂರು ಮಹಾನಗರ ಪಾಲಿಕೆ, ಮೈಸೂರು


ನಂ: ಮೈನಪಾ: ಡಿ.ಸಿ.ಬಿ : 154 ::2021-22 ಕಂದಾಯ ಶಾಖೆ
ದಿನಾಂಕ: 14-06-2023

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಇ–ಆಸ್ತಿ ತಂತ್ರಾಂಶವನ್ನು ಸರಳೀಕರಣಗೊಳಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಕೆ.ಎಂ.ಎಫ್-24ರ ವಹಿಯ ಗಣಕೀಕರಣ ಕಾರ್ಯಕ್ಕಾಗಿ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಬೆಂಗಳೂರುರವರ ಪತ್ರದ ಸಂಖ್ಯೆ : DMA/DEV/KHATA32/2022. ಸಿ.ಎನ್ 912538, ದಿ: 28-10-2022. ರಲ್ಲಿ ಸುತ್ತೋಲೆಯನ್ನು ಹೊರಡಿಸಿ ಆಸ್ತಿ ತೆರಿಗೆ ಪಾವತಿಸಿರುವುದನ್ನು ಕೆ.ಎಂ.ಎಫ್-24ರ ವಹಿಯಲ್ಲಿ 2002-03 ರಿಂದ 2023-24ನೇ ಸಾಲಿನ ವರೆಗೆ ಪೂರ್ಣ ಪ್ರಮಾಣದಲ್ಲಿ ನಿರ್ವಹಿಸಿ ಆನ್‌ಲೈನ್ ತಂತ್ರಾಂಶದಲ್ಲಿ ಕಾಲೋಚಿ ತಗೊಳಸಲು ಆದೇಶಿಸಲಾಗಿರುತ್ತದೆ. ಅದರಂತೆ ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಆಸ್ತಿ ಮಾಲೀಕರು ತಮ್ಮ ತಮ್ಮ ಆಸ್ತಿಗಳಾದ ಖಾಲಿ ನಿವೇಶನಗಳ, ವಾಸದ ಮನೆಯ, ವಾಣಿಜ್ಯ, ಹಾಗೂ ಇತರೆ ಆಸ್ತಿಗಳಿಗೆ ಸಂಬಂಧಿಸಿದಂತೆ ಇ–ಆಸ್ತಿ ತಂತ್ರಾಂಶವನ್ನು ಸರಳೀಕರಣಗೊಳಿಸುವ ಸಲುವಾಗಿ ಆಸ್ತಿಗಳಿಗೆ ಸಂಬಂಧಿಸಿದ ಈ ಕೆಳಕಂಡ ಸಂಪೂರ್ಣ ದಾಖಲೆಗಳನ್ನು ಮೈಸೂರು ಮಹಾನಗರ ಪಾಲಿಕೆಯ ತಮ್ಮ ವ್ಯಾಪ್ತಿಯ ವಲಯ ಕಛೇರಿಗಳಿಗೆ ನೀಡುವುದು ಅಥವಾ ಮೈಸೂರು ಮಹಾನಗರ ಪಾಲಿಕೆಯ ಸಿಬ್ಬಂದಿ ಅಥವಾ ಪಾಲಿಕೆ ವತಿಯಿಂದ ಗುರುತಿನ ಚೀಟಿಯನ್ನು ನೀಡಿರುವ ಸ್ವಸಹಾಯ ಗುಂಪುಗಳ/ಎನ್.ಜಿ.ಓ. ಪರಿವೀಕ್ಷಕರುಗಳು ತಮ್ಮ ಸ್ವತ್ತುಗಳ ಪರಿವೀಕ್ಷಣೆಯ ಸಂದರ್ಭದಲ್ಲಿ ಸಹಕರಿಸಿ ಕೋರಿರುವ ಸಂಪೂರ್ಣ ದಾಖಲಾತಿಗಳನ್ನು ನೀಡುವುದು.

ಅ) ಆಸ್ತಿಯ ಮಾಲೀಕತ್ವಕ್ಕೆ ಸಂಬಂಧಿಸಿದ ನೋಂದಾಯಿತ ಕ್ರಯ ಪತ್ರ/ದಾನ ಪತ್ರ/ವಿಭಾಗ ಪತ್ರ/ವಿಲ್, ಇತರ ಆಸ್ತಿಗೆ ಸಂಬಂಧಿಸಿದ ದಾಖಲಾತಿಗಳು. ಆ) ಆಸ್ತಿಯ ಜಿ.ಪಿ.ಎಸ್. ಭಾವ ಚಿತ್ರ. ಇ) ಆಸ್ತಿ ಮಾಲೀಕರ ಭಾವ ಚಿತ್ರ. ಈ) ಆಸ್ತಿ ಮಾಲೀಕರ ಗುರುತಿನ ಚೀಟಿ, ಉ) ವಿದ್ಯುತ್‌ಚ್ಛಕ್ತಿ ಆರ್. ಆರ್. ಸಂಖ್ಯೆ. ಊ) ನೀರಿನ ಕಂದಾಯ ರಸೀತಿ. ಋ) 2002-03 ರಿಂದ 2023-24 ರವರೆಗೆ ಕಂದಾಯ ಪಾವತಿಸಿರುವ ಪ್ರತಿಗಳನ್ನು ಸಲ್ಲಿಸುವುದು ಅಥವಾ ಕಛೇರಿಯಲ್ಲಿ ನಮೂದು ಮಾಡಿಸುವುದು. ಎ) ಕಟ್ಟಡ ಪರವಾನಗಿಯ ಪ್ರತಿಯನ್ನು ಸಲ್ಲಿಸುವುದು. ಏ) ಆಸ್ತಿ ಮಾಲೀಕರ ಮೊಬೈಲ್ ಸಂಖ್ಯೆಯನ್ನು ನೀಡುವುದು. ಹಾಗೂ ಹೆಚ್ಚಿನ ವಿವರಗಳಿಗೆ ತಮ್ಮ ವ್ಯಾಪ್ತಿಯ ವಲಯ ಕಛೇರಿಯ ಕಂದಾಯಾಧಿಕಾರಿಗಳು, ಸಹಾಯಕ ಕಂದಾಯಾಧಿಕಾರಿಗಳು ಮತ್ತು ಕಂದಾಯ ಪರಿಶೀಲಕರುಗಳನ್ನು ಸಂಪರ್ಕಿಸಿ ಕಛೇರಿ ವೇಳೆಯಲ್ಲಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/– ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು



ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಮೈಸೂರು ಸಿಟಿ, ವಿದ್ಯಾರಣ್ಯಪುರಂ, ಸಾರ್ವಜನಿಕ ಹಾಸ್ಟೆಲ್ ರಸ್ತೆ, 4ನೇ ಮೇನ್, 4ನೇ ಕ್ರಾಸ್, ಮನೆ ನಂ.3529, ರಲ್ಲಿ ವಾಸವಾಗಿರುವ ಲೇಟ್. ವೆಂಕಟಯ್ಯ ರವರ ಮಗನಾದ ಸುಮಾರು 50 ವರ್ಷ ವಯಸ್ಸಿನ ಶ್ರೀ. ವೆಂಕಟೇಶ್ ರವರ ಇರಾದೆಯ ಮೇರೆಗೆ ಪ್ರಕಟಿಸುತ್ತಿರುವ ಈ ಸಾರ್ವಜನಿಕ ಪ್ರಕಟಣೆಯ ಕ್ರಮವೇನೆಂದರೆ,

ಆದಾಗಿ, ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಮಂಡಕಳ್ಳಿ ಗ್ರಾಮದ ಹರಿಜನರ ಬೀದಿ, ಮನೆ ನಂ.434ರಲ್ಲಿ ವಾಸವಾಗಿರುವ ಶಿವಣ್ಣ, ಇವರ ಧರ್ಮಪತ್ನಿಯಾದ ಭಾಗ್ಯಮ್ಮ ಮತ್ತು ಇವರ ಮಕ್ಕಳುಗಳಾದ ಉಮೇಶ ಹಾಗೂ ವಿಕಾಸ್ ಇವರುಗಳಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿರುತ್ತಾರೆ. ಆದುದರಿಂದ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಬೇರೆ ಯಾರಿಗಾದರೂ ಹಕ್ಕು, ಅಧಿಕಾರ, ಹಿತಾಸಕ್ತಿ, ಹೆಣ್ಣು ಮಕ್ಕಳ ಭಾಗಾಂಶ, ಅಡಮಾನ, ಇತ್ಯಾದಿ ಇದ್ದಲ್ಲಿ, ಈ ಪ್ರಕಟಣೆ ಹೊರಡಿಸಿದ 10 ದಿನಗಳ ಒಳಗಾಗಿ ತಮ್ಮ ತಂಟೆ ತಕರಾರನ್ನು ಲಿಖಿತ ರೂಪದಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಯಾವುದೇ ತಂಟೆ ತಕರಾರು, ಹಕ್ಕುಭಾಧ್ಯತೆ ಹಾಗೂ ಅಭ್ಯಂತರವಿರುವಿದಿಲ್ಲವೆಂದು ತಿಳಿದು ನಮ್ಮ ಕಕ್ಷಿದಾರರು ಕ್ರಯಪತ್ರವನ್ನು ಬರೆಸಿ ನೋಂದಣಿ ಮಾಡಿಸಿಕೊಳ್ಳುತ್ತಾರೆ. ಒಂದು ವೇಳೆ ಈ ನಿಗಧಿತ ಅವಧಿಯ ನಂತರ ಮತ್ತು ನನ್ನ ಕಕ್ಷಿದಾರರು ಕ್ರಯಪತ್ರವನ್ನು ಬರೆಸಿಕೊಂಡ ನಂತರ ಬರುವಂತಹ ಯಾವುದೇ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್:ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ಮುಳ್ಳೂರು ಗ್ರಾಮದ ಸರ್ವೆ ನಂ.95/1 ರಲ್ಲಿ ವಿಸ್ತೀರ್ಣ 37 ಗುಂಟೆ ಜಮೀನಿಗೆ ಚಕ್ಕುಬಂಧಿ : ಪೂರ್ವಕ್ಕೆ : ರವಿಕುಮಾರ್‌ರವರ ಜಮೀನು ಪಶ್ಚಿಮಕ್ಕೆ :ಕೃಷ್ಣರವರ ಜಮೀನು, ಉತ್ತರಕ್ಕೆ : ರಂಗಸ್ವಾಮಿರವರ ಜಮೀನು, ದಕ್ಷಿಣಕ್ಕೆ : ಹುಲ್ಲಹಳ್ಳಿ ನಾಲಾ ಏರಿ

Sd/- H.S. KUMAR, B.A.L, LL.B. ADVOCATE, LAW LEXICON ASSOCIATES Off.: # 1411, 1st Floor, 6th Cross Thyagaraja Road, K.R. Mohalla Mysuru - 570 004, Mob: 9448797546